ಸಂಪುಟ: 13 Volume | ಸಂಚಿಕೆ: 320 Issue | ಪುಟಗಳು 08 Pages | ಮಂಗಳವಾರ 10 ಫೆಬ್ರವರಿ 2026 | ₹6 | PRGINO.120927 (RNINO:KARKAN/2011/48371) | BDR/054/2026-2027 | www.mallammanudi.in | mallammanudi@gmail.com | 9448604450

ಬೀದರ | ಕಲ್ಬುರ್ಗಿ | ಯಾದಗಿರಿ | ರಾಯಚೂರು | ಕೊಪ್ಪಳ | ಬಳ್ಳಾರಿ | ಬಾಗಲಕೋಟೆ | ವಿಜಯನಗರ & ವಿಜಯಪುರ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಪ್ರಕಟ

# ಮಲ್ಲಮ್ಮ ನುಡಿ

ಕನ್ನಡ ಕಿರಣ

Mallammanudi Regional News Paper
ಪ್ರಾದೇಶಿಕ ಕನ್ನಡ ದೈನಿಕ

ಸಂಪಾದಕರು: ರಮೇಶ ರೆಡ್ಡಿ

**ಬೆಳಗು**

ಬಹಳಷ್ಟು ಜನರಿಗೆ ಸ್ವಾತಂತ್ರ್ಯ ಬೇಕಿಲ್ಲ. ಏಕೆಂದರೆ ಸ್ವಾತಂತ್ರ್ಯದ ಜತೆಗೆ ಜವಾಬ್ದಾರಿಯು ಇರುತ್ತದೆ. ಬಹಳಷ್ಟು ಜನ ಜವಾಬ್ದಾರಿಯ ಬಗ್ಗೆ ಭಯ ಹೊಂದಿದ್ದಾರೆ.

–ಸಿಗ್ಮಂಡ್ ಫ್ರಾಯ್ಡ್

ನಾಡಹಬ್ಬದಂತೆ ಸಿಡಿಬಿಂಡಿ ರಥೋತ್ಸವ: ಭರತ್ ರೆಡ್ಡಿ 6

ಸಂಭ್ರಮದ ಹುಚ್ಚೇಶ್ವರ ಮಹಾರಥೋತ್ಸವ 7

ಪ್ರಾಣಿ ಸಂಗ್ರಹಾಲಯ ಪ್ರಿಯಾಂಕ್ ಕನಸು ನನಸು 8

## ಕೆನಡಾದಲ್ಲಿ ಗುಂಡಿಗೆ ಕನ್ನಡಿಗ ಬಲಿ



**ಬೆಂಗಳೂರು:** ಕೆನಡಾದಲ್ಲಿ ನಡೆದ ಗುಂಡಿನ ದಾಳಿಗೆ ಕರ್ನಾಟಕ ಮೂಲದ ಯುವಕನೊಬ್ಬ ಬಲಿಯಾಗಿದ್ದಾನೆ. ಬೆಂಗಳೂರಿನ ನೆಲಮಂಗಲ ಮೂಲದ ಚಂದನ್ ಕುಮಾರ್(37) ಮೃತನು. ಚಂದನ್ ಕುಮಾರ್ ಬೆಂಗಳೂರಿನ ನೆಲಮಂಗಲ ಮೂಲದ ತ್ಯಾಮಗೊಂಡ್ಲುವಿನ ನಿವಾಸಿ. 6 ವರ್ಷಗಳಿಂದ ಚಂದನ್ ಕುಮಾರ್ ಕೆನಡಾದಲ್ಲಿ ಖಾಸಗಿ ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿದ್ದರು. ಭಾನುವಾರ ರಾತ್ರಿ 9 ಗಂಟೆಗೆ ಕಾರಿನಲ್ಲಿ ತೆರಳುತ್ತಿದ್ದ ವೇಳೆ ಚಂದನ್ ಕುಮಾರ್ ಮೇಲೆ ದುಷ್ಕರ್ಮಿಗಳು ಗುಂಡಿನ ದಾಳಿ ನಡೆಸಿದ್ದಾರೆ. ಚಂದನ್ ಬ್ರಾಂಪ್ಟನ್‌ನಲ್ಲಿರುವ ಶಿರಡಿ ಸಾಯಿಬಾಬಾ ದೇವಾಲಯದ ಸಕ್ರಿಯ ಸದಸ್ಯರಾಗಿದ್ದರು.

## ಅಪಘಾತದಲ್ಲಿ 2 ಸಾವು,9 ಗಾಯ

**ತುಮಕೂರು:** ಕುಣಿಗಲ್ ರಾಜ್ಯ ಹೆದ್ದಾರಿಯ ಬಾಣಾವರ ಗೇಟ್ ಸಮೀಪದ ನಾಗವಳ್ಳಿ ಗ್ರಾಮ ಬಳಿ ನಡೆದ ಸರಣಿ ರಸ್ತೆ ಅಪಘಾತದಲ್ಲಿ ಇಬ್ಬರು ಮೃತಪಟ್ಟಿದ್ದು, ಡಿವೈಎಸ್ಪಿ ಸೇರಿ ಒಂಬತ್ತು ಮಂದಿ ಗಾಯಗೊಂಡಿದ್ದಾರೆ. ಯಾದವನಗರದ ರಿಯಲ್ ಎಸ್ಟೇಟ್ ಉದ್ಯಮಿ ಸುರೇಶ್ (55), ಅಶೋಕನಗರದ ಗುತ್ತಿಗೆದಾರ ಮುರಳಿ (60) ಮೃತರು. ಘಟನೆಯಲ್ಲಿ ಡಿವೈಎಸ್ಪಿ ರಾಮಕೃಷ್ಣಪ್ಪ ಸೇರಿ 9 ಮಂದಿ ಗಾಯಗೊಂಡಿದ್ದು, ಗಾಯಾಳುಗಳಿಗೆ ಜಿಲ್ಲಾ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗಿದೆ.

## ಲೋಕ ಸಭೆ ಕಲಾಪ ಮುಂದೂಡಿಕೆ



**ನವದೆಹಲಿ:** ಕೇಂದ್ರ ಬಜೆಟ್ ಮೇಲಿನ ಚರ್ಚೆ ಆರಂಭವಾಗುವ ಮೊದಲು ವಿರೋಧ ಪಕ್ಷದ ನಾಯಕ(ಎಲ್‌ಒಪಿ) ರಾಹುಲ್ ಗಾಂಧಿ ಮಾತನಾಡಲು ಅವಕಾಶ ನೀಡಬೇಕೆಂಬ ಬೇಡಿಕೆಗೆ ಸಂಬಂಧಿಸಿದಂತೆ ಸರ್ಕಾರ ಮತ್ತು ಪ್ರತಿ ಪಕ್ಷದ ನಡುವೆ ತೀವ್ರ ಗದ್ದಲ ಉಂಟಾದ ಕಾರಣ ಲೋಕಸಭೆ ಕಲಾಪವನ್ನು ನಾಳೆಗೆ ಮುಂದೂಡಲಾಗಿದೆ. ಪ್ರತಿಪಕ್ಷಗಳು ರಾಜ್ಯಸಭೆಯ ಪ್ರತಿಪಕ್ಷ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರಿಗೆ ಮಾತನಾಡಲು ಅವಕಾಶ ನೀಡದ ವಿಷಯವನ್ನು ಪ್ರಸ್ತಾಪಿಸಿ ಸಭಾತ್ಯಾಗ ಮಾಡಿದ್ದಾರೆ.

## ಪುರಾತನ ಅಸ್ಥಿ ಪಂಜಗರಗಳು ಪತ್ತೆ

**ಬಳ್ಳಾರಿ:** ಬಳ್ಳಾರಿ ಜಿಲ್ಲೆಯ ತೆಕ್ಕಲಕೋಟೆ ಪಟ್ಟಣದ ಗೌಡ್ರ ಮೂಲೆ ಬೆಟ್ಟ ಪ್ರದೇಶದಲ್ಲಿ ನಡೆಯುತ್ತಿರುವ ಉತ್ಖನನ ಹಾಗೂ ಶೋಧನಾ ಕಾರ್ಯದಲ್ಲಿ ಎರಡು ಪುರಾತನ ಮಾನವ ಅಸ್ಥಿಪಂಜರಗಳು ಪತ್ತೆಯಾಗಿವೆ. ಅಮೆರಿಕಾದ ಹಾರ್ಟ್ವಿಕ್ ಕಾಲೇಜಿನ ಪ್ರಾಧ್ಯಾಪಕಿ ಹಾಗೂ ಯೋಜನೆಯ ಸಹ ನಿರ್ದೇಶಕಿ ಡಾ. ನಮಿತಾ ಎಸ್ ಸುಗಂಧಿ ನೇತೃತ್ವದ ತಂಡ ಈ ಉತ್ಖನನ ಕಾರ್ಯ ನಡೆಸುತ್ತಿದೆ. ಕಳೆದ ವಾರ ಮಣ್ಣಿನೊಳಗೆ ಮಾನವ ಎಲುಬುಗಳು ಕಂಡುಬಂದಿದ್ದು, ನಂತರ ಶೋಧ ಕಾರ್ಯ ಮುಂದುವರೆಸಲಾಗಿತ್ತು.

## ಸಿಎಂ ಹೆಲಿಕಾಪ್ಟರ್ ಲ್ಯಾಂಡಿಂಗ್ ಗೊಂದಲ

• ಮಲ್ಲಮ್ಮ ನುಡಿ ವಾರ್ತೆ ಲಿಂಗಸುಗೂರು

ಸಿಎಂ ಸಿದ್ದರಾಮಯ್ಯ ಪ್ರಯಾಣಿಸುತ್ತಿದ್ದ ಹೆಲಿಕಾಪ್ಟರ್‌ನ ಪೈಲಟ್ ಮಾಡಿದ ಎಡವಟ್ಟು ಗೊಂದಲಕ್ಕೆ ಕಾರಣವಾಯಿತು. ಸಿಎಂ ಅವರಿದ್ದ ಹೆಲಿಕಾಪ್ಟರ್ ನಿಗದಿತ ಹೆಲಿಪ್ಯಾಡ್‌ಗೆ ಬದಲಾಗಿ ಬೇರೆ ಹೆಲಿಪ್ಯಾಡ್‌ನಲ್ಲಿ ಲ್ಯಾಂಡಿಂಗ್ ಆಯಿತು.

ವಿಧಾನಪರಿಷತ್ ಸದಸ್ಯ ಶರಣಗೌಡ ಪಾಟೀಲ ಬಯ್ಯಾಪುರ ಅವರ ಪುತ್ರನ ಮದುವೆಗಾಗಿ ಬರುತ್ತಿದ್ದರು. ಸಿಎಂ, ಡಿಸಿಎಂ, ಸಚಿವರಿಗೆ ಪ್ರತ್ಯೇಕ ಹೆಲಿಪ್ಯಾಡ್ ನಿಗದಿಪಡಿಸಲಾಗಿತ್ತು. ರಾಯಚೂರು ರಸ್ತೆಯಲ್ಲಿರುವ ಶ್ರೀನಿವಾಸ್ ಲೇಔಟ್‌ನಲ್ಲಿ ಸಿಎಂ, ಡಿಕೆಶಿವಕುಮಾರ್ ಅವರ ಹೆಲಿಕಾಪ್ಟರ್‌ಗಳು ಇಳಿಯಲು ಹೆಲಿಪ್ಯಾಡ್ ಸಿದ್ಧಪಡಿಸಲಾಗಿತ್ತು. ಆದರೆ ಗೊಂದಲಕ್ಕೆ ಒಳಗಾಗಿ ಮುಖ್ಯಮಂತ್ರಿ, ಸತೀಶ್ ಜಾರಕಿಹೊಳಿ ಅವರಿದ್ದ ಹೆಲಿಕಾಪ್ಟರ್‌ಗೆ ನಿಗದಿಪಡಿಸಿದ್ದ ಹೆಲಿಪ್ಯಾಡ್‌ನಲ್ಲಿ ಇಳಿಸಿದ್ದೇ ಗೊಂದಲಕ್ಕೆ ಕಾರಣ.



## ಆರೆಸ್ಸೆಸ್ ಕಾರ್ಯಕ್ರಮದಲ್ಲಿ ಸಲ್ಮಾನ್

**ಮುಂಬೈ:** ರಾಷ್ಟ್ರೀಯ ಸ್ವಯಂಸೇವಕ ಸಂಘ (ಆರ್‌ಎಸ್‌ಎಸ್) ಹಮ್ಮಿಕೊಂಡಿರುವ ಸಂಘ ಶತಾಬ್ದಿ ಕಾರ್ಯಕ್ರಮ, ಸಮಾಜದ ಎಲ್ಲಾ ವರ್ಗಗಳು ಮತ್ತು ಕ್ಷೇತ್ರಗಳನ್ನು ತಲುಪುತ್ತಿದೆ. ಸಂಘದ ಸಿದ್ಧಾಂತ ಮತ್ತು ರಾಷ್ಟ್ರ ನಿರ್ಮಾಣದಲ್ಲಿ ಅದರ ಪಾತ್ರದ ಬಗ್ಗೆ, ಸಮಾಜದ ವಿವಿಧ ವಲಯಗಳೊಂದಿಗೆ ಸಂವಾದ ಆರಂಭಿಸಲಾಗಿದೆ.

ಅದರಂತೆ ನಿನ್ನೆ (ಫೆ.8–ಭಾನುವಾರ) ಮಹಾರಾಷ್ಟ್ರ ರಾಜಧಾನಿ ಮುಂಬೈನಲ್ಲಿ ನಡೆದ ಆರ್‌ಎಸ್‌ಎಸ್ ಶತಮಾನೋತ್ಸವ ಕಾರ್ಯಕ್ರಮ, ಅನೇಕ ಬಾಲಿವುಡ್ ಸೆಲೆಬ್ರಿಟಿಗಳ ಭಾಗವಹಿಸುವಿಕೆಗೆ ಸಾಕ್ಷಿಯಾಯಿತು. ಉಪನ್ಯಾಸ ಕಾರ್ಯಕ್ರಮದಲ್ಲಿ ಖ್ಯಾತ ಬಾಲವುಡ್ ನಟ ಸಲ್ಮಾನ್ ಖಾನ್ ಕೂಡ ಭಾಗವಹಿಸಿ ಗಮನ ಸೆಳೆದಿದ್ದಾರೆ.



# ರೈತರಿಗೆ ಮರಣಶಾಸನ

## ಭಾರತ–ಅಮೆರಿಕ ಒಪ್ಪಂದಕ್ಕೆ ಮುಖ್ಯಮಂತ್ರಿ ಗರಂ | ಪ್ರಧಾನಿ ವಿರುದ್ಧ ಸಿಎಂ ವಾಕ್ಸಮರ

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ಭಾರತದ ಸರಕುಗಳ ಮೇಲಿನ ಸುಂಕವನ್ನು ಶೇ. 18ಕ್ಕೆ ಇಳಿಕೆ ಮಾಡಿರುವ ಅಮೆರಿಕ, ದ್ವಿಪಕ್ಷೀಯ ವ್ಯಾಪಾರ ಒಪ್ಪಂದವನ್ನೂ ಘೋಷಿಸಿದೆ. ಆದರೆ ಈ ಒಪ್ಪಂದದ ಬಗ್ಗೆ ನಾನಾ ಕಡೆ ಭಿನ್ನ ಪ್ರತಿಕ್ರಿಯೆಗಳು ವ್ಯಕ್ತವಾಗುತ್ತಿವೆ. ಹಲವಾರು ತಜ್ಞರು, ಈ ಒಪ್ಪಂದವನ್ನು ಸ್ವಾಗತಿಸಿದ್ದರೆ, ಇನ್ನೂ ಅನೇಕರು ಒಪ್ಪಂದದಿಂದ ಭಾರತೀಯ ರೈತರಿಗೆ ಮೋಸವಾಗಿದೆ ಎಂದು ದೂರುತ್ತಿದ್ದಾರೆ.

**ಮುಖ್ಯಮಂತ್ರಿ ವಿರೋಧ:** ಕರ್ನಾಟಕದ ಮುಖ್ಯಮಂತ್ರಿ ಸಿದ್ದರಾಮಯ್ಯ ಕೂಡ ಭಾರತ–ಅಮೆರಿಕ ವ್ಯಾಪಾರ ಒಪ್ಪಂದವನ್ನು ವಿರೋಧಿಸಿದ್ದು, ಪ್ರಧಾನಮಂತ್ರಿ ನರೇಂದ್ರ ಮೋದಿ ವಿರುದ್ಧ ತೀವ್ರ ವಾಕ್ಸಮರ ನಡೆಸಿದ್ದಾರೆ. ಈ ಕುರಿತು ತಮ್ಮ ಅಧಿಕೃತ ಎಕ್ಸ್ ಅಕೌಂಟ್‌ನಲ್ಲಿ ಸುದೀರ್ಘ ಪೋಸ್ಟ್ ಮಾಡಿರುವ ಸಿದ್ದರಾಮಯ್ಯ, ಈ ಒಪ್ಪಂದದಿಂದ ಭಾರತದ ರೈತರಿಗೆ ಆಗುವ ನಷ್ಟವನ್ನು ವಿವರವಾಗಿ ಬಿಚ್ಚಿಟ್ಟಿದ್ದಾರೆ.



### ಒಪ್ಪಂದ ಏಕಪಕ್ಷೀಯವಾಗಿ ಜಾರಿ

ದ್ವಿಪಕ್ಷೀಯ ವ್ಯಾಪಾರ ಒಪ್ಪಂದಗಳು ಪರಸ್ಪರ ಸಮಾನ ಗೌರವ ಮತ್ತು ಸಮಾನ ಲಾಭದ ತಳಹದಿಯ ಮೇಲೆ ಜಾರಿಯಾಗಬೇಕು ಎಂದು ಅಭಿಪ್ರಾಯಪಟ್ಟಿರುವ ಸಿದ್ದರಾಮಯ್ಯ, ಡೊನಾಲ್ಡ್ ಟ್ರಂಪ್ ಅವರು ಕೇಂದ್ರ ಸರ್ಕಾರದ ಮೇಲೆ ಒತ್ತಡ ಮತ್ತು ಬೆದರಿಕೆ ಹಾಕುವ ಮೂಲಕ ವ್ಯಾಪಾರ ಒಪ್ಪಂದವನ್ನು ಏಕಪಕ್ಷೀಯವಾಗಿ ಜಾರಿಗೊಳಿಸಿದ್ದಾರೆ ಎಂದು ಆರೋಪಿಸಿದ್ದಾರೆ.

### ರೈತರಿಗೆ ಇದು ಹೇಗೆ ಮರಣಶಾಸನ?

- ಅಮೆರಿಕನ್ ವಸ್ತುಗಳ ಮೇಲಿನ ಆಮದು ಸುಂಕ ತೆಗೆದಿರುವುದರಿಂದ, ಭಾರತೀಯ ಮಾರುಕಟ್ಟೆಯಲ್ಲಿ ನಮ್ಮ ರೈತರು ಹೆಚ್ಚಿನ ಸ್ಪರ್ಧೆ ಎದುರಿಸಬೇಕಾಗುತ್ತದೆ ಎಂಬುದು ಸಿಎಂ ಸಿದ್ದರಾಮಯ್ಯನವರ ಆತಂಕವಾಗಿದೆ.
- ಈ ಒಪ್ಪಂದದಿಂದ ಅಮೆರಿಕದ ರೈತರು ಹೆಚ್ಚಿನ ಪ್ರಮಾಣದ ಸಬ್ಸಿಡಿ ಪಡೆಯುತ್ತಾರೆ. ಇಲ್ಲಿನ ಕೃಷಿ ಉತ್ಪನ್ನಗಳಿಗಿಂತ ಕಡಿಮೆ ಬೆಲೆಗೆ ಅಮೆರಿಕ ರೈತರು ತಮ್ಮ ಬೆಳೆಗಳನ್ನು ಮಾರಾಟ ಮಾಡಲಿದ್ದಾರೆ.
- ಉದ್ಯಮ ಸ್ನೇಹಿತ ಅದಾನಿ ಅವರ ರಕ್ಷಣೆ ಮತ್ತು ಜೆಫ್ರಿ ಎಪ್‌ಸ್ಟೈನ್ ಫೈಲ್ಸ್‌ನಲ್ಲಿ ಕಾಣಿಸಿಕೊಂಡಿರುವ ಪ್ರಧಾನಿ, ಸಂಪುಟದ ಸದಸ್ಯರ ಹೆಸರುಗಳಿಂದಾಗಿ ಕೇಂದ್ರ ಸರ್ಕಾರ ದೇಶ ವಿರೋಧಿ ಒಪ್ಪಂದಕ್ಕೆ ಒಪ್ಪಿಕೊಂಡಿದೆ ಎಂದಿದ್ದಾರೆ ಮುಖ್ಯಮಂತ್ರಿ ಸಿದ್ದರಾಮಯ್ಯ.

### ಮೋದಿ ಆಮದು ಸುಂಕ ತೆಗೆದದ್ದು?

ಹಿಂದಿನ ಸರ್ಕಾರಗಳು ಅಮೆರಿಕದಿಂದ ಆಮದಾಗುತ್ತಿರುವ ಕೃಷಿ ಉತ್ಪನ್ನಗಳ ಮೇಲೆ ಹೆಚ್ಚಿನ ಸುಂಕ ವಿಧಿಸುವ ಮೂಲಕ, ಭಾರತದ ರೈತರ ಹಿತಾಸಕ್ತಿಗಳನ್ನು ಕಾಪಾಡಿಕೊಂಡು ಬಂದಿದ್ದವು. ಆದರೆ ಮೋದಿ ಆಮದು ಸುಂಕಗಳನ್ನು ತೆಗೆದುಹಾಕಿ, ಭಾರತದ ಮಾರುಕಟ್ಟೆಗೆ ಅಮೆರಿಕದ ವಸ್ತುಗಳ ಪ್ರವೇಶವನ್ನು ಸುಲಭಗೊಳಿಸಿದೆ. ಇದು ರೈತರನು ದಿವಾಳಿ ಸ್ಥಿತಿಗೆ ತರಲಿದೆ ಎಂದಿದ್ದಾರೆ ಸಿಎಂ.

### ಸಿಎಂ ಪೋಸ್ಟ್‌ನಲ್ಲಿ ಏನಿದೆ?



ಅಮೆರಿಕದೊಂದಿಗೆ ಅನ್ಯಾಯಯುತ ವ್ಯಾಪಾರ ಒಪ್ಪಂದವನ್ನು ಮಾಡಿಕೊಳ್ಳುವ ಮೂಲಕ, ಪ್ರಧಾನಿ ಮೋದಿ ಅವರು ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರಿಗೆ ಶರಣಾಗಿದ್ದಾರೆ. ಭವಿಷ್ಯದಲ್ಲಿ ಈ ಒಪ್ಪಂದ 140 ಕೋಟಿ ಭಾರತೀಯರಿಗೆ, ಮುಖ್ಯವಾಗಿ ದೇಶದ 72 ಕೋಟಿ ರೈತರ ಪಾಲಿಗೆ ಮರಣಶಾಸನ ಖಂಡಿತ ಎಂದು ಸಿದ್ದರಾಮಯ್ಯ ಎಚ್ಚರಿಕೆ ನೀಡಿದ್ದಾರೆ.

ಭಾರತ ಶೇ.40ರಷ್ಟು ತೈಲವನ್ನು ರಷ್ಯಾದಿಂದ ಖರೀದಿಸುತ್ತಿದೆ. ಇದೀಗ ಟ್ರಂಪ್ ಅವರ ಆದೇಶಕ್ಕೆ ತಲೆಬಾಗಿರುವ ಪ್ರಧಾನಿ, ರಷ್ಯಾದಿಂದ ತೈಲ ಖರೀದಿಯನ್ನು ಕೈಬಿಟ್ಟು ಅಮೆರಿಕ, ವೆನಿಜುವೆಲಾ ದೇಶಗಳಿಂದ ತೈಲ ಖರೀದಿಸಲು ಒಪ್ಪಿಕೊಂಡಿದ್ದು ಈ ಒಪ್ಪಂದದ ಮುಖ್ಯಾಂಶ. ಇದು ಭಾರತದ ಶರಣಾಗತಿಗೆ ಸಾಕ್ಷಿ.

–ಸಿದ್ದರಾಮಯ್ಯ, ಮುಖ್ಯಮಂತ್ರಿ

## ಚಾಮುಂಡಿ ಜೆಡಿಎಸ್ ಅಭಿಮಾನಿಗಳ ಕ್ಷೇತ್ರ

• ಮಲ್ಲಮ್ಮ ನುಡಿ ವಾರ್ತೆ ಹಾಸನ



ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದಲ್ಲಿ ದೇವೇಗೌಡರು ಮತ್ತು ಕುಮಾರಣ್ಣನ ಅಭಿಮಾನಿಗಳು ಇರುವ ಕ್ಷೇತ್ರ. ನಮ್ಮನ್ನು ಪ್ರೀತಿಸುವ ದೊಡ್ಡ ವರ್ಗ ಆ ಕ್ಷೇತ್ರದಲ್ಲಿದ್ದಾರೆ ಎಂದು ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷರಾದ ನಿಖಿಲ್ ಕುಮಾರಸ್ವಾಮಿ ತಿಳಿಸಿದ್ದಾರೆ.

ಹಾಸನ ಜಿಲ್ಲೆಯ ಅರಕಲಗೂಡು ಕೆಲಗಳಲೆ ಗ್ರಾಮದಲ್ಲಿ ಶಾಸಕ ಜಿ.ಟಿ. ದೇವೇಗೌಡರ ಬಗ್ಗೆ ಕುಮಾರಣ್ಣ ಹೇಳಿಕೆ ಹಾಗೂ ಚಾಮುಂಡೇಶ್ವರಿ ಕ್ಷೇತ್ರದಿಂದ ಸಾ.ರಾ. ಮಹೇಶ್ ಸ್ಪರ್ಧೆ ವಿಚಾರಕ್ಕೆ ಮಾಧ್ಯಮಗಳ ಪ್ರಶ್ನೆಗೆ ಉತ್ತರಿಸಿದ್ದಾರೆ. ಇವತ್ತಿನ ಕಾಲಘಟ್ಟದಲ್ಲಿ ಇವೆಲ್ಲವನ್ನೂ ಚರ್ಚೆ ಮಾಡುವುದು ಅಪ್ರಸ್ತುತ. ಏನೇ ಬಗೆಹರಿಯಬೇಕಾದರೂ ಕಾಲ ಬರಬೇಕು, ಕಾಲ ನಿರ್ಣಯ ಮಾಡುತ್ತೆ. ಸ್ವಾಭಾವಿಕವಾಗಿ ಸಾರ್ವಜನಿಕ ವಲಯದಲ್ಲಿ ನಿಂತು ಚುನಾಯಿತ ಪ್ರತಿನಿಧಿಗಳು ಚರ್ಚೆ ಮಾಡಿದ ಸಂದರ್ಭದಲ್ಲಿ ಕಾರ್ಯಕರ್ತರಲ್ಲಿ ಸ್ವಲ್ಪ ಇರುಸು ಮುರುಸು ಆಗಿರುವುದು ಸತ್ಯ ಎಂದು ನುಡಿದಿದ್ದಾರೆ.

## ಸಚಿವ ಸಂಪುಟ ದರ್ಜೆ ಪಟ್ಟಿಗೆ ಆಗ್ರಹ

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು



ಕರ್ನಾಟಕದಲ್ಲಿ ಸಚಿವ ಸಂಪುಟ ದರ್ಜೆ ಹೊಂದಿದವರ ಪಟ್ಟಿಯನ್ನು ಮುಖ್ಯ ಕಾರ್ಯದರ್ಶಿ ಬಿಡುಗಡೆ ಮಾಡಬೇಕೆಂದು ವಿಧಾನಪರಿಷತ್ ಪ್ರತಿಪಕ್ಷದ ಮುಖ್ಯ ಸಚೇತಕ ಎನ್.ರವಿಕುಮಾರ್ ಆಗ್ರಹಿಸಿದ್ದಾರೆ.

ಇಂದು ಮಾಧ್ಯಮಗಳ ಜೊತೆ ಮಾತನಾಡಿದ ಅವರು, ಮುಖ್ಯಮಂತ್ರಿಗಳ ರಾಜಕೀಯ ಸಲಹೆಗಾರರು ಇರಬಹುದು, ಹಣಕಾಸು ಸಲಹೆಗಾರರು, ರಾಜಕೀಯ ಕಾರ್ಯದರ್ಶಿ, ಕಾನೂನು ಸಲಹೆಗಾರರು, ಸಚಿವರು, ನಿಗಮ, ಮಂಡಳಿ ಅಧ್ಯಕ್ಷರು– ಇವರೆಲ್ಲ ಸೇರಿ ಎಷ್ಟು ಜನರು ಈ ಸ್ಥಾನಮಾನ ಪಡೆದಿದ್ದಾರೆ ಎಂಬ ಪಟ್ಟಿ ಬಿಡುಗಡೆ ಮಾಡಬೇಕೆಂದು ಒತ್ತಾಯಿಸಿದರು. ಅವರಿಗೆ ಎಷ್ಟು ಖರ್ಚಾಗುತ್ತದೆ ಎಂಬ ವಿವರ ನೀಡಬೇಕೆಂದು ಕೋರಿದ್ದಾರೆ. ಈ ಹಿಂದೆ ಸಚಿವರಲ್ಲದ ಅನೇಕರಿಗೆ ಸಚಿವ ಸಂಪುಟ ದರ್ಜೆ ಕೊಟ್ಟದ್ದು, ಗ್ಯಾರಂಟಿಯ ರಾಜ್ಯದ ಜಾರಿ ಸಮಿತಿಯ ರಾಜ್ಯ ಸಮಿತಿ ಅಧ್ಯಕ್ಷರಿಗೂ ಇದೇ ಸ್ಥಾನಮಾನ ನೀಡಲಾಗಿದೆ ಎಂದಿದ್ದಾರೆ.

## ಖೂಬಾ ಹೇಳಿಕೆಗೆ ಜಾಬಶೆಟ್ಟಿ ಆಕ್ರೋಶ

• ಮಲ್ಲಮ್ಮ ನುಡಿ ವಾರ್ತೆ ಬೀದರ್

ಬೀದರ್ ನಗರದ ಐತಿಹಾಸಿಕ ಪಾಪನಾಶ ದೇವಸ್ಥಾನದ ಅಭಿವೃದ್ಧಿಗೆ ಸಚಿವ ಈಶ್ವರ ಖಂಡ್ರೆ, ಹಾಗೂ ಸಂಸದ ಸಾಗರ ಖಂಡ್ರೆ ಅವರು ಗುದ್ದಲಿ ಪೂಜೆ ನೆರವೇರಿಸುವ ಮೂಲಕ ಬಹುಕಾಲದ ಕನಸಿಗೆ ಚಾಲನೆ ನೀಡಿದ ಕ್ಷಣದಲ್ಲೇ, ಮಾಜಿ ಕೇಂದ್ರ ಸಚಿವ ಭಗವಂತ ಖೂಬಾ ರಾಜಕೀಯ ಲಾಭಕ್ಕಾಗಿ ವಿಷಕಾರಿ ಹೇಳಿಕೆ ನೀಡಿ ವಿವಾದ ಸೃಷ್ಟಿಸಿದ್ದಾರೆ ಎಂದು ಕಾಂಗ್ರೆಸ್ ಜಿಲ್ಲಾ ಅಧ್ಯಕ್ಷ ಹಾಗೂ ಬೀದರ್ ಬುಡಾ ಅಧ್ಯಕ್ಷ ಬಸವರಾಜ ಜಾಬಶೆಟ್ಟಿ ಕಿಡಿಕಾರಿದ್ದಾರೆ. ಈ ಕುರಿತು ಪತ್ರಿಕೆ ಜೊತೆ ಮಾತನಾಡಿದ ಅವರು, ಬಿದರ ಜಿಲ್ಲೆಯ ಜನರ ಬಹುದಿನದ ಬೇಡಿಕೆಯಾಗಿತ್ತು. ಸಂಸದ ಸಾಗರ ಖಂಡ್ರೆ ಅವರ ಸತತ ಪ್ರಯತ್ನದಿಂದ ರು. 22.41 ಕೋಟಿ ರೂ.ವೆಚ್ಚದಲ್ಲಿ ಕಾಮಗಾರಿಗೆ ಚಾಲನೆ ನೀಡಲಾಗಿದೆ. 2024ರಲ್ಲಿ ಕಾಮಗಾರಿ ಘೋಷಣೆಯಾಗಿ ಪ್ರಧಾನಿಯವರಿಂದ ವರ್ಚುಲ್ ಮೂಲಕ ಶಂಕುಸ್ಥಾಪನೆಯಾಗಿತ್ತು. ಆದರೆ ಅಂದಿನಿಂದ ಯಾವುದೇ ಪ್ರಗತಿ ಆಗಿರಲಿಲ್ಲ. ಆದರೆ ಸಾಗರ ಖಂಡ್ರೆ ರವರು ಸಂಸದರಾದ ಮೇಲೆ ಕೇಂದ್ರದ ಪ್ರವಾಸೋದ್ಯಮ ಸಚಿವರಿಗೆ ನಿರಂತರವಾಗಿ ಭೇಟಿ ಮಾಡಿ ಅನುದಾನ ತಂದಿದ್ದಾರೆ ಎಂದು ವಿವರಿಸಿದ್ದಾರೆ. ರಾಜ್ಯ ಸರ್ಕಾರದಿಂದ ಟೆಂಡರ್ ಆಗಿ ಈಗ ಕಾಮಗಾರಿ ಪ್ರಾರಂಭವಾಗಿದೆ. ಇದನ್ನು ಅರಿಯದ ಖೂಬಾ ರವರು ಕಾಮಗಾರಿಯ ಅಭಿವೃದ್ಧಿಗೆ ಸಹಕಾರ ನೀಡುವುದನ್ನು ಬಿಟ್ಟು ಇಲ್ಲ ಸಲ್ಲದ ಆರೋಪ ಮಾಡುವುದು ಖಂಡನಿಯವಾಗಿದೆ ಎಂದು ಜಾಬಶೆಟ್ಟಿ ತಿಳಿಸಿದ್ದಾರೆ.



### ಜನರ ದಾರಿ ತಪ್ಪಿಸುವ ಯತ್ನ

ಸಚಿವ ಈಶ್ವರ ಖಂಡ್ರೆ, ಸಂಸದ ಸಾಗರ ಖಂಡ್ರೆ ಅವರ ನೇತೃತ್ವದಲ್ಲಿ ದೇವಸ್ಥಾನದ ಮೂಲಸೌಕರ್ಯ, ಭಕ್ತರಿಗೆ ಸೌಲಭ್ಯ, ಸ್ವಚ್ಛತೆ ಹಾಗೂ ಪ್ರವಾಸೋದ್ಯಮ ಅಭಿವೃದ್ಧಿಗೆ ಭಾರಿ ಮೊತ್ತದ ಅನುದಾನ ಮಂಜೂರಾಗಿದ್ದು, ಇದು ಜನರ ಬಹುಕಾಲದ ಬೇಡಿಕೆಯಾಗಿತ್ತು. ಆದರೆ ಇದನ್ನೂ ರಾಜಕೀಯ ವೇದಿಕೆಗೆ ಎಳೆದೊಯ್ದು ಜನರನ್ನು ದಾರಿ ತಪ್ಪಿಸುವ ಪ್ರಯತ್ನ ನಡೆಯುತ್ತಿದೆ ಎಂದು ಕಾಂಗ್ರೆಸ್ ಆಕ್ರೋಶ ವ್ಯಕ್ತಪಡಿಸಿದೆ.

ಅಭಿವೃದ್ಧಿ ಕಾರ್ಯಗಳಿಗೆ ಅಡ್ಡಿಪಡಿಸುವವರು ಜನರ ಶತ್ರುಗಳು. ಬೀದರ್ ಜನತೆ ಎಲ್ಲವನ್ನೂ ನೋಡುತ್ತಿದ್ದಾರೆ? ಮುಂದಿನ ದಿನಗಳಲ್ಲಿ ಸೂಕ್ತ ಉತ್ತರ ಕೊಡುತ್ತಾರೆ. ಪಾಪನಾಶ ದೇವಸ್ಥಾನ ಅಭಿವೃದ್ಧಿ ಕಾಮಗಾರಿಗಳು ಶೀಘ್ರ ಆರಂಭಗೊಳ್ಳಲಿದ್ದು, ಯಾವುದೇ ರಾಜಕೀಯ ಕುತಂತ್ರಕ್ಕೂ ತಲೆಕೊಡದೆ ಸರ್ಕಾರ ಯೋಜನೆಯನ್ನು ಪೂರ್ಣಗೊಳಿಸಲಿದೆ.

–ಬಸವರಾಜ ಜಾಬಶೆಟ್ಟಿ
ಕಾಂಗ್ರೆಸ್ ಪಕ್ಷದ ಜಿಲ್ಲಾಧ್ಯಕ್ಷ

### ಪ್ರಗತಿ ಸಹಿಸದ ಮನಸ್ಥಿತಿ..!

ಜನರ ಭಾವನೆಗಳಿಗೆ ಸಂಬಂಧಿಸಿದ ಪವಿತ್ರ ಸ್ಥಳದ ಅಭಿವೃದ್ಧಿಯನ್ನು ಸಹ ಸಹಿಸದ ಮನಸ್ಥಿತಿಯೇ ಖೂಬಾ ಅವರ ಹೇಳಿಕೆಯಲ್ಲಿ ಸ್ಪಷ್ಟವಾಗಿ ಗೋಚರಿಸುತ್ತದೆ ಎಂದು ಜಾಬಶೆಟ್ಟಿ ಆರೋಪಿಸಿದ್ದು, "ಬೀದರ್ ಅಭಿವೃದ್ಧಿ ಕಂಡರೆ ಕೆಲವರಿಗೆ ಹೊಟ್ಟೆ ಉರಿಯುತ್ತದೆ. ಸರ್ಕಾರದ ಶ್ರಮವನ್ನು ಕುಗ್ಗಿಸುವ ಉದ್ದೇಶದಿಂದ ಸುಳ್ಳು ಪ್ರಚಾರ ಮಾಡುವುದು ನಾಚಿಕೆಗೇಡಿತನ," ಎಂದು ಅವರು ಕಟುವಾಗಿ ಟೀಕಿಸಿದ್ದಾರೆ.

## 9 ಸಂಪುಟ ಲೋಕಾರ್ಪಣೆ



• ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ

ಓದುವ, ಬರೆಯುವ ಪರಿಪಾಠ ಕಡಿಮೆಯಾಗಿರುವ ಈ ದಿನಗಳಲ್ಲಿ ಪುಸ್ತಕ ಸಂಸ್ಕೃತಿ ಬೆಳೆಸುವ ನಿಟ್ಟಿನಲ್ಲಿ ಹೆಚ್ಚಿನ ಪುಸ್ತಕಗಳು ಬಿಡುಗಡೆಯಾಗುತ್ತಿರುವುದು, ಪ್ರಕಟವಾಗುತ್ತಿರುವುದು ಅಭಿಮಾನದ ಸಂಗತಿ ಎಂದು ವಿಶ್ರಾಂತ ಪ್ರಾಧ್ಯಾಪಕಿ ಡಾ. ನೀಲಾಂಬಿಕಾ ಪೊಲೀಸ್ ಪಾಟೀಲ ಅಭಿಪ್ರಾಯಪಟ್ಟಿದ್ದಾರೆ.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾ ಘಟಕದ ವತಿಯಿಂದ ನಗರದ ಕನ್ನಡ ಭವನದಲ್ಲಿ ಆಯೋಜಿಸಿದ್ದ ರಾಯಚೂರಿನ ಹಿರಿಯ ಸಂಪಾದಕ ಬಸವರಾಜ ಸ್ವಾಮಿ ವಿರಚಿತ "ಬಸವಗೀತೆ" ಸತ್ಯಸಂವಾದ (9 ಸಂಪುಟಗಳ ಗುಚ್ಛ) ಪುಸ್ತಕ ಲೋಕಾರ್ಪಣೆಯಲ್ಲಿ ಮಾತನಾಡಿ, ಕಲಬುರಗಿ ಈಗ ಪುಸ್ತಕ ಹಬ್ ಆಗುತ್ತಿದೆ. ಭವಿಷ್ಯತ್ತಿನಲ್ಲಿ ಪುಸ್ತಕಗಳ ಸ್ಥಾನಮಾನ ಏನು? ಎಂಬುದರ ಬಗ್ಗೆ ಗಂಭೀರವಾಗಿ ಆಲೋಚಿಸಬೇಕು ಎಂದು ತಿಳಿಸಿದ್ದಾರೆ. ಡಿದ ಡಾ. ಶ್ರೀಶೈಲ ನಾಗರಾಳ ಪುಸ್ತಕ ಕುರಿತು ಮಾತನಾಡಿದ್ದಾರೆ. ಪ್ರಗತಿಪರ ಚಿಂತಕ ಪ್ರೊ. ಆರ್.ಕೆ. ಹುಡಗಿ ಮುಖ್ಯ ಅತಿಥಿ ಆಗಿದ್ದರು. ಕೃತಿಕಾರ ಬಸವರಾಜ ಸ್ವಾಮಿ ಮಾತನಾಡಿದ್ದಾರೆ. ಡಾ. ಶಿವರಂಜನ ಸತ್ಯಂಪೇಟೆ, ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷ ಬಾಬುರಾವ ಯಡ್ರಾಮಿ, ಭವಾನಿಸಿಂಗ್ ಠಾಕೂರ ವೇದಿಕೆಯಲ್ಲಿದ್ದರು. ಜಿಲ್ಲಾ ಕಸಾಪ ಕೋಶಾಧ್ಯಕ್ಷ ಶರಣರಾಜ ಛಪ್ಪರಬಂದಿ ಅಧ್ಯಕ್ಷತೆ ವಹಿಸಿದ್ದು, ಶಿವರಾಜ ಅಣಜಗಿ ನಿರೂಪಿಸಿದ್ದಾರೆ. ಡಾ. ಅಶೋಕ ದೊಡ್ಡಮನಿ, ವಿನೋದ ಜನೆವರಿ ಸೇರಿ ಇತರರು ಉಪಸ್ಥಿತರಿದ್ದರು.

**ಕೇಂದ್ರ ಬಿಜೆಪಿ ಸರ್ಕಾರ ಕರ್ನಾಟಕಕ್ಕೆ ಕೊಟ್ಟ ಖಾಲಿ ಟ್ರಂಕ್ ಹಿಡಿದಿರುವ ತೇಜಸ್ವಿ ಸೂರ್ಯ: ಬಮೂಲ್ ಅಧ್ಯಕ್ಷ ಡಿ.ಕೆ. ಸುರೇಶ್ ವ್ಯಂಗ್ಯ**

# ಮಕ್ಕಳಲ್ಲಿ ಶಿಕ್ಷಣದ ಜತೆಗೆ ಸಂಸ್ಕಾರ ಬೆಳೆಸಿ

ಮಲ್ಲಮ್ಮ ನುಡಿ ವಾರ್ತೆ

ಭಾಲ್ಕಿ: ಮಕ್ಕಳನ್ನು ಬಾಲ್ಯದಿಂದಲೇ ಶಿಕ್ಷಣದ ಜತೆಗೆ ಉತ್ತಮ ಸಂಸ್ಕಾರ ಬೆಳೆಸಿ ದೇಶದ ಉತ್ತಮ ನಾಗರಿಕರನ್ನಾಗಿಸುವ ಹೊಣೆಗಾರಿಕೆ ನಮ್ಮೆಲ್ಲರ ಮೇಲಿದೆ ಎಂದು ಬಸವಕಲ್ಯಾಣ ಅನುಭವ ಮಂಟಪದ ಅಧ್ಯಕ್ಷ ನಾಡೋಜ ಡಾ.ಬಸವಲಿಂಗ ಪಟ್ಟದ್ದೇವರು ಹೇಳಿದರು.

ಪಟ್ಟಣದ ಲೆಕ್ಚರ್ ಕಾಲೋನಿಯ ಖಡಕೇಶ್ವರ ಪ್ರೌಢ ಶಾಲೆಯಲ್ಲಿ ಗುರುವಾರ ಆಯೋಜಿಸಿದ್ದ ಅಂತರ ಶಾಲಾಮಟ್ಟದ ರಸಪ್ರಶ್ನೆ ಸ್ಪರ್ಧೆ ಕಾರ್ಯಕ್ರಮದ ದಿವ್ಯ ಸಾನ್ನಿಧ್ಯವಹಿಸಿ ಅವರು ಮಾತನಾಡಿದರು.

ದೇಶದ ಭವಿಷ್ಯ ಆಗಿರುವ ಮಕ್ಕಳಲ್ಲಿ ಅದ್ಭುತ ಶಕ್ತಿ ಅಡಗಿರುತ್ತದೆ ಅದನ್ನು ಗುರುತಿಸುವ ಕೆಲಸ ಆಗಬೇಕು ಎಂದರು. ವಿದ್ಯಾರ್ಥಿಗಳು ಶರೀರ, ಮನಸ್ಸು ಮತ್ತು ಆತ್ಮವನ್ನು ಶುದ್ಧವಾಗಿರಿಸಿಕೊಂಡರೆ ಬದುಕು ಸುಂದರವಾಗಿ ರೂಪಗೊಳ್ಳಲು ಸಾಧ್ಯವಾಗುತ್ತದೆ. ಓದಿನ ಜತೆಗೆ ಒಂದಿಷ್ಟು ಸಮಯ ಪೂಜೆ, ಜಪ, ಧ್ಯಾನಕ್ಕೆ ಮೀಸಲಿಡಿರುವುದರಿಂದ ದೈವಿ ಶಕ್ತಿ ಹೆಚ್ಚಿಸುತ್ತದೆ.



ಕಲಿಕೆಯಲ್ಲಿ ಹಿಂದುಳಿದ ವಿದ್ಯಾರ್ಥಿಗಳು ದಡ್ಡರಾಗಿರುವುದಿಲ್ಲ. ಶಿಕ್ಷಕರಾದವರೂ ಅವರಲ್ಲಿನ ಪ್ರತಿಭೆಯನ್ನು ಪತ್ತೆ ಹಚ್ಚುವ ಕೆಲಸ ಮಾಡಬೇಕು ಎಂದು ಕಿವಿಮಾತು ಹೇಳಿದರು.

ಕಾರ್ಯಕ್ರಮ ಉದ್ಘಾಟಿಸಿದ ಕ್ಷೇತ್ರ ಶಿಕ್ಷಣಾಧಿಕಾರಿ ಸಿ.ಜಿ.ಹಳ್ಳದ ಮಾತನಾಡಿ, ಎಸ್ಸೆಸ್ಸೆಲ್ಸಿ ಫಲಿತಾಂಶ ಸುಧಾರಣೆಗೆ ರಸಪ್ರಶ್ನೆ ಸ್ಪರ್ಧೆ ಅತ್ಯಂತ ಸಹಕಾರಿಯಾಗಿದೆ. ವಿದ್ಯಾರ್ಥಿಗಳು ಸ್ಮಾರ್ಟ್ವರ್ಕ್ ಮೂಲಕ ಕಲಿಕೆಯ ಮಟ್ಟವನ್ನು ಹೆಚ್ಚಿಸಿ ಕೊಳ್ಳಬೇಕು ಎಂದರು.

ಎಸ್ಸೆಸ್ಸೆಲ್ಸಿ ವಾರ್ಷಿಕ ಪರೀಕ್ಷೆ ಆರಂಭಕ್ಕೆ ದಿನಗಣನೇ ಶುರುವಾಗಿದ್ದು ವಿದ್ಯಾರ್ಥಿಗಳು ಮೊಬೈಲ್, ಟಿವಿ ನೋಡುವುದನ್ನು ಕಡಿಮೆ ಮಾಡಿ ಓದಿನ ಕಡೆಗೆ ಹೆಚ್ಚಿನ ಗಮನ ನೀಡಿ ಪರೀಕ್ಷೆಯನ್ನು ಭಯಮುಕ್ತರಾಗಿ ಎದುರಿಸಿ ತಾಲೂಕಿನ ಎಸ್ಸೆಸ್ಸೆಲ್ಸಿ ಫಲಿತಾಂಶ ಹೆಚ್ಚಿಸಬೇಕು ಎಂದು ತಿಳಿಸಿದರು. ಸಂಸ್ಥೆಯ ಕೋಶಾಧ್ಯಕ್ಷ ಪ್ರಭುರಾಜ ಧೂಪೆ, ನಿರ್ದೇಶಕ ಅಶೋಕ ಲೋಖಂಡೆ, ಸಾಫ್ಟ್‌ವೇರ್ ಎಂಜಿನಿಯರ್ ಮಹಾದೇವ ಜ್ಯೋತೆಪ್ಪ ಮಾತನಾಡಿದರು.

ಸಂಸ್ಥೆಯ ಅಧ್ಯಕ್ಷ ಸುಧೀರ ನಾಯಕ ಅಧ್ಯಕ್ಷತೆ ವಹಿಸಿದ್ದರು.

ಈ ಸಂದರ್ಭದಲ್ಲಿ ಸಿಆರ್‌ಪಿ ಪ್ರಭು ಡಿಗ್ಗೆ, ಶಿಕ್ಷಕರಾದ ಉದಯಕುಮಾರ ಜೋಶಿ, ಪ್ರಕಾಶ ರುದನೂರೆ, ಅಂಜಲಿ ಜೋಶಿ, ಶುಭಂ ರಾಯವಾಡೆ ಇದ್ದರು. ಮುಖ್ಯಗುರು ಆನಂದ ಕಲ್ಯಾಣೆ ಸ್ವಾಗತಿಸಿದರು. ದಿಲೀಪ ಘಂಟೆ ನಿರೂಪಿಸಿದರು. ಜಯಪ್ರಕಾಶ ಸಹಾನೆ ವಂದಿಸಿದರು.

**5 ತಂಡ ಭಾಗಿ**

ಖಡಕೇಶ್ವರ ಪ್ರೌಢ ಶಾಲೆ, ಚನ್ನಬಸವೇಶ್ವರ ಗುರುಕುಲ, ಭಾಲ್ಕೇಶ್ವರ, ಸದ್ಗುರು ಮತ್ತು ಭಾತಂಬ್ರಾದ ಶಿವಯೋಗೀಶ್ವರ ಪ್ರೌಢ ಶಾಲೆಯ ವಿದ್ಯಾರ್ಥಿಗಳು ರಸಪ್ರಶ್ನೆ ಸ್ಪರ್ಧೆಯಲ್ಲಿ ಭಾಗಹಿಸಿದ್ದರು.

" ಪಟ್ಟಣದಲ್ಲಿ ಕಳೆದ ಮುನ್ನಾಲ್ಕು ದಶಕಗಳಿಂದ ಖಡಕೇಶ್ವರ ಶಿಕ್ಷಣ ಸಂಸ್ಥೆ ಗುಣಾತ್ಮಕ ಶಿಕ್ಷಣಕ್ಕೆ ಹೆಸರುವಾಸಿಯಾಗಿದೆ. ಉತ್ತಮ ಸಂಸ್ಕಾರ, ಶಿಸ್ತು ಮತ್ತು ಬದ್ಧತೆ ಮೂಲಕ ವಿಶಿಷ್ಟ ಶಿಕ್ಷಣ ನೀಡುತ್ತಿದೆ.

- ಡಾ.ಬಸವಲಿಂಗ ಪಟ್ಟದ್ದೇವರು ಹಿರೇಮಠ ಸಂಸ್ಥಾನ ಭಾಲ್ಕಿ

" ಮಕ್ಕಳಲ್ಲಿ ಎಸ್ಸೆಸ್ಸೆಲ್ಸಿ ಪರೀಕ್ಷೆ ಭಯ ಹೋಗಲಾಡಿಸುವ ಆಶಯದೊಂದಿಗೆ ಕಳೆದ 5 ವರ್ಷಗಳಿಂದ ರಸಪ್ರಶ್ನೆ ಸ್ಪರ್ಧೆ ಏರ್ಪಡಿಸಲಾಗುತ್ತಿದೆ. ವಿಜೇತರಿಗೆ ಬಹುಮಾನ ನೀಡಿ ಗೌರವಿಸಲಾಗುತ್ತದೆ.

- ಆನಂದ ಕಲ್ಯಾಣೆ ಮುಖ್ಯಗುರುಗಳು ಖಡಕೇಶ್ವರ ಪ್ರೌಢ ಶಾಲೆ ಭಾಲ್ಕಿ

## ಸಂಪಾದಕೀಯ

ಮಾಣಿಕರೆಡ್ಡಿ ಕೌಡಾಳೆ
ಪ್ರಧಾನ ಸಂಪಾದಕರು



# ಗ್ರಾಮೀಣ ಜನತೆಗೆ ಸುಗಮ ಆಡಳಿತ ಸಿಗುವಂತಾಗಲಿ

ಭಾರತದ ಆತ್ಮ ಗ್ರಾಮೀಣ ಭಾಗದಲ್ಲಿದೆ ಎಂಬ ಮಾತು ಕೇವಲ ನುಡಿಮುತ್ತಲ್ಲ; ಅದು ನಮ್ಮ ಸಮಾಜದ ನಿಜವಾದ ಚಿತ್ರಣ. ದೇಶದ ಬಹುಪಾಲು ಜನರು ಇನ್ನೂ ಗ್ರಾಮಗಳಲ್ಲಿ ವಾಸಿಸುತ್ತಿದ್ದು, ಕೃಷಿ, ಕೂಲಿ ಕಾರ್ಮಿಕತೆ ಹಾಗೂ ಸಣ್ಣ ವ್ಯಾಪಾರಗಳ ಮೇಲೆ ಜೀವನ ಸಾಗಿಸುತ್ತಿದ್ದಾರೆ. ಆದರೆ ಆಡಳಿತ ವ್ಯವಸ್ಥೆಯ ಲಾಭಗಳು ಗ್ರಾಮೀಣ ಜನರಿಗೆ ತಲುಪುವಲ್ಲಿ ಇನ್ನೂ ಅನೇಕ ಅಡೆತಡೆಗಳು ಕಂಡುಬರುತ್ತಿವೆ.

ಸರ್ಕಾರ ಜನರಿಗಾಗಿ ರೂಪಿಸುವ ಯೋಜನೆಗಳು ಕಾಗದದಲ್ಲೇ ಸೀಮಿತವಾಗದೆ ನಿಜವಾದ ಫಲಾನುಭವಿಗಳಿಗೆ ತಲುಪಬೇಕು. ಆದರೆ ಗ್ರಾಮೀಣ ಪ್ರದೇಶಗಳಲ್ಲಿ ಮಾಹಿತಿ ಕೊರತೆ, ಅಧಿಕಾರಿಗಳ ಅಲಕ್ಷ್ಯ, ದೂರದ ಕಚೇರಿಗಳು ಹಾಗೂ ಪ್ರಕ್ರಿಯೆಗಳ ಜಟಿಲತೆ ಜನರನ್ನು ಸರ್ಕಾರದಿಂದ ದೂರವಿಡುತ್ತಿದೆ. ಒಂದು ಪ್ರಮಾಣಪತ್ರ ಪಡೆಯಲು ದಿನಗಟ್ಟಲೆ ಕಚೇರಿ ಸುತ್ತುವ ಪರಿಸ್ಥಿತಿ ಇಂದಿಗೂ ಹಲವೆಡೆ ಮುಂದುವರೆದಿದೆ.

ಡಿಜಿಟಲ್ ಇಂಡಿಯಾ, ಸೇವಾ ಸಿಂಧು, ಗ್ರಾಮ ಒನ್ ಕೇಂದ್ರಗಳಂತಹ ಯೋಜನೆಗಳು ಉತ್ತಮ ಉದ್ದೇಶದಿಂದ ಜಾರಿಯಾದರೂ, ಅವುಗಳನ್ನು ಪರಿಣಾಮಕಾರಿಯಾಗಿ ಗ್ರಾಮೀಣ ಮಟ್ಟದಲ್ಲಿ ಅನುಷ್ಠಾನಗೊಳಿಸುವಲ್ಲಿ ಗಂಭೀರ ಪ್ರಯತ್ನ ಅಗತ್ಯವಾಗಿದೆ. ಪ್ರತಿಯೊಂದು ಪಂಚಾಯತ್ ಮಟ್ಟದಲ್ಲಿಯೇ ಆಡಳಿತ ಸೇವೆಗಳು ಸುಲಭವಾಗಿ ದೊರಕುವಂತೆ ವ್ಯವಸ್ಥೆ ರೂಪಿಸಬೇಕು. ಜನರ ಭಾಷೆಯಲ್ಲಿ ಮಾಹಿತಿ, ಸಹಾಯಕ ಸಿಬ್ಬಂದಿ ಹಾಗೂ ಪಾರದರ್ಶಕ ಪ್ರಕ್ರಿಯೆಗಳು ಇದ್ದರೆ ಮಾತ್ರ ಆಡಳಿತ ಜನಸ್ನೇಹಿಯಾಗುತ್ತದೆ.

ಅದೇ ರೀತಿ ಅಧಿಕಾರಿಗಳು ಗ್ರಾಮಗಳಿಗೆ ನಿಯಮಿತವಾಗಿ ಭೇಟಿ ನೀಡಿ ಜನರ ಸಮಸ್ಯೆಗಳನ್ನು ನೇರವಾಗಿ ಆಲಿಸುವ ವ್ಯವಸ್ಥೆ ಬಲಪಡಿಸಬೇಕು. ಕಚೇರಿಗಳಲ್ಲಿ ಕೂತೇ ಆಡಳಿತ ನಡೆಸುವ ಸಂಸ್ಕೃತಿಗೆ ಅಂತ್ಯ ಹಾಡಿ, ಜನರ ನಡುವೆ ಹೋಗುವ ಆಡಳಿತವೇ ನಿಜವಾದ ಜನತಂತ್ರ.

ಗ್ರಾಮೀಣ ಜನತೆಗೆ ಸುಗಮ ಆಡಳಿತ ಸಿಗುವುದೆಂದರೆ ಕೇವಲ ಸೇವೆಗಳ ಸರಳೀಕರಣವಲ್ಲ; ಅದು ಗೌರವ, ಸಮಾನತೆ ಮತ್ತು ನ್ಯಾಯ ದೊರಕಿಸುವ ಪ್ರಕ್ರಿಯೆ. ಸರ್ಕಾರ ಈ ದಿಕ್ಕಿನಲ್ಲಿ ದೃಢ ಹೆಜ್ಜೆ ಇಟ್ಟರೆ ಮಾತ್ರ ಗ್ರಾಮೀಣ ಭಾರತದ ನೈಜ ಅಭಿವೃದ್ಧಿ ಸಾಧ್ಯವಾಗುತ್ತದೆ.



ಮಾನ್ಯತೆ ಪಡೆಯದ ವೃತ್ತಿನಿರತ ಗ್ರಾಮೀಣ ಪತ್ರಕರ್ತರಿಗೆ ಜಿಲ್ಲಾ ವ್ಯಾಪ್ತಿಯೊಳಗೆ ಸಂಚರಿಸಲು ಬಸಪಾಸ ಕಾರ್ಡನ್ನು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಉಪ ನಿರ್ದೇಶಕರಾದ ಜಡಿಯಪ್ಪ ಗೆದ್ಲಗಟ್ಟಿ ಅವರು ವಿತರಿಸಿದರು, ಡಿ.ಕೆ.ರಾಜರತ್ನ, ಉಮಾಶಂಕರ್ ಚಿನಮಳ್ಳಿ, ಎಸ್.ಐ.ಪಾಶಾ ಹಾಗೂ ಮಹಾದೇವಿ ಕುರ್ತಕೋಟಿ ಉಪಸ್ಥಿತರಿದ್ದರು.

# ಉತ್ಖನನ: ಮಾನವನ ಎರಡನೇ ಅಸ್ಥಿಪಂಜರ ಪತ್ತೆ

ಮಲ್ಲಮ್ಮ ನುಡಿ ವಾರ್ತೆ ಸಿರುಗುಪ್ಪ(ಬಳ್ಳಾರಿ) :

ತಾಲೂಕಿನ ತೆಕ್ಕಲಕೋಟೆ ಪಟ್ಟಣದ ಗೌಡ್ರ ಮೂಲೆ ಬೆಟ್ಟ ಪ್ರದೇಶಗಳಲ್ಲಿ ನಡೆಯುತ್ತಿರುವ ಉತ್ಖನನ ಸ್ಥಳದಲ್ಲಿ ಸೋಮವಾರ ಮತ್ತೊಂದು ಅಸ್ಥಿಪಂಜರ ದೊರೆತಿದ್ದು, ಅಧ್ಯಯನಾಸಕ್ತರ ಕುತೂಹಲ ಹೆಚ್ಚಿಸಿದೆ.

ಇತ್ತೀಚೆಗೆ ದೊರೆತ ಪಳೆಯುಳಿಕೆ ಪಕ್ಕದಲ್ಲಿ ಉತ್ಖನನ ಕಾರ್ಯ ಮುಂದುವರೆಸಿದಾಗ ಮತ್ತೊಂದು ಮಾನವನ ಅಸ್ಥಿಪಂಜರ ಗೋಚರಿಸಿದೆ. ಎದೆಯ ಭಾಗದ ಮೇಲೆ ದೊಡ್ಡ ಗಾತ್ರದ ಕಲ್ಲು ಇರುವುದರಿಂದ ಅದನ್ನು ಸರಿಸಿದಲ್ಲಿ ಮೊದಲನೆ ಪಳೆಯುಳಿಕೆಗೆ ಧಕ್ಕೆಯಾಗುವ ಸಾಧ್ಯತೆ ಇದ್ದು, ಅದನ್ನು ಹಾಗೆಯೇ ಬಿಟ್ಟಿರುವುದಾಗಿ ಅಮೇರಿಕಾದ ಹಾರ್ಟ್ ವಿಕ್ ವಿಶ್ವವಿದ್ಯಾಲಯದ ಪ್ರಾಧ್ಯಾಪಕಿ ಹಾಗೂ ಉತ್ಖನನ ಕಾರ್ಯದ ಸಹ ನಿರ್ದೇಶಕಿ ನಮಿತಾ ಎಸ್ ಸುಗಂಧಿ ತಿಳಿಸಿದರು.



ಸುಮಾರು 3.5 ರಿಂದ 5 ಸಾವಿರ ವರ್ಷಗಳ ಹಿಂದಿನ ಇತಿಹಾಸ ಇರುವ ಈ ಸ್ಥಳ ಅಧ್ಯಯನಾಸಕ್ತರಿಗೆ ಉತ್ತಮವಾಗಿದ್ದು, ಮುಂದಿನ ದಿನಗಳಲ್ಲಿ ಇವುಗಳ ಸಂರಕ್ಷಣೆ ಹಾಗೂ ಹೆಚ್ಚಿನ ಸಂಶೋಧನೆಯ ಅವಶ್ಯಕತೆ ಇದೆ ಎಂದು ತಿಳಿಸಿದರು. ಜಕ್ಕೇರು ಗುಡ್ಡದ ಬಳಿ ಇದೇ ಕಾಲಮಾನದ ಲೋಹಯುಗಕ್ಕೆ ಸಂಬಂಧಿಸಿದ ಬೂದಿದಿಬ್ಬದ ಬಹುದೊಡ್ಡ ನೆಲೆ ಇದ್ದು, ಇದರ ಸಂರಕ್ಷಣೆಗೆ ಸ್ಥಳೀಯ ಆಡಳಿತ ಕ್ರಮ ಕೈಗೊಂಡಲ್ಲಿ ಅಧ್ಯಯನಕ್ಕೆ ಅನುಕೂಲವಾಗುತ್ತದೆ. ಇಲ್ಲವಾದರೆ ಅದೂ ಕಣ್ಮರೆಯಾಗಬಹುದು ಎಂದು ಬೇಸರ ವ್ಯಕ್ತಪಡಿಸಿದರು. ಉತ್ಖನನ ನಡೆಯುತ್ತಿರುವ ಗೌಡ್ರಮೂಲೆಯ ಎತ್ತರದ ಬೆಟ್ಟ ಪ್ರದೇಶದ ವಿಶಾಲ ಮೈದಾನದಲ್ಲಿ ಸೂಕ್ಷ್ಮ ಶಿಲಾಯುಗದ ಚಿಕ್ಕಗಾತ್ರದ ಆಯುಧಗಳು ದೊರೆತಿದ್ದು, ಇವುಗಳನ್ನು ಬೇಟೆಗಾಗಿ ಇಲ್ಲವೆ ಚರ್ಮ ಸುಲಿಯಲು, ಅಥವಾ ಮಾಂಸಕ್ಕಾಗಿ ಉಪಯೋಗಿಸುತ್ತಿದ್ದರು ಎಂದು ಹೇಳಲಾಗುತ್ತಿದೆ. ಇದೇ ಸ್ಥಳದಲ್ಲಿ ಕಲ್ಲುರಾಶಿ ಕಂಡು ಬರುತ್ತಿದ್ದು, ವಾಸಕ್ಕೆ ಬಳಸಿರುವ ಸಾಧ್ಯತೆ ಇದೆ. ಇಲ್ಲಿಯೇ ಚಿಕ್ಕ ಹಾಗೂ ದೊಡ್ಡ ಗಾತ್ರದ ಮಡಕೆಗಳು ಕಂಡು ಬಂದಿವೆ ಎಂದು ತಿಳಿಸಿದರು. 1964-65 ರಲ್ಲಿ ಎಂ ಎಸ್ ನಾಗರಾಜ ರಾವ್ ನಡೆಸಿದ ಉತ್ಖನನದ ಸಂದರ್ಭದಲ್ಲಿ ದೊರೆತ ಶವ, ಮಣ್ಣಿನ ಮಡಿಕೆ ಹಾಗೂ ಇತರ ವಸ್ತುಗಳನ್ನು ಪೂನಾದ ಡೆಕ್ಕನ್ ಕಾಲೇಜು ಮ್ಯುಜಿಯಂನಲ್ಲಿ ಸಂಗ್ರಹಿಸಿ ಇಡಲಾಗಿದೆ ಎಂದರು.

# ಹಿರಿಯ ಪತ್ರಕರ್ತ ಅಪ್ಪಾರಾವ್ ಬಿರಾದಾರ್ ಇನ್ನಿಲ್ಲ



ಕಲಬುರ್ಗಿ, .

ಹಿರಿಯ ಪತ್ರಕರ್ತ ಅಪ್ಪಾರಾವ್ ಬಿರಾದಾರ್ (80) ಇಂದು ಸಂಜೆ ನಿಧನ ಹೊಂದಿರುತ್ತಾರೆ. ಮೃತರ ಅಂತ್ಯಕ್ರಿಯೆ ಕಲಬುರ್ಗಿಯ ಕಮಲಾಪುರ ತಾಲ್ಲೂಕಿನ ಗೋಗಿ ((ಕೆ) ಗ್ರಾಮದಲ್ಲಿ ಫೆ. 10 ರಂದು ಮಧ್ಯಾಹ್ನ ನಡೆಯಲಿದೆ. ಮೃತರು ನಾಲ್ವರು ಪುತ್ರರು, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು ಬಳಗ ಅಗಲಿದ್ದಾರೆ. 1980 ರ ದಶಕದಲ್ಲಿ ಕಲಬುರ್ಗಿ ಜಿಲ್ಲೆಯಲ್ಲಿ ಗ್ರಾಮವಾಣಿ ಕನ್ನಡ ದಿನಪತ್ರಿಕೆಯ ಸಂಪಾದಕರಾಗಿ ಸುದೀರ್ಘವಾಗಿ ಪತ್ರಿಕೋದ್ಯಮದಲ್ಲಿ ಸೇವೆ ಸಲ್ಲಿಸಿದ್ದರು.

# ಹಜ್ರತ್ ಮೊಹಮ್ಮದ್ ನಿಜಾಮಿ ಸಾಹೇಬ್ ಕಿಬ್ಲಾ ಅವರ ನಿಧನದ ಕುರಿತು ಸಂತಾಪ ಸಂದೇಶ

- ಮಲ್ಲಮ್ಮ ನುಡಿ ವಾರ್ತೆ, ಕಲಬುರಗಿ:



ಹಜ್ರತ್ ನಿಜಾಮುದ್ದೀನ್ ಔಲಿಯಾ ಅವರ ಪವಿತ್ರ ದರ್ಗಾದ ಗದ್ದಿ ನಶೀನ್ ಆಗಿದ್ದ ಹಜ್ರತ್ ಮೌಲಾನಾ ಸಯ್ಯದ ಮೊಹಮ್ಮದ್ ನಿಜಾಮಿ ಸಾಹೇಬ್ ಕಿಬ್ಲಾ ಅವರ ನಿಧನದ ಸುದ್ದಿ ನನಗೆ ಅತ್ಯಂತ ಆಘಾತ ಮತ್ತು ಆಳವಾದ ಶೋಕವನ್ನುಂಟುಮಾಡಿದೆ. ಅವರ ವಿಯೋಗದಿಂದ ಇಸ್ಲಾಮಿಕ ಜಗತ್ತಿಗೆ, ವಿಶೇಷವಾಗಿ ಚಿಶ್ತಿಯಾ ಸೂಫಿ ಸಿಲ್ಸಿಲೆಗೆ, ತುಂಬಲಾರದ ಆಧ್ಯಾತ್ಮಿಕ ನಷ್ಟ ಉಂಟಾಗಿದೆ ಎಂದು ಡಾ. ಹಾಫಿಜ್ ಸಯ್ಯದ್ ಮೊಹಮ್ಮದ್ ಅಲಿ ಅಲ್-ಹುಸೈನಿ ಸಾಹೇಬ್ ಕಿಬ್ಲಾ, ಸಜ್ಜಾದಾ ನಶೀನ್, ದರ್ಗಾ ಹಜ್ರತ್ ಖ್ವಾಜಾ ಬಂದಾ ನವಾಜ್, ಗುಲ್ಬರ್ಗಾ ಶರೀಫ ಸಂತಾಪ ಸೂಚಿಸಿದ್ದಾರೆ. ಹಜ್ರತ್ ಮೊಹಮ್ಮದ್ ನಿಜಾಮಿ ಸಾಹೇಬ್ ಕಿಬ್ಲಾ ಅವರು ಗೌರವಾನ್ವಿತ ಪಂಡಿತರೂ, ಆಳವಾದ ಆಧ್ಯಾತ್ಮಿಕ ವ್ಯಕ್ತಿತ್ವವೂ ಆಗಿದ್ದರು. ಅವರು ಒಲಿಯಾವರ ಸಚ್ಚಾ ಪ್ರೇಮಿಗಳಾಗಿದ್ದು, ಅವರ ಸಂದೇಶದ ಜೀವಂತ ಪ್ರತಿರೂಪರಾಗಿದ್ದರು. ಪ್ರೀತಿ, ಸಹನೆ, ಮಾನವ ಸೇವೆ, ನಿಸ್ವಾರ್ಥತೆ ಮತ್ತು ಖಿರಾತ್ಮಕತೆ-ಯ ಮೇಲೆ ಆಧಾರಿತ ಹಜ್ರತ್ ನಿಜಾಮುದ್ದೀನ್ ಔಲಿಯಾ ಅವರ ಉಪದೇಶಗಳು ಅವರ ಜೀವನದಲ್ಲಿ ಸ್ಪಷ್ಟವಾಗಿ ಪ್ರತಿಬಿಂಬಿಸುತ್ತಿದ್ದವು. ಪ್ರತಿವರ್ಷ ಹಜ್ರತ್ ಖ್ವಾಜಾ ಬಂದಾ ನವಾಜ್ ಅವರ ಉರುಸ್ ಸಂದರ್ಭದಲ್ಲಿ ಗುಲ್ಬರ್ಗಾದ ಪವಿತ್ರ ದರ್ಗೆಗೆ ಭೇಟಿ ನೀಡುವುದನ್ನು ಅವರು ತಮ್ಮ ಜೀವನದ ಮಹಾನ್ ಸೌಭಾಗ್ಯ ಹಾಗೂ ಗೌರವವೆಂದು ಪರಿಗಣಿಸುತ್ತಿದ್ದರು. ಅವರ ಈ ಲೋಕದಿಂದ ನಿರ್ಗಮನವು ದೀರ್ಘಕಾಲ ಅನುಭವವಾಗುವಂತಹ ಮಹತ್ತರ ಶೂನ್ಯತೆಯನ್ನು ಉಂಟುಮಾಡಿದೆ.

ಅಲ್ಲಾಹ್ ತಆಲಾ ಅವರಿಗೆ ಕ್ಷಮೆಯನ್ನು ಕರುಣಿಸಿ, ಅವರ ದರ್ಜೆಗಳನ್ನು ಉನ್ನತಗೊಳಿಸಿ, ಜನ್ನತ್-ಉಲ್-ಫಿರ್ದೌಸ್‌ನಲ್ಲಿ ಶ್ರೇಷ್ಠ ಸ್ಥಾನವನ್ನು ದಯಪಾಲಿಸಲಿ ಹಾಗೂ ಅವರ ಕುಟುಂಬದವರಿಗೆ, ಶಿಷ್ಯರಿಗೆ ಮತ್ತು ಎಲ್ಲಾ ಭಕ್ತರಿಗೆ ಸಬ್ರ್-ಎ-ಜಮೀಲ್ ನೀಡಲಿ ಎಂದು ನಾನು ಪ್ರಾರ್ಥಿಸುತ್ತೇನೆ. ಆಮೀನ್

# ಶಾಂತಿವರ್ಧಕ ಕಾಲೇಜಿನಲ್ಲಿ 811 ವಿದ್ಯಾರ್ಥಿಗಳಿಂದ ಪ್ರವೇಶ ಪರೀಕ್ಷೆ



- ಮಲ್ಲಮ್ಮ ನುಡಿ ವಾರ್ತೆ,ಕಮಲನಗರ

ಶಿಕ್ಷಣ ಕ್ಷೇತ್ರದಲ್ಲಿ ಕಮಲನಗರದ ಶಾಂತಿವರ್ಧಕ ಪದವಿಪೂರ್ವ ಕಾಲೇಜು ಹೊಸ ಮೈಲಿಗಲ್ಲು ಸ್ಥಾಪಿಸಿದೆ. 2026-27ನೇ ಸಾಲಿನ ಉಚಿತ ಪ್ರವೇಶಕ್ಕಾಗಿ ಹಮ್ಮಿಕೊಳ್ಳಲಾಗಿದ್ದ ಸಾಮಾನ್ಯ ಪ್ರವೇಶ ಪರೀಕ್ಷೆಗೆ ಬರೋಬ್ಬರಿ 811 ವಿದ್ಯಾರ್ಥಿಗಳು ಹಾಜರಾಗುವ ಮೂಲಕ ಶಿಕ್ಷಣ ಪ್ರೇಮ ಮೆರೆದಿದ್ದಾರೆ.

ಇತ್ತೀಚಿನ ದಿನಗಳಲ್ಲಿ ದುಬಾರಿಯಾಗುತ್ತಿರುವ ಪಿಯುಸಿ ಶಿಕ್ಷಣದ ನಡುವೆ, ಬಡ ಮತ್ತು ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣವನ್ನು ಉಚಿತವಾಗಿ ನೀಡಲು ಶಾಂತಿವರ್ಧಕ ಶಿಕ್ಷಣ ಸಂಸ್ಥೆ ಮುಂದಾಗಿರುವುದು ಶ್ಲಾಘನೀಯ. ಭಾನುವಾರ ನಡೆದ ಈ ಪರೀಕ್ಷೆಯಲ್ಲಿ ಕೇವಲ ಕಮಲನಗರ ಅಷ್ಟೇ ಅಲ್ಲದೆ, ಸುತ್ತಮುತ್ತಲಿನ ಹತ್ತಾರು ಹಳ್ಳಿಗಳ ಎಸ್ಎಸ್ಎಲ್‌ಸಿ ಮತ್ತು ಪಿಯುಸಿ ವಿದ್ಯಾರ್ಥಿಗಳು ಉತ್ಸಾಹದಿಂದ ಭಾಗವಹಿಸಿದ್ದರು.

" ಗ್ರಾಮೀಣ ಭಾಗದ ವಿದ್ಯಾರ್ಥಿಗಳ ಭವಿಷ್ಯ ರೂಪಿಸುವುದೇ ನಮ್ಮ ಸಂಸ್ಥೆಯ ಮುಖ್ಯ ಗುರಿ. ಇಷ್ಟೊಂದು ದೊಡ್ಡ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಭಾಗವಹಿಸಿರುವುದು ನಮ್ಮ ಜವಾಬ್ದಾರಿಯನ್ನು ಮತ್ತಷ್ಟು ಹೆಚ್ಚಿಸಿದೆ."

-ಶಿವಾಜಿ ಆರ್. ಎಚ್.
ಪ್ರಾಂಶುಪಾಲರು, ಶಾಂತಿ ವರ್ಧಕ ಪ. ಪೂ. ಕಾಲೇಜು ಕಮಲನಗರ.

**ಶಿಸ್ತುಬದ್ಧ ಆಯೋಜನೆ,**

ಸಂಸ್ಥೆಯ ಆದೇಶದಂತೆ ನಡೆದ ಈ ಪರೀಕ್ಷೆಯನ್ನು ಕಾಲೇಜಿನ ಸಿಬ್ಬಂದಿ ಅತ್ಯಂತ ಯಶಸ್ವಿಯಾಗಿ ನಿರ್ವಹಿಸಿದರು. ಪ್ರಾಂಶುಪಾಲರಾದ ಶಿವಾಜಿ ಆರ್. ಎಚ್. ಹಾಗೂ ಸಂಯೋಜಕ ಸಂಜು ಕುಮಾರ ಚನ್ನಾಳೆ ನೇತೃತ್ವದಲ್ಲಿ ನಡೆದ ಈ ಪ್ರಕ್ರಿಯೆಗೆ ಉಪನ್ಯಾಸಕ ವೃಂದದ ಬೆಂಬಲ ದೊಂದಿಗೆ ಯಶಸ್ವಿಯಾಗಿ ಪೂರ್ಣಗೊಂಡಿತು.

# ಹಿಂದೂಗಳು ಆದರ್ಶಯುತವಾಗಿ ಬಾಳಬೇಕು: ರಾಜೇಶ್ವರ ಶಿವಾಚಾರ್ಯರು

- ಮಲ್ಲಮ್ಮ ನುಡಿ ವಾರ್ತೆ,ಚಿಟಗುಪ್ಪ:



ಹಿಂದೂಗಳು ತಮ್ಮ ಶ್ರೇಷ್ಠ ಸಂಸ್ಕೃತಿ, ಆಚರಣೆ, ಏಕತೆಯ ಮೂಲಕ ಜಗತ್ತಿನಲ್ಲಿ ಆದರ್ಶ ಸಮಾಜವಾಗಿ ಬಾಳಬೇಕು' ಎಂದು ತಡೋಳ ರಾಜೇಶ್ವರ ಶಿವಾಚಾರ್ಯರು ಹೇಳಿದರು. ಪಟ್ಟಣದ ಭವಾನಿ ದೇವಸ್ಥಾನದ ಆವರಣದಲ್ಲಿ ನಡೆದ ವಿರಾಟ ಹಿಂದೂ ಸಮ್ಮೇಳನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಜಾತಿ ವ್ಯವಸ್ಥೆ ನಮ್ಮ ದೇಶಕ್ಕೆ ಅಂಟಿದ ದೊಡ್ಡರೋಗ, ಇದನ್ನು ಹೊಗಲಾಡಿಸಿದಾಗ ಮಾತ್ರ ಸ್ವಚ್ಛ, ಸುಂದರ ಭಾರತ ನಿರ್ಮಾಣ ಆಗಲು ಸಾಧ್ಯ. ಸಮಾಜದಲ್ಲಿನ ಎಲ್ಲ ಜನರನ್ನು ಒಟ್ಟುಗೂಡಿಸುವ ಕಾರ್ಯವಾದಾಗ ಮಾತ್ರ ಭಾರತ ಶಕ್ತಿಶಾಲಿ ರಾಷ್ಟ್ರವಾಗಲು ಸಾಧ್ಯ ಎಂದರು. ರಾಜಶೇಖರ ನೀಲಂಗಿ ಮಾತನಾಡಿ, ನಾವು ಹಿಂದುಗಳು ಭಾರತದಲ್ಲಿ ಸದೃಢವಾಗಿದ್ದೇವೆ. ಆದರೆ ಜಾತಿ ಮತ ಪಂಥ ಬಿಟ್ಟು ಪ್ರತಿಯೊಬ್ಬರು ನಾವು ಹಿಂದುಗಳು ಎನ್ನುವ ಮೂಲಕ ಒಗ್ಗಟ್ಟಾಗಿ ಶ್ರಮಿಸಿದಾಗ ಮಾತ್ರ ಭವ್ಯ ಭಾರತ ನಿರ್ಮಾಣವಾಗುತ್ತದೆ ಎಂದರು. ದೇಶದ ಅಭಿಮಾನ ಪ್ರತಿಯೊಬ್ಬ ಹಿಂದೂ ಬೆಳಸಿಕೊಳ್ಳಬೇಕು, ನಮ್ಮ ಸಂಸ್ಕೃತಿ ಆಚಾರ ವಿಚಾರಗಳನ್ನು ನಮ್ಮ ಮಕ್ಕಳಿಗೆ ತಿಳಿಸಿಕೊಡಬೇಕು. ಗೋಹತ್ಯೆ ಮಾಡುವುದನ್ನು ಖಂಡಿಸಬೇಕು ಎಂದರು. ಚಿಟಗುಪ್ಪ ಮತ್ತು ಚಾಂಗಲೇರಾ ಹಿರೇಮಠ ಸಂಸ್ಥಾನದ ಗುರುಲಿಂಗ ಶಿವಾಚಾರ್ಯರು, ಮರುಳಾರಾಧ್ಯ ಶಿವಾಚಾರ್ಯರು, ಬಾಲಯೋಗಿ ಅಭಿನವ ಶರಣ ಶಂಕರಲಿಂಗ ಮಹಾರಾಜರು, ಹವಾ ಮಲ್ಲಿನಾಥ ಮಹಾರಾಜರು, ಸಾನ್ನಿಧ್ಯ ವಹಿಸಿದ್ದರು. ಸೂರ್ಯಕಾಂತ ಮಠಪತಿ ಪ್ರಾಸ್ತಾವಿಕ ಮಾತನಾಡಿದರು. ವಿರಾಟ ಹಿಂದೂ ಸಮ್ಮೇಳನ ಸಮಿತಿ ಅಧ್ಯಕ್ಷ ಬಸವರಾಜ ಪಾಟೀಲ, ಗಂಗಾಧರ ಸ್ವಾಮಿ ಬಾಳೂರ್, ಪಪ್ಪು ಪಾಟೀಲ್ ಮುಖರಾದ ರಮೇಶ ಪಾರಾ, ಮಲ್ಲಿಕಾರ್ಜುನ ಪಾಟೀಲ್, ವಿಜಯಕುಮಾರ ಬೊಮ್ಮಣಿ, ಅಮೀತ ತೊಗಲೂರ್, ಪ್ರವೀಣ ರಾಜಾಪುರ್, ಪರಮೇಶ ಬಬಡಿ, ಮಲ್ಲಿಕಾರ್ಜುನ ಕಟ್ಟಿಮನಿ, ಸಾಯಿ ಸಿರ್ಕೆ, ರಾಜು ಪೂಜಾರಿ, ಗಣೇಶ ಐನಾಪುರ್, ರೇವಣ್ಣಪ್ಪ ಹೂಗಾರ, ವಿಠಲರಾವ ಪಟ್ಟಣಕರ್, ಸುರೇಶ್ ಚೌದರಿ, ವೀರೇಶ್ ತುಗಾಂವ, ರಾಜಗೋಪಾಲ ಐನಾಪುರ್, ಉದಯಕುಮಾರ್ ಬಬಡಿ, ಕಲ್ಯಾಣರಾವ ಜಾಬಾ, ಮಾರುತಿ ಸಿರ್ಕೆ, ವಿಜಯಕುಮಾರ ಸ್ವಾಮಿ ಕಲ್ಲೂರ್, ಸೂರ್ಯಕಾಂತ ಮಠಪತಿ, ಆಕಾಶ ಗುತ್ತೆದಾರ್, ವೀರಣ್ಣ ಬಾಬುಳಗಿ, ಸಚಿನ ಮಠಪತಿ, ಸಂಜುಕುಮಾರ್ ದರ್ವೆಶ್, ಶುಭಂ ರಂಗದಳ, ನಟವರ ಪವರ್, ಲಕ್ಷ್ಮಣ ಭೋವಿ ಸೇರಿದಂತೆ ಇತರರು ಇದ್ದರು. ಅಮರರೆಡ್ಡಿ ಹಸರಗೊಂಡಗಿ ಸ್ವಾಗತಿಸಿದರು. ಅಮೀತ ತೊಗಲೂರ್ ನಿರೂಪಿಸಿದರು. ಅನೀಲ ಜೋಶಿ ವಂದಿಸಿದರು.

ನಗರದ ಹಿಂದೂ ಸಮ್ಮೇಳನ ಸಮಿತಿ ವತಿಯಿಂದ ಏರ್ಪಡಿಸಿದ್ದ ವಿರಾಟ ಹಿಂದೂ ಸಮ್ಮೇಳನದ ಕಾರ್ಯಕ್ರಮದ ಅಂಗವಾಗಿ ಭವ್ಯ ಶೋಭಾ ಯಾತ್ರೆ ಜರುಗಿತ್ತು. ಇಲ್ಲಿಯ ಕುನಬಿವಾಡ ಓಣಿಯ ಹನುಮಾನ ದೇವಸ್ಥಾನದಲ್ಲಿ ಚಿಟಗುಪ್ಪ ಮತ್ತು ಚಾಂಗಲೇರಾ ಹಿರೇಮಠ ಸಂಸ್ಥಾನದ ಗುರುಲಿಂಗ ಶಿವಾಚಾರ್ಯರು ಮತ್ತು ಮರುಳಾರಾಧ್ಯ ಶಿವಾಚಾರ್ಯರು ಚಾಲನೆ ನೀಡಿದರು. ನಂತರ ಮುಖ್ಯದ್ವಾರ (ಬೇಸ್), ನೆಹರು ವೃತ್ತ, ಗಾಂಧಿ ವೃತ್ತ, ಬಸವೇಶ್ವರ ವೃತ್ತ, ಶಿವಾಜಿ ವೃತ್ತ, ಬಸವರಾಜ ವೃತ್ತದ ಮೂಲಕ ಭವಾನಿ ದೇವಸ್ಥಾನದ ಆವರಣಕ್ಕೆ ತಲುಪಿತು. ಶೋಭಾ ಯಾತ್ರೆಯಲ್ಲಿ ಜೈ ಶ್ರೀರಾಮ, ಜೈ ಹನುಮಾನ ಘೋಷಣೆಗಳು ಕೂಗಿದರು.

# ಎಸ್.ಡಿ.ಎಂ.ಸಿ. ಪದಾಧಿಕಾರಿಗಳ ಆಯ್ಕೆ.



- ಮಲ್ಲಮ್ಮ ನುಡಿ ವಾರ್ತೆ, ಬಸವಕಲ್ಯಾಣ :

ತಾಲ್ಲೂಕಿನ ರಾಜೋಳಾ ಗ್ರಾಮದ ಪಿ.ಎಂ.ಶ್ರೀ.ಸರಕಾರಿ ಆದರ್ಶ ಮಹಾವಿದ್ಯಾಲಯದ ಎಸ್.ಡಿ.ಎಂ.ಸಿ ಪದಾಧಿಕಾರಿಗಳನ್ನು ಕ್ಷೇತ್ರ ಶಿಕ್ಷಣಾಧಿಕಾರಿ ಹಾಗೂ ನೋಡಲ್ ಅಧಿಕಾರಿಗಳ ಸಮ್ಮುಖದಲ್ಲಿ ಆಯ್ಕೆ ಮಾಡಲಾಯಿತು. ಯಲ್ಲಾರೆಡ್ಡಿ ನಾರಾಯಣಪೂರೆ(ಅಧ್ಯಕ್ಷ), ಲಾಜವಂತಾ ಜ್ಞಾನರೆಡ್ಡಿ(ಉಪಾಧ್ಯಕ್ಷ), ರೇಣುಕಾ ತುಕ್ಕಾರೆಡ್ಡಿ, ಅನೀತಾ ಅನೀಲಕುಮಾರ, ಶಿವರಾಜ ರಾಜಪ್ಪ, ಉಮಾಕಾಂತ ಶಂಕ್ರೆಪ್ಪಾ, ಬಾಲಾಜಿ ಕಂಠೆಪ್ಪಾ, ವಿಜಯಕುಮಾರ ಬಿ.ವಾಡಿ, ಅನ್ವರ ಪಟೇಲ ಅವರು ಸದಸ್ಯರಾಗಿ ಹಾಗೂ ಬಾಲಾಜಿ ಪಾಟೀಲ್ ಕಾರ್ಯದರ್ಶಿಯಾಗಿ ನೇಮಕ ಗೊಂಡಿದ್ದಾರೆ..

# 'ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿಯಲ್ಲಿ ಪೋಷಕರ ಪಾತ್ರ ಹಿರಿದು'-ಕಾಟಕರ್

- ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ:

ಶಿಕ್ಷಣ ಪ್ರಕ್ರಿಯೆಯಲ್ಲಿ ಪೋಷಕರ ಪಾತ್ರ ಮಹತ್ವದ್ದಾಗಿದೆ ಎಂದು ಕರ್ನಾಟಕ ರಾಜ್ಯ ಪ್ರೌಢಶಾಲೆ ಶಿಕ್ಷಕ ಸಂಘದ ತಾಲೂಕ ಅಧ್ಯಕ್ಷ, ಪಾಲಕರ ಪ್ರತಿನಿಧಿಯಾಗಿ ದತ್ತಾತ್ರಿ ಕಾಟ್ಕರ್ ಹೇಳಿದರು. ಖಡಕೇಶ್ವರ ಪ್ರೌಢಶಾಲೆಯಲ್ಲಿ ಆಯೋಜಿಸಿದ್ದ ಪಾಲಕರ ಮಿಲನ ಕಾರ್ಯಕ್ರಮದಲ್ಲಿ ಮಾತನಾಡಿ, ಮಕ್ಕಳಿಗೆ ಮನೆಯೇ ಮೊದಲ ಪಾಠಶಾಲೆ, ಪೋಷಕರೇ ಗುರುಗಳಾಗಿರುವುದರಿಂದ, ಮಕ್ಕಳು ಮನೆಯಲ್ಲಿ ಪೋಷಕರನ್ನು ನೋಡಿ ಹೆಚ್ಚು ಅನುಕರಣೆ ಮಾಡುತ್ತಾರೆ. ಮಕ್ಕಳ ಮನಸ್ಸಿನಲ್ಲಿ ಕಲಿಕೆಯ ಪೂರಕ ವಾತಾವರಣ ಕಲ್ಪಿಸುವುದರ ಜೊತೆಗೆ ಅವರನ್ನು ಪ್ರೇರೇಪಿಸಬೇಕಾಗುತ್ತದೆ

" ಗ್ರಾಮೀಣ ಭಾಗದ ಮಕ್ಕಳಿಗೆ ಕಡಿಮೆ ಶುಲ್ಕದಲ್ಲಿ ಗುಣಾತ್ಮಕ ಶಿಕ್ಷಣ ಜೊತೆಗೆ ಸಂಸ್ಕಾರವನ್ನು ನೀಡಲಾಗುತ್ತದೆ"

ದತ್ತಾತ್ರಿ ಕಾಟ್ಕರ್
ಕರ್ನಾಟಕ ರಾಜ್ಯ ಪ್ರೌಢಶಾಲೆ ಶಿಕ್ಷಕರ ಸಂಘದ ತಾಲೂಕ ಅಧ್ಯಕ್ಷರು

" "ಮಕ್ಕಳು ದೇಶದ ಸಂಪತ್ತು. ಅವರ ಶೈಕ್ಷಣಿಕ ಪ್ರಗತಿ ಕೇವಲ ಶಾಲೆಯ ಹೊಣೆಗಾರಿಕೆಯಲ್ಲ, ಪೋಷಕರ ಜವಾಬ್ದಾರಿಯೂ ಆಗಿರುತ್ತದೆ. ಮಗುವಿನ ವ್ಯಕ್ತಿತ್ವ, ಬುದ್ಧಿಮತ್ತೆ ಮತ್ತು ನೈತಿಕ ಮೌಲ್ಯಗಳ ಬೆಳವಣಿಗೆಯಲ್ಲಿ ಪೋಷಕರ ಪಾತ್ರ ಅತ್ಯಂತ ಮಹತ್ವದ್ದು".

ಆನಂದ ಕಲ್ಯಾಣೆ ,
ಮುಖ್ಯ ಗುರುಗಳು ಖಡಕೇಶ್ವರ ಪ್ರೌಢಶಾಲೆ ಭಾಲ್ಕಿ.




ಎಂದು ತಿಳಿಸಿದರು. ಪ್ರೌಢಶಾಲೆಯ ಮುಖ್ಯಗುರು ಆನಂದ ಕಲ್ಯಾಣೆ ಪ್ರಾಸ್ತಾವಿಕವಾಗಿ ಮಾತನಾಡಿದರು. ಸಂಸ್ಥೆಯ ನಿರ್ದೇಶಕ ಅಶೋಕ ಲೋಖಂಡೆ, ಶುಭಂ ರಾಯವಾಡೆ ಸ್ವಾಗತಿಸಿದರು. ಅಂಜಲಿ ಜೋಶಿ ಸ್ವಾಗತ ಗೀತೆ ಹಾಡಿದರು. ಈ ಕಾರ್ಯಕ್ರಮವನ್ನು ಉದಯಕುಮಾರ ಜೋಶಿ ನಿರೂಪಿಸಿದರು ಪ್ರಕಾಶ ರುದನೂರೆ ವಂದಿಸಿದರು. ದಿಲೀಪ್ ಘಂಟೆ, ಜಯಪ್ರಕಾಶ ಸಹಾನೆ ಎಲ್ಲಾ ಸಿಬ್ಬಂದಿ ವರ್ಗದವರು, ಪಾಲಕರು ಉಪಸ್ಥಿತರಿದ್ದರು.

# ಫೆಬ್ರವರಿ 19 ರಂದು ಛತ್ರಪತಿ ಶಿವಾಜಿ ಜಯಂತಿಯನ್ನು ವಿಜೃಂಭಣೆಯಿಂದ ಆಚರಿಸಲು ನಿರ್ಧಾರ





ಕಲಬುರಗಿ:ಫೆಬ್ರವರಿ.09,(ಕರ್ನಾಟಕ ವಾರ್ತೆ)– ಪ್ರತಿ ವರ್ಷದಂತೆ ಈ ವರ್ಷವೂ ಕೂಡ ಛತ್ರಪತಿ ಶಿವಾಜಿ ಜಯಂತಿಯನ್ನು ಫೆಬ್ರವರಿ 19 ರಂದು ವಿಜೃಂಭಣೆಯಿಂದ ಆಚರಿಸಲು ಜಿಲ್ಲಾಧಿಕಾರಿ ಕಚೇರಿ ಸಹಾಯಕರಾದ ಶಿವಪ್ರಭು ಹಿರೇಮಠ ಅವರ ಸಭೆಯಲ್ಲಿ ನಿರ್ಧರಿಸಲಾಯಿತು.

ಶನಿವಾರದಂದು ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಜರುಗಿದ ಪೂರ್ವಭಾವಿ ಸಭೆಯಲ್ಲಿ ಅವರು ಮಾತನಾಡಿ, ಇದೇ ಫೆಬ್ರವರಿ 19 ರಂದು ಗುರುವಾರ ಮಧ್ಯಾಹ್ನ 1 ಗಂಟೆಗೆ ಕಲಬುರಗಿ ನಗರದ ಡಾ. ಎಸ್.ಎಂ ಪಂಡಿತ ರಂಗಮಂದಿರದಲ್ಲಿ ಛತ್ರಪತಿ ಶಿವಾಜಿ ಜಯಂತಿ ಕಾರ್ಯಕ್ರಮ ಜರುಗಲಿದ್ದು, ಅಧಿಕಾರಿಗಳು ಹಾಗೂ ಸಮಾಜದ ಮುಖಂಡರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮ ಯಶಸ್ವಿಗೊಳಿಸಲು ಸೂಚಿಸಿದರು.

ಅಂದು ಬೆಳಿಗ್ಗೆ 9 ಗಂಟೆಗೆ ಎಲ್ಲಾ ಜಿಲ್ಲಾ ಹಾಗೂ ತಾಲೂಕು ಮಟ್ಟದ ಸರ್ಕಾರಿ ಕಚೇರಿಗಳಲ್ಲಿ, ಶಾಲಾ–ಕಾಲೇಜುಗಳಲ್ಲಿ ಕಡ್ಡಾಯವಾಗಿ ಜಯಂತಿ ಆಚರಿಸಬೇಕು. ಸಭೆಯಲ್ಲಿ ನುರಿತ ಉಪನ್ಯಾಸಕರನ್ನು ಸಹ ಆಹ್ವಾನಿಸಲು ತೀರ್ಮಾನಿಸಲಾಯಿತು. ಕಾರ್ಯಕ್ರಮ ನಡೆಯುವ ಸ್ಥಳದಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಮಾಡುವುದರ ಜೊತೆಗೆ ಸ್ವಚ್ಛತೆ ಮತ್ತು ನೈರ್ಮಲ್ಯ ಕಾಪಾಡಬೇಕೆಂದು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಿದರು.

ಈ ಸಂದರ್ಭದಲ್ಲಿ ಜಯಂತಿ ಸಮಿತಿ ಅಧ್ಯಕ್ಷರಾಗಿ ಆರ್. ಬಿ. ಜಗದಾಳಿ ಅಧ್ಯಕ್ಷರು ಕರ್ನಾಟಕ ಕ್ಷತ್ರಿಯ ಮರಾಠ ಪರಿಷತ್ತು ಕಲಾ ಉಪನ್ಯಾಸಕರಾಗಿ ಸತೀಶ್ ಹಾನೆಗಾಂವ ಜಗದ್ಗುರು ತುಕೊಬಾರಾಯ ಸಾಹಿತ್ಯ ಪರಿಷತ್ ಸಂಘಟಕರು ಮಹಾರಾಷ್ಟ್ರ ಹಾಗೂ ಡಾ.ಸುರೇಶ ಜಾಧವ ನಿವೃತ್ತ ಕನ್ನಡ ಉಪನ್ಯಾಸಕರು ಕಾರ್ಯಕ್ರಮದ ನಿರೂಪಕರನ್ನಾಗಿ ಆಯ್ಕೆ ಮಾಡಲಾಯಿತು.

ಸಭೆಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಚೇರಿ ಸಿಬ್ಬಂದಿ ಗೌರಮ್ಮ ವಿ ಧೋಂತಾ ಅವರು ಪ್ರೋಟೋಕಾಲ್ ಪ್ರಕಾರ ಕಾರ್ಯಕ್ರಮ ಪತ್ರಿಕಾ ಆಮಂತ್ರಣ ಮುದ್ರಿಸಲಾಗುವುದು. ನಾಡಗೀತೆ, ಸಂಗೀತ ಕಾರ್ಯಕ್ರಮಗಳನ್ನು ಏರ್ಪಡಿಸಲಾಗುವುದು ಎಂದರು.

ವೇದಿಕೆ ಮೇಲೆ ಜಿಲ್ಲಾಧಿಕಾರಿ ಕಚೇರಿ ಸಹಾಯಕರಾದ ಶಿವಪ್ರಭು ಹಿರೇಮಠ, ಅಮರನಾಥ. ಜೆ. ಭೋಸ್ಲೆ, ರಮೇಶ ಚಿಚಕೋಟೆ, ಅಭಿಮನ್ಯು. ಆರ್. ಫಾಲ್ಕೆ, ಆರ್.ಬಿ.ಜಗದಾಳೆ, ನಾರಾಯಣ ರಾವ್, ಸಂದೀಪ್. ಡಿ.ಭೋಸ್ಲೆ, ದಿನಕರ್ ಫಾಲ್ಕೆ, ರಾಜು. ಎಲ್. ಕಾಕಡೆ ಹಾಗೂ ಸಮಾಜದ ಮುಖಂಡರಾದ ಇತರರು ಉಪಸ್ಥಿತರಿದ್ದರು.

ಫೆಬ್ರವರಿ 20 ರಂದು ಸಂತ ಕವಿ ಸರ್ವಜ್ಞ ಜಯಂತಿಯನ್ನು ಅರ್ಥಪೂರ್ಣವಾಗಿ ಆಚರಿಸಲು ನಿರ್ಧಾರ

ಕಲಬುರಗಿ:ಫೆಬ್ರವರಿ.09.,(ಕರ್ನಾಟಕ ವಾರ್ತೆ)–ಪ್ರತಿ ವರ್ಷದಂತೆ ಈ ವರ್ಷವೂ ಕೂಡ ಸಂತ ಕವಿ ಸರ್ವಜ್ಞ ಜಯಂತಿಯನ್ನು ಫೆಬ್ರವರಿ 20 ರಂದು ಅರ್ಥಪೂರ್ಣ ಆಚರಿಸಲು ಜಿಲ್ಲಾಧಿಕಾರಿ ಕಚೇರಿ ಸಹಾಯಕರಾದ ಶಿವಪ್ರಭು ಹಿರೇಮಠ ಅವರ ಸಭೆಯಲ್ಲಿ ನಿರ್ಧರಿಸಲಾಯಿತು.

ಶನಿವಾರದಂದು ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಜರುಗಿದ ಪೂರ್ವಭಾವಿ ಸಭೆಯಲ್ಲಿ ಅವರು ಮಾತನಾಡಿ, ಇದೇ ಫೆಬ್ರವರಿ 20 ರಂದು ಶುಕ್ರವಾರ ಮಧ್ಯಾಹ್ನ 12:30 ಗಂಟೆಗೆ ಕಲಬುರಗಿ ನಗರದ ಡಾ. ಎಸ್.ಎಂ ಪಂಡಿತ ರಂಗಮಂದಿರದಲ್ಲಿ ಸಂತ ಕವಿ ಸರ್ವಜ್ಞ ಜಯಂತಿ ಕಾರ್ಯಕ್ರಮ ಜರುಗಲಿದ್ದು, ಈ ಕಾರ್ಯಕ್ರಮದಲ್ಲಿ ಅಧಿಕಾರಿಗಳು ಹಾಗೂ ಸಮಾಜದ ಮುಖಂಡರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮ ಯಶಸ್ವಿಗೊಳಿಸಲು ಸೂಚಿಸಿದರು.

ಅಂದು ಬೆಳಿಗ್ಗೆ 9 ಗಂಟೆಗೆ ಕಡ್ಡಾಯವಾಗಿ ಎಲ್ಲಾ ಜಿಲ್ಲಾ ಹಾಗೂ ತಾಲೂಕು ಮಟ್ಟದ ಸರ್ಕಾರಿ ಕಚೇರಿಗಳಲ್ಲಿ, ಶಾಲಾ–ಕಾಲೇಜುಗಳಲ್ಲಿ ಕಡ್ಡಾಯವಾಗಿ ಜಯಂತಿ ಆಚರಿಸಬೇಕು. ಸಭೆಯಲ್ಲಿ ನುರಿತ ಉಪನ್ಯಾಸಕರನ್ನು ಸಹ ಆಹ್ವಾನಿಸಲು ತೀರ್ಮಾನಿಸಲಾಯಿತು. ಕಾರ್ಯಕ್ರಮ ನಡೆಯುವ ಸ್ಥಳದಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಮಾಡುವುದರ ಜೊತೆಗೆ ಸ್ವಚ್ಛತೆ ಮತ್ತು ನೈರ್ಮಲ್ಯ ಕಾಪಾಡಬೇಕೆಂದು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಿದರು.

ಈ ಸಂದರ್ಭದಲ್ಲಿ ಜಯಂತಿ ಸಮಿತಿ ಅಧ್ಯಕ್ಷರಾಗಿ ಶಿವಶರಣಪ್ಪ ಎಲ್ ಕುಂಬಾರ, ಉಪನ್ಯಾಸಕರಾಗಿ ಹಾಗೂ ಭಕ್ತ ಕುಂಬಾರ ಕಾರ್ಯಕ್ರಮದ ನಿರೂಪಕರನ್ನಾಗಿ ಆಯ್ಕೆ ಮಾಡಲಾಯಿತು. ಸಭೆಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಚೇರಿ ಸಿಬ್ಬಂದಿ ಗೌರಮ್ಮ ವಿ ಧೋಂತಾ ಅವರು ಪ್ರೋಟೋಕಾಲ್ ಪ್ರಕಾರ ಕಾರ್ಯಕ್ರಮ ಪತ್ರಿಕಾ ಆಮಂತ್ರಣ ಮುದ್ರಿಸಲಾಗುವುದು. ನಾಡಗೀತೆ, ಸಂಗೀತ ಕಾರ್ಯಕ್ರಮಗಳನ್ನು ಏರ್ಪಡಿಸಲಾಗುವುದು ಎಂದರು.

ವೇದಿಕೆ ಮೇಲೆ ಸಮಾಜದ ಮುಖಂಡರಾದ ಸದಾನಂದ ಕುಂಬಾರ, ವಿಠಲ ಕುಂಬಾರ, ವಿಜಯಕುಮಾರ ಕುಂಬಾರ, ಬಿ.ಡಿ. ಹವಾಲ್ದಾರ ಇತರರು ಉಪಸ್ಥಿತರಿದ್ದರು.

# ಫೆಬ್ರವರಿ 15ರಂದು ಶ್ರೀ ಸಂತ ಸೇವಾಲಾಲ್ ಮಹಾರಾಜರ ಜಯಂತಿ ಆಚರಣೆ

• ಮಲ್ಲಮ್ಮ ನುಡಿ ವಾರ್ತೆ,ಕಲಬುರಗಿ

ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಮಹಾನಗರ ಪಾಲಿಕೆ ಹಾಗೂ ಜಿಲ್ಲಾ ಪಂಚಾಯತ್ ಇವುಗಳ ಸಂಯುಕ್ತಾಶ್ರಯದಲ್ಲಿ ಸಂತ ಶ್ರೀ ಸೇವಾಲಾಲ್ ಮಹಾರಾಜರ ಜಯಂತಿ ಆಚರಣೆ ಕಾರ್ಯಕ್ರಮವನ್ನು ಫೆಬ್ರವರಿ 15 ರಂದು ರವಿವಾರ ಮಧ್ಯಾಹ್ನ 2 ಗಂ–ಟೆಗೆ ಕಲಬುರಗಿ ನಗರದ ಡಾ.ಎಸ್.ಎಂ.ಪಂಡಿತ ರಂಗಮಂದಿರದಲ್ಲಿ ಏರ್ಪಡಿಸಲಾಗಿದೆ.



ಪಂಗರಗಾ ಬೆಡ್‌ಸೂರು ಸೋನ್ಯಾಲಗಿರಿ ಶ್ರೀ ಪರವತಲಿಂಗ ಪರಮೇಶ್ವರ ಮಹಾರಾಜರು, ಚಿತ್ತಾಪುರ ತಾಲೂಕಿನ ಮುಗಳನಾಗಾಂವ ಶ್ರೀ ಯಲ್ಲಾಲಿಂಗ ಪುಣ್ಯಾಶ್ರಮ ಮಹಾನಗರ ಶ್ರೀ ಜೇಮಸಿಂಗ್ ಮಹಾರಾಜರು, ಗೊಬ್ಬುರವಾಡಿ ಸಂತ ಶ್ರೀ ಸೇವಾಲಾಲ್ ಪುಣ್ಯಶ್ರಮದ ಶ್ರೀ ಬಳಿರಾಮ ಮಹಾರಾಜರು ಹಾಗೂ ಕೆಸರಟಗಿ ಸು–ಕ್ಷೇತ್ರದ ಮಾತಾ ಲತಾದೇವಿ ಅವರು ಕಾರ್ಯಕ್ರಮದ ದಿವ್ಯಸಾನಿಧ್ಯವಹಿಸುವರು.

ರಾಜ್ಯಸಭೆಯ ವಿರೋಧ ಪಕ್ಷದ ನಾಯಕರು ಹಾಗೂ ರಾಜ್ಯಸಭಾ ಸದಸ್ಯ ಡಾ. ಮಲ್ಲಿಕಾರ್ಜುನ ಖರ್ಗೆ ಅವರು ಘನ ಉಪಸ್ಥಿತಿ ವಹಿಸುವರು. ರಾಜ್ಯದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು ಹಾಗೂ ಕಲಬುರಗಿ ಜಿಲ್ಲಾ ಉಸ್ತುವಾರಿ ಸಚಿವರಾದ ಪ್ರಿಯಾಂಕ್ ಖರ್ಗೆ ಅವರು ಕಾರ್ಯಕ್ರಮವನ್ನು ಉದ್ಘಾಟಿಸುವರು.

ರಾಜ್ಯದ ವೈದ್ಯಕೀಯ ಶಿಕ್ಷಣ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಖಾತೆ ಸಚಿವರಾದ ಡಾ. ಶರಣಪ್ರಕಾಶ ಪಾಟೀಲ, ಆಳಂದ ಶಾಸಕ ಹಾಗೂ ಕರ್ನಾಟಕ ರಾಜ್ಯ ನೀತಿ ಮತ್ತು ಯೋಜನಾ ಆಯೋಗದ ಉಪಾಧ್ಯಕ್ಷರಾದ ಬಿ.ಆರ್. ಪಾಟೀಲ, ಕರ್ನಾಟಕ ರೇಷ್ಮೆ ಉದ್ದಿಮೆಗಳ ನಿಗಮದ ನಿಯಮಿತದ ಅಧ್ಯಕ್ಷೆ ಹಾಗೂ ಉತ್ತರ ಶಾಸಕಿ ಕನೀಜ್ ಫಾತೀಮಾ, ಜೇವರ್ಗಿ ಶಾಸಕ ಮತ್ತು ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯ ಅಧ್ಯಕ್ಷ ಡಾ. ಅಜಯಸಿಂಗ್ ಅವರು ಗೌರವ ಉಪಸ್ಥಿತಿವಹಿಸುವರು. ಕಲಬುರಗಿ ದಕ್ಷಿಣ ಶಾಸಕ ಅಲ್ಲಮಪ್ರಭು ಪಾಟೀಲ ಅವರು ಕಾರ್ಯಕ್ರಮದ ಅಧ್ಯಕ್ಷತೆವಹಿಸುವರು.

ಕಲಬುರಗಿ ಲೋಕಸಭಾ ಸದಸ್ಯ ರಾಧಾಕೃಷ್ಣ ದೊಡ್ಡಮನಿ, ಬೀದರ ಲೋಕಸಭಾ ಸದಸ್ಯ ಸಾಗರ ಖಂಡ್ರೆ, ಶಾಸಕರುಗಳಾದ ಎಂ.ವೈ. ಪಾಟೀಲ, ಬಸವರಾಜ ಮತ್ತಿಮಡು, ಡಾ. ಅವಿನಾಶ ಜಾಧವ, ವಿಧಾನ ಪರಿಷತ್ ಶಾಸಕರುಗಳಾದ ಶಶೀಲ ಜಿ. ನಮೋಶಿ, ಡಾ. ಬಿ.ಜಿ.ಪಾಟೀಲ, ಡಾ. ಚಂದ್ರಶೇಖರ ಪಾಟೀಲ ಹುಮನಾಬಾದ, ತಿಮ್ಮಣ್ಣಪ್ಪ ಕಮಕನೂರ, ಸುನೀಲ್ ವಲ್ಲ್ಯಾಪುರೆ, ಡಾ. ತಳವಾರ ಸಾಬಣ್ಣ, ಜಗದೇವ ಗುತ್ತೇದಾರ್, ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮದ ಅಧ್ಯಕ್ಷ ದೇವಿಂದ್ರಪ್ಪ ಮರತೂರ, ಕರ್ನಾಟಕ ರಾಜ್ಯ ವಕ್ಫ್ ಮಂಡಳಿಯ ಅಧ್ಯಕ್ಷ ಸೈಯದ್ ಮುಹಮ್ಮದ್ ಅಲಿ ಅಲ್ ಹುಸೇನಿ, ಅಚ್ಚುಕಟ್ಟು ಪ್ರದೇಶ ಅಭಿವೃದ್ಧಿ ಮಂಡಳಿಯ ಅಧ್ಯಕ್ಷ ಅಬ್ದುಲ್ ರಶೀದ, ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದ ಅಧ್ಯಕ್ಷ ಅರುಣಕುಮಾರ್ ಎಂ.ವೈ. ಪಾಟೀಲ, ಜೆಸ್ಕಾಂ ಅಧ್ಯಕ್ಷ ಪ್ರವೀಣ ಪಾಟೀಲ ಹರವಾಳ, ಕರ್ನಾಟಕ ರಾಜ್ಯ ದ್ವಿದಳ ಧಾನ್ಯ ಅಭಿವೃದ್ಧಿ ಮಂಡಳಿಯ ಅಧ್ಯಕ್ಷ ಸೈಯ್ಯದ್ ಮಹೆಬೂಬ್ ಚಿಸ್ತಿ ಸಾಹೇಬ್, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಜಿಲ್ಲಾ ಅಧ್ಯಕ್ಷೆ ಚಂದ್ರಿಕಾ ಪರಮೇಶ್ವರ್, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಮಜಹರ್ ಆಲಂ ಖಾನ್ ಹಾಗೂ ಮಹಾನಗರಪಾಲಿಕೆ ಮಹಾಪೌರ ವರ್ಷಾ ರಾಜೀವ ಜಾನೆ ಅವರು ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳುವರು. ಕಲಬುರಗಿ ವಿಭಾಗದ ಪ್ರಾದೇಶಿಕ ಆಯುಕ್ತೆ ಜಹೀರಾ ನಸೀಮ್, ಕಲಬುರಗಿ ಈಶಾನ್ಯ ವಲಯದ ಪೊಲೀಸ್ ಉಪ ಮಹಾನಿರೀಕ್ಷಕ ಶಾಂತನು ಸಿನ್ಹಾ, ಜೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ ಕೃಷ್ಣ ಭಾಜಪೇಯಿ, ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯ ಕಾರ್ಯದರ್ಶಿ ನಲಿನ್ ಅತುಲ್, ಕೆ.ಕೆ.ಆರ್.ಟಿ.ಸಿ. ವ್ಯವಸ್ಥಾಪಕ ನಿರ್ದೇಶಕಿ ಡಾ. ಬಿ. ಸುಶೀಲಾ, ಕಲಬುರಗಿ ವಿಭಾಗದ ಶಾಲಾ ಶಿಕ್ಷಣ ಇಲಾಖೆಯ ಅಪರ ಆಯುಕ್ತ ಪಾಂಡ್ವೆ ರಾಹುಲ್ ತುಕಾರಾಮ್, ಮಾಜಿ ಸಚಿವರು ಹಾಗೂ ಶ್ರೀ ಸಂತ ಸೇವಾಲಾಲ್ ಮಹಾರಾಜ ಸಮಾಜದ ಗೌರವಾಧ್ಯಕ್ಷರಾದ ರೇವುನಾಯಕ ಬೆಳಮಗಿ ಅವರು ವಿಶೇಷ ಆಹ್ವಾನಿತರಾಗಿ ಪಾಲ್ಗೊಳ್ಳುವರು. ಕಾರ್ಯಕ್ರಮದಲ್ಲಿ ಸಮಾಜದ ಮುಖಂಡರಾದ ಡಾ. ಗಣಪತಿ ರಾಠೋಡ ಅವರು ವಿಶೇಷ ಉಪನ್ಯಾಸ ನೀಡುವರು.

# ಮೊಬೈಲ್ ಬಳಸ ಬೇಡಿ ಓದುವ ಕಡೆಗೆ ಗಮನ ಹರಿಸಿ.




ಮಲ್ಲಮ್ಮನುಡಿವಾರ್ತೆ.ಬಸವಕಲ್ಯಾಣ

ವಿದ್ಯಾರ್ಥಿಗಳು ಮೊಬೈಲ್ ಬಳಸಬೇಡಿ. ಅದೇ ಸಮಯವನ್ನು ಓದುವ ಕಡೆಗೆ ಗಮನ ಹರಿಸಿರಿ ಎಂದು ಮಂಠಾಳ ಪೊಲೀಸ್ ಠಾಣೆಯ ಪಿ. ಎಸ್. ಐ. ಸುವರ್ಣ ಮಲ್ಲಶೆಟ್ಟಿ ತಿಳಿಸಿದರು. ತಾಲೂಕಿನ ಅಲಗೂಡ ಸರ್ಕಾರಿ ಪ್ರಾಥಶಾಲೆ ಯಲ್ಲಿ ವಿದ್ಯಾರ್ಥಿಗಳಿಗೆ ಮನ ವರಿಕೆ ಮಾಡಿದೆ ಅವರು ದುಶ್ಚಟ ಗಳಿಗೆ ಬೀಳ್ಬೇಡಿ. 18ವಯಸ್ಸು ಒಳ್ಗಿ ನ ಮಕ್ಕಳು ಬೈಕ್ ಸವಾರ ಮಾಡಬಾರದು. ಅಲ್ಲದೆ ಬೈಕ್ ಸವಾರರು ಹೆಲ್ಮೆಟ್ ಕಡ್ಡಾಯವಾಗಿ ಧರಿಸ ಬೇಕು ಎಂದು ತಿಳಿಸಿದ ಅವರು ನಿಮ್ಮೆಲ್ಲರ ತಂದೆ ತಾಯಿ ಗಳು ಕಷ್ಟ ಪಟ್ಟು ಶಾಲೆಗೆ ಕಳಿಸು ತ್ತಿದಾರೆ. ಅವ್ರಿಗೆ ಒಳ್ಳೆ ಯ ಹೆಸರು ಬರ್ಬೇಕಾದ್ರೆ ನೀವು ಕಷ್ಟ ಪಟ್ಟು ಓದಿ ಉತ್ತಮ ಫಲಿ ತಾಂತ ತನ್ನಿ ಎಂದು ಶುಭ ಹಾ ರೈಯಿಸಿದರು . ಪೋಕ್ಸೋ ಕುರಿತು ಸಹ ತಿಳಿಸಿ ಇದ–ರಿಂದ ಎಚ್ಚರ ವಹಿಸಿ ಎಂದರು. ಅಧ್ಯಕ್ಷತೆ ಮುಖ್ಯ ಗುರುಗಳಾದ ರಮೇಶ ರಾಜೋಳೆ ವಹಿಸಿ ಮಾತನಾಡಿ ಮೇಡಮ ತಿಳಿಸಿದ ಎಲ್ಲಾ ವಿಚಾರಗಳು ತಾವೆಲ್ಲರೂ ಪಾಲಿಸಬೇಕು. ಎಂದ ರಲ್ಲ ದೆ ಮಹತ್ವ ದ ಮಾಹಿತಿ ನೀಡಿದ ಅಧಿಕಾರಿಗೆ ಅಭಿನಂದನೆಗಳು ತಿಳಿಸಿದರು. ಪೊಲೀಸ್ ಎಸ್. ಬಿ. ಧನ್ನೂರೆ. ಶಿಕ್ಷಕ ಸಿಬ್ಬಂದಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು. ಶಿಕ್ಷಕ ಹರ್ಷ ವರ್ಧನ್ ಕಾಂಬ್ಳೆ ನಿರೂಪಿಸಿದರು.

# ವಿದ್ಯಾಸಂಸ್ಥೆಯಲ್ಲಿಯೇ ಜಾತಿ, 371 (ಜೆ) ಪ್ರಮಾಣ ಪತ್ರ ವಿತರಣೆ

ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ,:

ಜಿಲ್ಲೆಯ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಜಿಲ್ಲಾಡಳಿತ ಹಾಗೂ ಜಿಲ್ಲಾ ಪಂಚಾಯತ್ ಇವರ ಸಹಯೋಗದಲ್ಲಿ ವಿದ್ಯಾಸಂಸ್ಥೆಗಳಲ್ಲಿಯೇ ವಿದ್ಯಾರ್ಥಿಗಳಿಗೆ ಜಾತಿ ಪ್ರಮಾಣ ಪತ್ರ ಮತ್ತು 371 (ಜೆ) ಪ್ರಮಾಣ ಪತ್ರಗಳನ್ನು ವಿತರಣೆ ಮಾಡುವ ವಿನೂತನ ಕಾರ್ಯಕ್ರಮ ಜಾರಿಗೆ ತರಲಾಗುತ್ತಿದೆ ಎಂದು ಜಿಲ್ಲಾಧಿಕಾರಿ ನಾಗೇಂದ್ರ ಪ್ರಸಾದ್.ಕೆ ಅವರು ತಿಳಿಸಿದ್ದಾರೆ. ಈ ಕಾರ್ಯಕ್ರಮದಡಿ ಬಳ್ಳಾರಿ ಜಿಲ್ಲೆಯ ಸರ್ಕಾರಿ ಹಾಗೂ ಖಾಸಗಿ ಶಾಲೆಗಳಲ್ಲಿ ವ್ಯಾಸಂಗ



ಮಾಡುತ್ತಿರುವ 10 ನೇ ತರಗತಿ ವಿದ್ಯಾರ್ಥಿಗಳಿಗೆ ಮತ್ತು ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪ್ರಥಮ ಪಿಯುಸಿ ಹಾಗೂ ದ್ವಿತೀಯ ಪಿಯುಸಿ ವರ್ಷದ ವಿದ್ಯಾರ್ಥಿಗಳಿಗೆ ವಿದ್ಯಾಸಂಸ್ಥೆಯಲ್ಲಿಯೇ ಜಾತಿ ಪ್ರಮಾಣ ಪತ್ರ ಹಾಗೂ 371 (ಜೆ) ಪ್ರಮಾಣ ಪತ್ರಗಳನ್ನು ವಿತರಿಸಲು ತೀರ್ಮಾನಿಸಲಾಗಿದೆ ಎಂದಿದ್ದಾರೆ. ವಿದ್ಯಾರ್ಥಿಗಳು ಈ ಸೌಲಭ್ಯವನ್ನು ಪಡೆಯಲು ತಮ್ಮ ಪೋಷಕರ ಜಾತಿ ಪ್ರಮಾಣ ಪತ್ರ, ಆದಾಯ ಪ್ರಮಾಣ ಪತ್ರ, ವಾಸ ಪ್ರಮಾಣ ಪತ್ರ ಹಾಗೂ ಇತರೆ ಸಂಬಂಧಿತ ದಾಖಲೆಗಳನ್ನು ತಮ್ಮ ತಮ್ಮ ಶಾಲೆ, ಕಾಲೇಜಿಗೆ ಕಡ್ಡಾಯವಾಗಿ ಸಲ್ಲಿಸಬೇಕಾಗಿರುತ್ತದೆ. ದಾಖಲೆಗಳ ಪರಿಶೀಲನೆಯ ನಂತರ ಪ್ರಮಾಣ ಪತ್ರಗಳನ್ನು ತ್ವರಿತವಾಗಿ ಶಾಲೆ ಮತ್ತು ಕಾಲೇಜುಗಳಲ್ಲೇ ವಿತರಿಸಲಾಗುವುದು. ಈ ಕಾರ್ಯಕ್ರಮದಿಂದ ವಿದ್ಯಾರ್ಥಿಗಳ ಪೋಷಕರು ಕಚೇರಿಗಳಿಗೆ ಸುತ್ತಾಟವಿಲ್ಲದೆ, ತಮ್ಮ ಮಕ್ಕಳು ವಿದ್ಯಾಭ್ಯಾಸ ಮಾಡುತ್ತಿರುವ ವಿದ್ಯಾಸಂಸ್ಥೆಯಲ್ಲಿಯೇ ಪ್ರಮಾಣ ಪತ್ರಗಳನ್ನು ಪಡೆಯಲು ಅವಕಾಶ ಕಲ್ಪಿಸಲಾಗಿದೆ ಎಂದೂ ತಿಳಿಸಿದ್ದಾರೆ. ಸಂಬಂಧಿತ ಶಾಲೆ ಹಾಗೂ ಕಾಲೇಜುಗಳ ಮುಖ್ಯಸ್ಥರು, ಉಪನ್ಯಾಸಕರು ಮತ್ತು ಆಡಳಿತ ಮಂಡಳಿಗಳು ಈ ಕಾರ್ಯಕ್ರಮದ ಯಶಸ್ಸಿಗೆ ಸಂಪೂರ್ಣ ಸಹಕಾರ ನೀಡುವಂತೆ ಜಿಲ್ಲಾಧಿಕಾರಿ ನಾಗೇಂದ್ರ ಪ್ರಸಾದ್.ಕೆ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಹೈಬ್ರಿಡ್ ದಿಲ್ಕಷ ಕಲ್ಲಂಗಡಿ ಬೆಳೆ ಕ್ಷೇತ್ರೋತ್ಸವ



• ಮಲ್ಲಮ್ಮ ನುಡಿ ವಾರ್ತೆ ಕಮಲನಗರ:

ತಾಲೂಕಿನ ಮುಧೋಳ (ಬಿ ) ಗ್ರಾಮದಲ್ಲಿ ಸೆಮಿನಿಸ್ ಕಂಪನಿಯ ವತಿಯಿಂದ ಗ್ರಾಮದ ಪ್ರಗತಿಪರ ರೈತರಾದ ಮಹೇಶ ತಂದೆ ಚಂದ್ರಕಾಂತ ಬಿಜಲವಾಡೆ ಅವರ ಜಮೀನಿನಲ್ಲಿ ಹಮ್ಮಿಕೊಳ್ಳಲಾಗಿದ್ದ 'ಹೈಬ್ರಿಡ್ ದಿಲ್ಕಷ' ಕಲ್ಲಂಗಡಿ ಕ್ಷೇತ್ರೋತ್ಸವ ಕಾರ್ಯಕ್ರಮವು ಸೋಮವಾರ ಯಶಸ್ವಿಯಾಗಿ ಜರುಗಿತು.

ಈ ವೇಳೆ ಕೃಷಿತಜ್ಞ ವಿರೇಶ ಬಿಜಲವಾಡೆ ತಳಿಯ ಕುರಿತು ರೈತರಿಗೆ ಮಾಹಿತಿ ನೀಡಿತ್ತಾ ಮಾತನಾಡಿದರು, ಇದು ಅಧಿಕ ಇಳುವರಿ ನೀಡುವ ಬೆಳೆ ಏಕರಿಗೆ 3–4 ಲಕ್ಷ ಲಾಭ ಪಡೆಯಬಹುದು. ಈ ತಳಿಯು ಅಲ್ಪ ಅವಧಿಯಲ್ಲಿ (65–70 ದಿನಗಳಲ್ಲಿ) ಹೆಚ್ಚಿನ ಇಳುವರಿ ನೀಡುತ್ತದೆ.

ಆಕರ್ಷಕ ಬಣ್ಣ ಮತ್ತು ರುಚಿ ಹೊಂದಿದ ಕಲ್ಲಂಗಡಿ ಹಣ್ಣು ಒಳಗಡೆ ಗಾಢ ಕೆಂಪು ಬಣ್ಣ ಹೊಂದಿದ್ದು, ಅತೀ ಹೆಚ್ಚು ಸಿಹಿಯಾಗಿರುತ್ತದೆ.

ಸಾಗಾಣಿಕೆಗೆ ಸೂಕ್ತವಾಗಿರುತ್ತ ಏಕೆಂದರೆ ಹಣ್ಣಿನ ಹೊರಪದರ ಗಟ್ಟಿಯಾಗಿರುವುದರಿಂದ ದೂರದ ಮಾರುಕಟ್ಟೆಗಳಿಗೆ ಸಾಗಿಸಲು ಇದು ಬಹಳ ಅನುಕೂಲಕರವಾಗಿದೆ. ಈ ಗಿಡಗಳಿಗೆ ರೋಗ ನಿರೋಧಕ ಶಕ್ತಿ ಹೆಚ್ಚು, ಗಿಡಗಳು ಹುಲುಸಾಗಿ ಬೆಳೆಯುವುದಲ್ಲದೆ, ಪ್ರಮುಖ ರೋಗಗಳ ವಿರುದ್ಧ ಉತ್ತಮ ನಿರೋಧಕ ಶಕ್ತಿ ಹೊಂದಿವೆ ಎಂದು ಹೇಳಿದರು.

ಈ ಕ್ಷೇತ್ರೋತ್ಸವದಲ್ಲಿ ಸುತ್ತಮುತ್ತಲಿನ ನೂರಾರು ರೈತರು ಭಾಗವಹಿಸಿ, ದಿಲ್ಕಷ ತಳಿಯ ಕಲ್ಲಂಗಡಿ ಬೆಳೆಯ ವಿಶೇಷತೆಗಳನ್ನು ಪ್ರತ್ಯಕ್ಷವಾಗಿ ವೀಕ್ಷಿಸಿದರು.

ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ರೈತರು, ಈ ಹೊಸ ತಳಿಯ ಬೆಳೆಯುವ ವಿಧಾನ ಮತ್ತು ಮಾರುಕಟ್ಟೆಯಲ್ಲಿನ ಬೇಡಿಕೆಯ ಬಗ್ಗೆ ತಜ್ಞರೊಂದಿಗೆ ಚರ್ಚಿಸಿ ಮಾಹಿತಿ ಪಡೆದುಕೊಂಡರು. ಗ್ರಾಮದ ಪ್ರಮುಖರು ಹಾಗೂ ಕಂಪನಿಯ ಸಿಬ್ಬಂದಿ ವರ್ಗದವರು ಈ ಸಂದರ್ಭದಲ್ಲಿ ಹೌವಾಗಿರವ ವಟಗೆ, ಶಿವಕಾಂತ ಖಂಡೆ, ಉಮಾಕಾಂತ ಪಾಟೀಲ ಬೆಂಬ್ರಾ, ಭಗವಾನ, ಶಿವಾಜಿರಾವ ಪಾಟೀಲ, ಉಪಸ್ಥಿತರಿದ್ದರು. ಪಿ. ಕೆ. ಪಿ. ಎಸ್ ಅಧ್ಯಕ್ಷ ಗುರುನಾಥ ವಟಗೆ ಕಾರ್ಯಕ್ರಮ ನಿರೂಪಣೆ ಮಾಡಿದರು.

# ಜಿಲ್ಲಾ ಗ್ರಾಮೀಣ ಪತ್ರಕರ್ತರಿಗೆ ಉಚಿತ ಬಸ್ ಪಾಸ್ ವಿತರಣೆ

ಮಲ್ಲಮ್ಮನುಡಿವಾರ್ತೆಕಲಬುರಗಿ

ಗ್ರಾಮೀಣ ಪತ್ರಕರ್ತರನ್ನು ಪ್ರೋತ್ಸಾಹಿಸುವ ಉದ್ದೇಶದಿಂದ ಕರ್ನಾಟಕ ಸರ್ಕಾರದ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ



ಇಲಾಖೆ ಜಾರಿಗೆ ತಂದಿರುವ ಯೋಜನೆಯಡಿ ಜಿಲ್ಲೆಯ ತಾಲ್ಲೂಕು ಮಟ್ಟದ ಪರ್ತಕರ್ತರಿಗೆ ಉಚಿತ ಬಸ್ ಪಾಸ್ ವಿತರಿಸಲಾಯಿತು.

ನಿಗಧಿತ ಸಂಬಳವಿಲ್ಲದೆ ಗೌರವಧನ ಪಡೆದು ಕೆಲಸ ಮಾಡುವ ಪತ್ರಕರ್ತರಿಗೆ ಸಹಾಯವಾಗಲೆಂದು ಕಳೆದ ಆಯವ್ಯಯದಲ್ಲಿ ಘೋಷಿಸಲಾಗಿದ್ದ ಈ ಯೋಜನೆಗೆ ರಾಜ್ಯಮಟ್ಟದಲ್ಲಿ ಮುಖ್ಯಮಂತ್ರಿಗಳು ಸಾಂಕೇತಿಕವಾಗಿ ಬಸ್ ಪಾಸ್ ನೀಡುವ ಮೂಲಕ ಈಗಾಗಲೇ ಮುಖ್ಯಮಂತ್ರಿಗಳು ಬೆಂಗಳೂರಿನಲ್ಲಿ ಚಾಲನೆ ನೀಡಿದ್ದರು.

ಸೋಮವಾರ ಕಲಬುರಗಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಕಚೇರಿಯಲ್ಲಿ ನಡೆದ ಸರಳ ಕಾರ್ಯಕ್ರಮದಲ್ಲಿ ನಾಲ್ವರು ಅರ್ಹ ಗ್ರಾಮೀಣ ಪತ್ರಕರ್ತರಿಗೆ ಉಚಿತ ಬಸ್ ಪಾಸ್ಗಳನ್ನು ವಿತರಿಸಲಾಯಿತು. ಈ ಯೋಜನೆಯಡಿ ತಾಲೂಕು ಮಟ್ಟದ ಅರ್ಹ ಪತ್ರಕರ್ತರು ಅಗತ್ಯ ದಾಖಲೆಗಳೊಂದಿಗೆ ಸರ್ಕಾರದ ಸೇವಾಸಿಂಧು ವೆಬ್ ಸೈಟ್ ಮೂಲಕ ಅರ್ಜಿ ಸಲ್ಲಿಸಿ ಲಾಭ ಪಡೆಯುವಂತೆ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಕಲಬುರಗಿ ಉಪನಿರ್ದೇಶಕ ಜಡಿಯಪ್ಪ ಗೆದ್ಲಗಟ್ಟಿ ಅವರು ಮನವಿ ಮಾಡಿದರು.

ಇಂದು ಕಚೇರಿಯಲ್ಲಿ ಹಮ್ಮಿಕೊಳ್ಳಲಾಗಿದ್ದ ಸರಳ ಸಮಾರಂಭದಲ್ಲಿ ನಾಲ್ವರು ಪತ್ರಕರ್ತರಿಗೆ ಜಿಲ್ಲಾ ಮಟ್ಟದ ಉಚಿತ ಬಸ್ ಪಾಸ್ ವಿತರಿಸಿ ಮಾತನಾಡಿದ ಅವರು ಜಿಲ್ಲೆಯ ಗ್ರಾಮೀಣ ಭಾಗದಲ್ಲಿ ಕಾರ್ಯನಿರ್ವಹಿಸುತ್ತಿರುವ ಪತ್ರಕರ್ತರಿಗೆ ಸರ್ಕಾರದಿಂದ ಉಚಿತ ಬಸ್ ಪಾಸ್ ಯೋಜನೆಯ ಲಾಭವನ್ನು ತಲುಪಿಸುವ ನಿಟ್ಟಿನಲ್ಲಿ ಮಹತ್ವದ ಹೆಜ್ಜೆಯೊಂದನ್ನು ಇಡಲಾಗಿದೆ. ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ಯಾವುದೇ ಬಸ್‌ಗಳಲ್ಲಿ ಜಿಲ್ಲೆಯೊಳಗೆ ಉಚಿತವಾಗಿ ಸುದ್ದಿ ಸಂಗ್ರಹಿಸಲು ಪತ್ರಕರ್ತರು ಓಡಾಡಬಹುದಾಗಿದೆ ಎಂದರು. ಈ ಉಚಿತ ಬಸ್ ಪಾಸ್ ಯೋಜನೆಯು ಗ್ರಾಮೀಣ ಪತ್ರಕರ್ತರಿಗೆ ಮಾತ್ರವಲ್ಲದೆ, ಅವರ ಮೂಲಕ ಸಮಾಜಕ್ಕೆ ಸುದ್ದಿ ಮತ್ತು ಮಾಹಿತಿಯನ್ನು ತಲುಪಿಸುವ ಪ್ರಕ್ರಿಯೆಯನ್ನು ಸುಗಮಗೊಳಿಸುತ್ತದೆ. ಸರ್ಕಾರದ ಈ ಕ್ರಮವು ಪತ್ರಿಕೋದ್ಯಮ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿರುವವರಿಗೆ ಪ್ರೋತ್ಸಾಹ ನೀಡುವ ನಿಟ್ಟಿನಲ್ಲಿ ಮಹತ್ವದ್ದಾಗಿದೆ. ಈ ಯೋಜನೆಯು ಗ್ರಾಮೀಣ ಪ್ರದೇಶಗಳಲ್ಲಿ ಸುದ್ದಿ ಸಂಗ್ರಹಣೆ ಮತ್ತು ವರದಿಗಾರಿಕೆಯಲ್ಲಿ ತೊಡಗಿರುವ ಪತ್ರಕರ್ತರಿಗೆ ಸಾರಿಗೆ ವೆಚ್ಚದ ಹೊರೆಯನ್ನು ಕಡಿಮೆ ಮಾಡಿ, ಅವರ ಕೆಲಸವನ್ನು ಸುಗಮಗೊಳಿಸುವ ಉದ್ದೇಶವನ್ನು ಹೊಂದಿದೆ. ಈಗಾಗಲೇ ಅರ್ಜಿ ಸಲ್ಲಿಸಿರುವ ಪತ್ರಕರ್ತರ ಅರ್ಜಿಗಳನ್ನು ಪರಿಶೀಲಿಸಿ, ಶಿಫಾರಸು ಮಾಡಿ ಇಲಾಖೆಯ ಕೇಂದ್ರ ಕಚೇರಿಗೆ ಕಳುಹಿಸಲಾಗಿದೆ. ಸಮಿತಿ ಸಭೆಯಲ್ಲಿ ಪರಿಶೀಲನೆ ಪ್ರಕ್ರಿಯೆ ಪೂರ್ಣಗೊಂಡ ನಂತರ ಅರ್ಹರಿಗೆ ವಿತರಣೆ ನಡೆಯಲಿದೆ ಎಂದು ಹೇಳಿದರು. ಗ್ರಾಮೀಣ ಪತ್ರಕರ್ತರಾದ ಹಿರಿಯ ಪತ್ರಕರ್ತ ಮಹಾದೇವ ವಡಗಾಂವ್, ಸೋಮೇಶ್ ಗೌಡ, ಸೂರ್ಯಕಾಂತ್ ಕಾಳಗಿ ಮತ್ತು ಡಿ.ಎಂ. ಪಾಟೀಲ್ ಅವರಿಗೆ ಬಸ್ ಪಾಸ್ಗಳನ್ನು ಹಸ್ತಾಂತರಿಸಿದರು.

ಬಸ್ ಪಾಸ್ ಸ್ವೀಕರಿಸಿ ಅನಿಸಿಕೆಗಳನ್ನು ವ್ಯಕ್ತಪಡಿಸಿದ ಹಿರಿಯ ಪತ್ರಕರ್ತ ಮಹಾದೇವ ವಡಗಾಂವ್ ಅವರು, "ಜಿಲ್ಲೆಯಲ್ಲಿ ಅನೇಕ ಅರ್ಹ ಗ್ರಾಮೀಣ ಪತ್ರಕರ್ತರು ಉಚಿತ ಬಸ್ ಪಾಸ್ ಪಡೆಯಲು ಅರ್ಜಿ ಸಲ್ಲಿಸಿದ್ದಾರೆ. ನಾವು ಅನೇಕ ವರ್ಷಗಳಿಂದ ಗ್ರಾಮೀಣ ಭಾಗಗಳಲ್ಲಿ ಪತ್ರಿಕೋದ್ಯಮದಲ್ಲಿ ತೊಡಗಿದ್ದೇವೆ. ನಮ್ಮಂತವರಿಗೆ ಇದರಿಂದ ತುಂಬಾ ಅನುಕೂಲವಾಗಲಿದೆ, ಶೀಘ್ರದಲ್ಲಿ ಅರ್ಹ ಎಲ್ಲಾ ತಾಲ್ಲೂಕು ಮಟ್ಟದ ಪತ್ರಕರ್ತರಿಗೆ ಈ ಯೋಜನೆಯ ಲಾಭ ಸಿಗಲಿ ಎಂದರು. ಈ ಸಂದರ್ಭದಲ್ಲಿ ಇಲಾಖೆಯ ಸಿಬ್ಬಂದಿಗಳಾದ ಡಿ.ಕೆ. ರಾಜರತ್ನ, ಉಮಾಶಂಕರ್ ಚಿನಮಳ್ಳಿ, ಸೈಯದ್ ಇಸ್ಮಾಯಿಲ್ ಪಾಷಾ, ಮಹಾದೇವಿ ಎಸ್. ಕುರ್ತ ಕೋಟಿ ಸೇರಿದಂತೆ ಹಲವರು ಉಪಸ್ಥಿತರಿದ್ದರು.




ಕಲಬುರಗಿ: ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ (ಡಾ.ಅಂಬೇಡ್ಕರ ಕ್ರಾಂತಿ) ನೇತೃತ್ವದಲ್ಲಿ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ಕಚೇರಿ ಎದುರು ಧರಣಿ ಸತ್ಯಾಗ್ರಹ ಕೈಗೊಂಡು, ಕಳೆದ 2022–23ನೇ ಸಾಲಿನ ಧೂಳನೂರ–ಮೋಗನಿಟಗಾ ಬಾಕಿ 9.72 ಕೋಟಿ ರೂ.ಗಳ ಕಾಮಗಾರಿಯನ್ನು ಕೈಗೊಳ್ಳದೇ 2 ವರ್ಷಗಳ ವಿಳಂಬ ಮಾಡಿ ಸರ್ಕಾರಕ್ಕೆ ತಪ್ಪಾಗಿ ಮಾಹಿತಿ ನೀಡಿ ಅವ್ಯವಹಾರ ಮಾಡುವ ಹುನ್ನಾರ ಮಾಡಿರುವ ಇಲಾಖೆಯ ಎಇಇ ಅವರನ್ನು ಸೇವೆಯಿಂದ ಅಮಾನತ್ತು ಗೊಳಿಸುವಂತೆ ಆಗ್ರಹಿಸಿ ಬೇಡಿಕೆಯ ಮನವಿ ಪತ್ರವನ್ನು ಇಲಾಖೆಯ ಮುಖ್ಯಸ್ಥರ ಮುಖಾಂತರ ಸಚಿವರಾದ ಪ್ರೀಯಾಂಕ್ ಖರ್ಗೆ ಅವರಿ ಸಲ್ಲಿಸಲಾಯಿತು. ಸಂಸ್ಥಾಪಕ ಸಂಗಮನಾಥ ಬಟಗೇರಿ, ಸಂಚಾಲಕ ಕುಪೇಂದ್ರ ಬಿಲ್ವಾಡ, ರಾಮರಾವ ಹೇರೂರ, ರಾಜಕುಮಾರ ನಡಗೇರಿ, ಗೌತಮ ಸಂಗೋಳಗಿ, ವಿಜಯಕುಮಾರ ಚಿಂಚೋಳಿ, ಶಿವಾಜಿ, ಸಂತೋಷ, ಕಾಶೀನಾಥ, ಜೈ ಶಂಕರ್, ಪಂಸು ಸೇರಿದಂತೆ ಹಲವರಿದ್ದರು.

# ಕುರುಬರ ಎಸ್.ಟಿ ಮೀಸಲಾತಿ ಹೋರಾಟ ತೀವ್ರಗತಿ ಫೆ.23ರಂದು ಯಾದಗಿರಿಯಲ್ಲಿ ಮಹಾ ಜಾಗೃತಿ ಸಮಾವೇಶ.

ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ.

ಕುರುಬ ಸಮಾಜಕ್ಕೆ ನ್ಯಾಯಯುತ ಪರಿಶಿಷ್ಟ ಪಂಗಡ (ಎಸ್.ಟಿ) ಮೀಸಲಾತಿ ಕಲ್ಪಿಸುವಂತೆ ಒತ್ತಾಯಿಸಿ ಫೆಬ್ರವರಿ 23ರಂದು ಯಾದಗಿರಿ ನಗರದಲ್ಲಿ ರಾಜ್ಯಮಟ್ಟದ ಬೃಹತ್ ಜಾಗೃತಿ ಸಮಾವೇಶ ಹಮ್ಮಿಕೊಳ್ಳಲಾಗಿದೆ ಎಂದು ಕರ್ನಾಟಕ ರಾಜ್ಯ ಮಟ್ಟದ ಕುರುಬರ ಸಂಘದ ರಾಜ್ಯ ಗೌರವಾಧ್ಯಕ್ಷ ಸಿದ್ದಣ್ಣ ತೇಜಿ ಅವರು ತಿಳಿಸಿದರು. ಯಾದಗಿರಿ ಜಿಲ್ಲಾ ಘಟಕದ ಆಶ್ರಯದಲ್ಲಿ ನಡೆಯುವ ಈ ಜಾಗೃತಿ ಸಮಾವೇಶವು ಲಿಂಗೈಕ್ಯರಾದ ಶ್ರೀಶ್ರೀಶ್ರೀ ಸಿದ್ಧರಮಾನಂದಪೂರಿ ಮಹಾಸ್ವಾಮಿಗಳು, ಕಾಗಿನೆಲೆ ಕನಕಗುರುಪೀಠ, ತಿಂಥಣಿ ಬ್ರಿಡ್ಜ್ ಅವರ ದಿವ್ಯ ಆಶೀರ್ವಾದದೊಂದಿಗೆಜರುಗಲಿದೆ. ರಾಜ್ಯದ ವಿವಿಧ ಜಿಲ್ಲೆಗಳಿಂದ ಸಾವಿರಾರು ಸಮಾಜಬಾಂಧವರು, ಹೋರಾಟಗಾರರು, ಮುಖಂಡರು ಹಾಗೂ ಸಾರ್ವಜನಿಕರು ಭಾಗವಹಿಸುವ ನಿರೀಕ್ಷೆ ಇದೆ ಎಂದು ಅವರು ಹೇಳಿದರು. ಕುರುಬ ಸಮಾಜಕ್ಕೆ ಸಂವಿಧಾನಬದ್ಧವಾಗಿ ದೊರೆಯಬೇಕಾದ ಎಸ್.ಟಿ ಸ್ಥಾನಮಾನಕ್ಕಾಗಿ ಹಲವು ದಶಕಗಳಿಂದ ಹೋರಾಟ ನಡೆಯುತ್ತಿದ್ದು, ಹಳ್ಳಿಯಿಂದ ದೆಹಲಿವರೆಗೆ ಸ್ವಾಭಿಮಾನ ಹಾಗೂ ಸಂವಿಧಾನಬದ್ಧ ಹಕ್ಕಿಗಾಗಿ ನಡೆಯುತ್ತಿರುವ ಹೋರಾಟಕ್ಕೆ ಈ ಸಮಾವೇಶ ಹೊಸ ತಿರುವು ನೀಡಲಿದೆ. ಸಮಾವೇಶದ ಮೂಲಕ ಹೋರಾಟವನ್ನು ಮತ್ತಷ್ಟು ಸಂಘಟಿತವಾಗಿ ಮುಂದುವರಿಸುವ ಕುರಿತು ತೀರ್ಮಾನ ಕೈಗೊಳ್ಳಲಾಗುತ್ತದೆ ಎಂದು ಸಂಘಟನೆ ತಿಳಿಸಿದೆ.



**ಐತಿಹಾಸಿಕ ಅನ್ಯಾಯ ಸರಿಪಡಿಸಲು ಆಗ್ರಹ**

1976–77ರಲ್ಲಿ ದೇವರಾಜ್ ಅರಸು ಮುಖ್ಯಮಂತ್ರಿಗಳಾಗಿದ್ದ ಅವಧಿಯಲ್ಲಿ ಮಂಡಲ ಆಯೋಗದ ವರದಿ ಜಾರಿಗೆ ಬಂದ ಸಂದರ್ಭದಲ್ಲಿ ಪರಿಶಿಷ್ಟ ಪಂಗಡ ಪಟ್ಟಿಯಲ್ಲಿ ಇದ್ದ ಕುರುಬ ಸಮಾಜವನ್ನು 24ನೇ ಹಿಂದುಳಿದ ವರ್ಗಕ್ಕೆ ಸೇರಿಸಿದ ಕ್ರಮ ಐತಿಹಾಸಿಕ ಅನ್ಯಾಯವಾಗಿದ್ದು, ಅದನ್ನು ತಕ್ಷಣ ಸರಿಪಡಿಸಬೇಕು ಎಂದು ಒತ್ತಾಯಿಸಲಾಗಿದೆ. ಎಲ್.ಜಿ. ಹಾವನೂರ್ ಆಯೋಗದ ವರದಿ ಸಂದರ್ಭದಲ್ಲೂ ಕೇಂದ್ರ ಸರ್ಕಾರದ ಯಾವುದೇ ಅಧಿಕೃತ ಆದೇಶವಿಲ್ಲದೆ ಕುರುಬ ಸಮಾಜವನ್ನು ಹಿಂದುಳಿದ ವರ್ಗಕ್ಕೆ ಸೇರಿಸಿರುವ ಕ್ರಮವನ್ನು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ತಿದ್ದುಪಡಿ ಮಾಡಬೇಕು ಎಂಬ ಬೇಡಿಕೆ ಮುಂದಿರಿಸಲಾಗಿದೆ.

**ಅಧ್ಯಯನ ವರದಿ ಜಾರಿಗೆ ಒತ್ತಾಯ**

ಮೈಸೂರು ಕುಲ ಶಾಸ್ತ್ರೀಯ ಅಧ್ಯಯನ ಸಂಶೋಧನಾ ಸಂಸ್ಥೆಯ ವರದಿಯನ್ನು ಕೇಂದ್ರ ಸರ್ಕಾರ ತಕ್ಷಣ ಅಂಗೀಕರಿಸಿ, ಅದರ ಆಧಾರದಲ್ಲಿ ಕುರುಬ ಸಮಾಜಕ್ಕೆ ಎಸ್.ಟಿ ಸ್ಥಾನಮಾನ ನೀಡಬೇಕು. ಇತ್ತೀಚಿನ ಸಚಿವ ಸಂಪುಟ ಸಭೆಯಲ್ಲಿ ನಿರ್ಣಯಗೊಂಡ ಪರಿಶಿಷ್ಟ ಪಂಗಡ ಸಂಬಂಧಿತ ವರದಿಯನ್ನು ಯಥಾವತ್ತಾಗಿ ಜಾರಿಗೊಳಿಸಬೇಕು ಎಂದು ಆಗ್ರಹಿಸಲಾಗಿದೆ.

ಶೈಕ್ಷಣಿಕ, ಉದ್ಯೋಗ, ಸಾಮಾಜಿಕ ಹಾಗೂ ರಾಜಕೀಯವಾಗಿ ಹಿಂದುಳಿದಿರುವ ಕುರುಬ ಸಮಾಜಕ್ಕೆ ತಕ್ಷಣ ಎಸ್.ಟಿ ಮೀಸಲಾತಿ ಕಲ್ಪಿಸುವ ಮೂಲಕ ಸಮಾನ ನ್ಯಾಯ ಒದಗಿಸಬೇಕು ಎಂಬುದೂ ಪ್ರಮುಖ ಬೇಡಿಕೆಯಾಗಿದೆ.

**ಪ್ರಮಾಣಪತ್ರ ವಿತರಣೆಯಲ್ಲಿ ಏಕಸಮಾನತೆ**

ಹಳೆಯ ಮೈಸೂರು ಭಾಗದಲ್ಲಿ ಕಾಡುಕುರುಬ, ಜೇನುಕುರುಬರಿಗೆ ನೀಡುತ್ತಿರುವ ಪರಿಶಿಷ್ಟ ಪಂಗಡ ಪ್ರಮಾಣಪತ್ರ ಮಾದರಿಯಂತೆ ಕಲ್ಯಾಣ ಕರ್ನಾಟಕದ ಬೀದರ್, ಕಲಬುರಗಿ, ಯಾದಗಿರಿ ಜಿಲ್ಲೆಗಳಲ್ಲಿ ಗೊಂಡ, ರಾಜಗೊಂಡ ಸಮುದಾಯಗಳಿಗೆ ಯಾವುದೇ ತಾರತಮ್ಯವಿಲ್ಲದೆ ಪರಿಶಿಷ್ಟ ಪಂಗಡ ಪ್ರಮಾಣಪತ್ರ ನೀಡುವಂತೆ ರಾಜ್ಯಾದ್ಯಂತ ಏಕಸಮಾನ ಆದೇಶ ಜಾರಿಗೊಳಿಸಬೇಕು ಎಂದು ಒತ್ತಾಯಿಸಲಾಗಿದೆ.

**ದೆಹಲಿ ಹೋರಾಟಕ್ಕೆ ಎಚ್ಚರಿಕೆ**

ಮುಂದಿನ ಲೋಕಸಭಾ ಅಧಿವೇಶನದೊಳಗೆ ಕುರುಬ ಸಮಾಜದ ನ್ಯಾಯಯುತ ಬೇಡಿಕೆ ಈಡೇರದಿದ್ದಲ್ಲಿ, ದೆಹಲಿಯ ರಾಮಲೀಲಾ ಮೈದಾನ ಅಥವಾ ಜಂತರ್ ಮಂತರ್‌ನಲ್ಲಿ ನಿರಂತರ ಹೋರಾಟ ಹಮ್ಮಿಕೊಳ್ಳುವುದಾಗಿ ಸಂಘಟನೆಗಳು ಎಚ್ಚರಿಕೆ ನೀಡಿವೆ.

ಈ ಸಂದರ್ಭದಲ್ಲಿ ರಾಜ್ಯ ಗೌರವಾಧ್ಯಕ್ಷ ಸಿದ್ದಣ್ಣ ತೇಜಿ, ರಾಜ್ಯ ಸಂಘಟಕರು ಕರಿಯಪ್ಪ ಕರಿಗಾರ್, ಜಿಲ್ಲಾ ಗೌರವಾಧ್ಯಕ್ಷ ಪರಸಣ್ಣ ಗೌಡರು, ಜಿಲ್ಲಾಧ್ಯಕ್ಷ ಶಿವಕುಮಾರ್ ಮುನಗಲ್, ಜಿಲ್ಲಾ ಉಪಾಧ್ಯಕ್ಷ ರಾಘವಾಂಕ ಪಾಟೀಲ ಜೈಗ್ರಾಮ, ಜಿಲ್ಲಾ ಕಾರ್ಯಾಧ್ಯಕ್ಷ ಭೀಮು ಪೂಜಾರಿ, ಯುವ ಘಟಕ ಜಿಲ್ಲಾಧ್ಯಕ್ಷ ನಿಜಲಿಂಗಪ್ಪ ಸಂಭ್ರ, ರವೀಂದ್ರಕುಮಾರ್ ಕಡೇಚೂರು, ತಾಲೂಕು ಅಧ್ಯಕ್ಷ ಸಿದ್ದು ಪೂಜಾರಿ (ಅರಕೇರಾ ಬಿ), ಪ್ರಧಾನ ಕಾರ್ಯದರ್ಶಿ ಸಿದ್ಧನಗೌಡ ಹುಣಸಗಿ, ತಾಲೂಕು ಪ್ರಧಾನ ಕಾರ್ಯದರ್ಶಿ ಗಿರೀಶ ಕವಡೆ (ನೀಲಹಳ್ಳಿ), ಶಹಾಪುರ ತಾಲೂಕು ಅಧ್ಯಕ್ಷ ರೇವಣಸಿದ್ದಪ್ಪ, ದೇವಿಂದ್ರಪ್ಪ ಮಾಡಿಗಿ, ಬೀರಪ್ಪ ನಸಲವಾಯಿ, ಮಾಳಪ್ಪ ಪೂಜಾರಿ ಬಬಲಾದ, ತಾಯಪ್ಪ ಕರಣಿಗಿ ಸೇರಿದಂತೆ ಹಲವರು ಉಪಸ್ಥಿತರಿದ್ದರು.

## ಕೂಲಿ ಕಾರ್ಮಿಕರಿಗೆ ಆರೋಗ್ಯ ಜಾಗೃತಿ ಹಾಗೂ ಉಚಿತ ತಪಾಸಣೆ




• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ.

ಅಬ್ಬೆ ತುಮಕೂರು: ಡಾನ್ ಬೋಸ್ಕೊ ಮೊಬೈಲ್ ಕ್ಲಿನಿಕ್ ವತಿಯಿಂದ ಫೆಬ್ರವರಿ 9, 2026ರಂದು ಅಬ್ಬೆ ತುಮಕೂರು ಗ್ರಾಮದಲ್ಲಿ ಕೂಲಿ ಕಾರ್ಮಿಕರಿಗೆ ಆರೋಗ್ಯ ಜಾಗೃತಿ ಹಾಗೂ ಉಚಿತ ಪ್ರಾಥಮಿಕ ಆರೋಗ್ಯ ತಪಾಸಣೆ ಕಾರ್ಯಕ್ರಮವನ್ನು ಯಶಸ್ವಿಯಾಗಿ ಆಯೋಜಿಸಲಾಯಿತು.

ಈ ಜಾಗೃತಿ ಕಾರ್ಯಕ್ರಮದಲ್ಲಿ ಉದ್ಯೋಗ ಖಾತ್ರಿ ಯೋಜನೆಯಡಿ ಕೆಲಸ ಮಾಡುತ್ತಿರುವ ಒಟ್ಟು 22 ಕೂಲಿ ಕಾರ್ಮಿಕರು ಭಾಗವಹಿಸಿದ್ದರು. ಭಾಗವಹಿಸಿದವರು ಆಸಕ್ತಿಯಿಂದ ಆರೋಗ್ಯ ಸಂಬಂಧಿತ ಮಾಹಿತಿಯನ್ನು ಆಲಿಸಿ, ಸ್ವಚ್ಛತೆಯ ಮಹತ್ವ, ಪೌಷ್ಟಿಕಾಂಶಯುಕ್ತ ಆಹಾರ ಸೇವನೆ ಹಾಗೂ ಆರೋಗ್ಯಕರ ಜೀವನಶೈಲಿಯ ಕುರಿತು ತಿಳಿದುಕೊಂಡರು. ದಿನನಿತ್ಯದ ದುಡಿಮೆಯ ನಡುವೆ ಆರೋಗ್ಯವನ್ನು ನಿರ್ಲಕ್ಷ್ಯ ಮಾಡದೇ, ನಿಯಮಿತವಾಗಿ ತಪಾಸಣೆ ಮಾಡಿಸಿಕೊಳ್ಳಬೇಕೆಂಬ ಸಲಹೆ ನೀಡಲಾಯಿತು. ಜಾಗೃತಿ ಕಾರ್ಯಕ್ರಮದ ಬಳಿಕ ಡಾನ್ ಬೋಸ್ಕೊ ಮೊಬೈಲ್ ಕ್ಲಿನಿಕ್ ತಂಡದ ವತಿಯಿಂದ ಪ್ರಾಥಮಿಕ ಆರೋಗ್ಯ ತಪಾಸಣೆ ನಡೆಸಲಾಯಿತು. ಸಾಮಾನ್ಯ ಆರೋಗ್ಯ ಪರೀಕ್ಷೆ ಹಾಗೂ ರಕ್ತದೊತ್ತಡ ತಪಾಸಣೆ ಮಾಡಲಾಗಿದ್ದು, ಅಗತ್ಯವಿರುವವರಿಗೆ ಉಚಿತವಾಗಿ ಔಷಧಿಗಳನ್ನು ವಿತರಿಸಲಾಯಿತು. ಒಟ್ಟು 52 ಜನರಿಗೆ ಆರೋಗ್ಯ ತಪಾಸಣೆ ನಡೆಸಲಾಗಿದ್ದು, ಇದರಲ್ಲಿ 28 ಪುರುಷರು, 23 ಮಹಿಳೆಯರು ಹಾಗೂ 1 ಮಗು ಸೇರಿದ್ದರು. ಎಲ್ಲ ಫಲಾನುಭವಿಗಳಿಗೆ ಸೂಕ್ತ ಆರೋಗ್ಯ ಸಲಹೆಗಳನ್ನು ನೀಡಲಾಯಿತು. ಡಾನ್ ಬೋಸ್ಕೊ ಸಮಾಜ ಸೇವಾ ಕೇಂದ್ರದ ವತಿಯಿಂದ ಗ್ರಾಮಸ್ಥರಿಗೆ ಉಚಿತವಾಗಿ ಪ್ರಾಥಮಿಕ ಆರೋಗ್ಯ ತಪಾಸಣೆ ಸೇವೆ ನೀಡಲಾಗುತ್ತಿದ್ದು, ಯಾರಿಗಾದರೂ ಗಂಭೀರ ಆರೋಗ್ಯ ಸಮಸ್ಯೆಗಳು ಕಂಡುಬಂದಲ್ಲಿ ಅವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿ ಅಗತ್ಯ ಚಿಕಿತ್ಸೆಗೆ ದಾಖಲಿಸಲಾಗುತ್ತದೆ ಎಂದು ಮಾಹಿತಿ ನೀಡಲಾಯಿತು. ಈ ಕಾರ್ಯಕ್ರಮದಿಂದ ಗ್ರಾಮಸ್ಥರಲ್ಲಿ ಸಾಮಾನ್ಯ ಆರೋಗ್ಯ ಕುರಿತು ಅರಿವು ಹೆಚ್ಚಿದ್ದು, ಉಚಿತ ಆರೋಗ್ಯ ಸೇವೆ ಹಾಗೂ ಔಷಧಿಗಳನ್ನು ಪಡೆದು ಫಲಾನುಭವಿಗಳು ಸಂತೋಷ ಹಾಗೂ ತೃಪ್ತಿ ವ್ಯಕ್ತಪಡಿಸಿದರು. ಇಂತಹ ಕಾರ್ಯಕ್ರಮಗಳು ರೋಗಗಳ ಆರಂಭಿಕ ಪತ್ತೆ ಹಾಗೂ ಸಮುದಾಯದ ಒಟ್ಟಾರೆ ಆರೋಗ್ಯ ಸುಧಾರಣೆಗೆ ಸಹಕಾರಿಯಾಗುತ್ತವೆ ಎಂದು ಗ್ರಾಮಸ್ಥರು ಅಭಿಪ್ರಾಯ ವ್ಯಕ್ತಪಡಿಸಿದರು.

ಈ ಕಾರ್ಯಕ್ರಮವನ್ನು ಡಾನ್ ಬೋಸ್ಕೊ ಸಮಾಜ ಸೇವಾ ಕೇಂದ್ರದ ನಿರ್ದೇಶಕರಾದ ಫಾದರ್ ಶಾಬು ಫ್ರಾನ್ಸಿಸ್ ರವರ ಮಾರ್ಗದರ್ಶನದಲ್ಲಿ, ಮೊಬೈಲ್ ಕ್ಲಿನಿಕ್ ತಂಡದ ಸಿಬ್ಬಂದಿಗಳಾದ ಸಿದ್ದಮ್ಮ (ಸ್ಟಾಫ್ ನರ್ಸ್), ಆರೋಗ್ಯ ಕಾರ್ಯಕರ್ತರಾದ ಮರೆಮ್ಮ ಮತ್ತು ಬಸವರಾಜ ಅವರು ಯಶಸ್ವಿಯಾಗಿ ನಡೆಸಿಕೊಟ್ಟರು.

## ಸೈದಾಪುರದಿಂದ ಶ್ರೀಶೈಲಕ್ಕೆ 17ನೇಯ ಪಾದಯಾತ್ರೆ

• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ:

ಪ್ರತಿವರ್ಷದಂತೆ ಈ ವರ್ಷ ಕೂಡ 17ನೆಯ ಪಾದಯಾತ್ರೆಯನ್ನು ಸೈದಾಪುರದಿಂದ ಶ್ರೀಶೈಲ ಮಲ್ಲಿಕಾರ್ಜುನ ದೇವಸ್ಥಾನಕ್ಕೆ ಪ್ರತಿ ವರ್ಷ ಕಾಲ್ನಡಿಗೆ ಮೂಲಕ ನೂರಾರು ಭಕ್ತರು ಶ್ರೀಶೈಲ ಮಲ್ಲಿಕಾರ್ಜುನ ದರ್ಶನಕ್ಕೆ ಪಾದಯಾತ್ರೆ ಮೂಲಕ ಪ್ರಯಾಣ ಬೆಳೆಸಿದರು, ಈ ಸಂದರ್ಭದಲ್ಲಿ ಊರಿನ ಭಕ್ತ ಸಮೂಹಗಳಾದ ತಿಮ್ಮಣ್ಣ ವಿಶ್ವಕರ್ಮ, ದಶರಥ ಕಡೆಚೂರು, ನಾಗರಾಜ್ ಗೌಡ , ಬನ್ನಯ ಸ್ವಾಮಿ, ಸಾಬಣ್ಣ ಹುಲಗುಂಡಿ, ರಮೇಶ್ ಮುನಗಲ್, ಭೀಮಣ್ಣ ಜೇಗರ್, ಭರತ್ ಕುಮಾರ್, ಸಾಬಣ್ಣ ಗೂಗಲ್, ಹುಸೇನ್ ಬಾಗಲಿ , ಸಾಬೂ ಚಿಗರಿ ಊರಿನ ಸದ್ಭಕ್ತರು 7 ದಿನಗಳ ಕಾಲ ಪಾದಯಾತ್ರೆ ಮೂಲಕ ಶ್ರೀಶೈಲಕ್ಕೆ ಪ್ರಯಾಣ ಬೆಳೆಸಿದರು.



## ಶಾಸಕ ಶರಣಗೌಡ ಕಂದಕೂರು ಸಾಂತ್ವನ ಭೇಟಿ.

• ಮಲ್ಲಮ್ಮ ನುಡಿ ವಾರ್ತೆ: ಗುರುಮಠಕಲ್

ಗುರುಮಠಕಲ್: ಶಾಸಕ ಶರಣಗೌಡ ಕಂದಕೂರು ಸೋಮವಾರ ವೀರಶೈವ ಲಿಂಗಾಯತ ಸಮಾಜದ ಸೂಗಯ್ಯ ಸ್ವಾಮಿ ಕುಂಬರೊಳಮಠ ಅವರ ನಿವಾಸಕ್ಕೆ ತೆರಳಿ ಇತ್ತೀಚಿಗೆ ತಿವ್ರ ಅನಾರೋಗ್ಯದಿಂದ ಮೃತರಾದ ಅವರ ಧರ್ಮಪತ್ನಿ ದಿ.ಶ್ರೀಮತಿ ನಾಗಮಣಿ ಅವರ ನಿಧನಕ್ಕೆ ಸಾಂತ್ವನ ಸೂಚಿಸಿ ಕುಟುಂಬ ಸದಸ್ಯರಿಗೆ ಧೈರ್ಯ ತುಂಬಿದರು.ಈ ಸಂದರ್ಭದಲ್ಲಿ ರುದ್ರಯ್ಯ ಸ್ವಾಮಿ ಕುಂಬಾರೊಳ ಮಠ, ವೀರಶೈವ ಸಮಾಜದ ಅಧ್ಯಕ್ಷ ಶಿವಾನಂದ ಬೂದಿ, ನಿಕಟ ಪೂರ್ವ ಅಧ್ಯಕ್ಷ ಮಲ್ಲಿಕಾರ್ಜುನ ಹಿರೇಮಠ, ಶರಣು ಅವಂಟಿ, ಅವಂತಿಕ ಅವಂಟಿ, ರವಿಕುಮಾರ್ ಕೊಟಕೊಂಡಿ, ರಘುನಾಥರೆಡ್ಡಿ ಪಾಟೀಲ, ರಾಜೇಶ್ವರ ರೆಡ್ಡಿ, ಕನ್ನಯ್ಯ ಪಡಿಗೆ, ಭೀಮಾಶಂಕರ ಪಡಿಗೆ, ಶರಣಪ್ಪ ಕುಂಬಾರ, ಭಾನು ಪ್ರಕಾಶ ಮೇಧಾ, ಶೇಷಪ್ಪ



ಬುರ್ಜು, ಸುನಿಲ್ ಢಗೆ ಪಕ್ಷದ ಕಾರ್ಯಕರ್ತರು ಹಾಜರಿದ್ದರು.

## ಐಆರ್ ಎಂಎಸ್ ಗೆ ಆಯ್ಕೆಯಾದ ಗುರುಕುಲ ವಿದ್ಯಾರ್ಥಿ ಅರುಣ್ :ಸಂತಸ



ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ:

ತಾಲ್ಲೂಕಿನ ಶ್ರೀ ಚನ್ನಬಸವೇಶ್ವರ ಗುರುಕುಲ ವಿಜ್ಞಾನ ಪಿಯು ಕಾಲೇಜಿನ ವಿದ್ಯಾರ್ಥಿ ಅರುಣ್ ಅಶೋಕ ಕಾರಗಾರ್ ಯೂನಿಯನ್ ಪಬ್ಲಿಕ್ ಸರ್ವಿಸ್ ಕಮಿಷನ್ ನಡೆಸುವ

ಇಂಡಿಯನ್ ರೈಲ್ವೆ ಮ್ಯಾನೇಜ್ಮೆಂಟ್ ಸರ್ವಿಸ್ ಗೆ ಆಯ್ಕೆಯಾಗಿದ್ದಾನೆ ಎಂದು ಪ್ರಾಚಾರ್ಯ ಬಸವರಾಜ್ ಮೊಳಕೀರೆ ತಿಳಿಸಿದ್ದಾರೆ.

ಮೂಲತಃ ಚಿಟಗುಪ್ಪ ಗ್ರಾಮದವನಾದ ಅರುಣ್ ತಮ್ಮ ಪಿಯು ಶಿಕ್ಷಣವನ್ನು ನಮ್ಮ ಕಾಲೇಜಿನಲ್ಲಿ ಮುಗಿಸಿದ್ದಾನೆ. ನಂತರ ಬೆಂಗಳೂರಿನ ಮೆಡಿಕಲ್ ಕಾಲೇಜಿಗೆ ಆಯ್ಕೆಯಾಗಿದ್ದನು.

ಯುಪಿಎಸ್ಸಿ ಪರೀಕ್ಷೆ ಪಾಸ್ ಆಗಬೇಕೆಂಬ ದೃಢ ಸಂಕಲ್ಪದಿಂದ ಎಂಬಿಬಿಎಸ್ ಪದವಿ ತೊರೆದು,

ಬಿಎ ಪದವಿ ಮುಗಿಸಿಕೊಂಡು ಈಗ ಯುಪಿಎಸ್ಸಿ ಪರೀಕ್ಷೆಯಲ್ಲಿ 918 ಅಗ್ರ ಶ್ರೇಣಿ ಪಡೆದು ವಿಜಯವಾಡದಲ್ಲಿ ಕರ್ತವ್ಯಕ್ಕೆ ನಿಯೋಜನೆಗೊಂಡಿದ್ದು, ಅರುಣಾಚಲ ಪ್ರದೇಶದಲ್ಲಿ ತರಬೇತಿಯನ್ನು ಪಡೆಯುತ್ತಿದ್ದಾನೆ.

ವಿದ್ಯಾರ್ಥಿಯ ಸಾಧನೆಗೆ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷರಾದ ನಾಡೋಜ ಡಾ.ಬಸವಲಿಂಗ ಪಟ್ಟದ್ದೇವರು, ಹಿರೇಮಠದ ಪೀಠಾಧಿಪತಿ ಗುರುಬಸವ ಪಟ್ಟದ್ದೇವರು, ಕಾರ್ಯದರ್ಶಿ ಮಹಾಲಿಂಗ ಸ್ವಾಮೀಜಿ, ಆಡಳಿತಾಧಿಕಾರಿ ಮೋಹನ ರೆಡ್ಡಿ, ಪ್ರಾಚಾರ್ಯ ಬಸವರಾಜ ಮೊಳಕೀರೆ ಹರ್ಷ ವ್ಯಕ್ತಪಡಿಸಿದ್ದಾರೆ.

## ಅಬಾಕಸ್ ಅರಿತ್‌ಮೆಟಿಕ್ ಮತ್ತು ವೇದಗಣಿತ ರಾಷ್ಟ್ರಮಟ್ಟದ ಸ್ಪರ್ಧೆಯಲ್ಲಿ ಅಂಕೋಲಾ, ಕಾರವಾರ (ನಂದನಗದ್ದಾ) ಮತ್ತು ಕುಮಟಾ ಮಕ್ಕಳ ಅಭೂತಪೂರ್ವ ಸಾಧನೆ

• ಮಲ್ಲಮ್ಮ ನುಡಿ ವಾರ್ತೆ ಅಂಕೋಲಾ :

ಐಡಿಯಲ್ ಪ್ಲೇ ಅಬಾಕಸ್ ಸಂಸ್ಥೆಯು 21ನೇ ರಾಷ್ಟ್ರಮಟ್ಟದ ಅಬಾಕಸ್ ಮತ್ತು ಅರಿತ್‌ಮೆಟಿಕ್ ಸ್ಪರ್ಧೆ ಹಾಗೂ 17 ನೇ ರಾಷ್ಟ್ರಮಟ್ಟದ ವೇದಗಣಿತದ ಸ್ಪರ್ಧೆ ಜನವರಿ 26 ರಂದು ಪಾಂಡಿಚೇರಿಯ ಸಂಗಮಿತ್ರ ಕನ್ವೆನ್‌ಶನ್ ಸೆಂಟರ್‌ನಲ್ಲಿ ಜರುಗಿತು. ಅಬಾಕಸ್ ಸ್ಪರ್ಧೆಯಲ್ಲಿ ಸಾಧಿಸಿದ ವಿದ್ಯಾರ್ಥಿಗಳಿಗೆ ಸಂಸ್ಥೆಯ ಎಂ.ಡಿ. ಶಾರದಾ ಶ್ರೀರಾಮ ಪ್ರೈಂಚೈಸಿಯವರಾದ ಜಯಶ್ರೀ ಪಿ. ಶೆಟ್ಟಿ, ಅರ್ಜುನ ಪಿ. ಶೆಟ್ಟಿ, ಪ್ರಶಾಂತ ಪಿ. ಶೆಟ್ಟಿ, ಶ್ರೀಧರ ವಿ. ಶೆಟ್ಟಿ ಅಭಿನಂದಿಸಿರುತ್ತಾರೆ.

ವಿದ್ಯಾರ್ಥಿಗಳಾದ ಪ್ರಜ್ವಲ್ ಡಿ. ನಾಯ್ಕ, ಖುಷಿ ಪಿ. ರೇವಣಕರ ಅಬಾಕಸ್ ಅಡ್ವಾನ್ಸ್‌ಲೇವಲ್ ಎಂಡ್ ಗ್ರ್ಯಾಂಡ್ ಲೇವಲ್ ತರಬೇತಿಯನ್ನು ಪೂರ್ಣಗೊಳಿಸಿರುತ್ತಾರೆ. ಅಬಾಕಸ್ ತರಬೇತಿ ನೀಡಿದ ಶಿಕ್ಷಕಿ ಜೀವಿಕಾ ಶೆಟ್ಟಿ, ಸುಷ್ಮಾ ಶೆಟ್ಟಿ, ಶಾಲಿನಿ ಪಾಟೀಲ ವಿದ್ಯಾರ್ಥಿಗಳನ್ನು ಅಭಿನಂದಿಸಿರುತ್ತಾರೆ.



ನ್ಯಾಷನಲ್ ಅಬಾಕಸ್ ಅಂಕೋಲಾ, ಅಬಾಕಸ್ ಮೆಮೋರಿ ಕ್ಲಾಸ್ ಕುಮಟಾ ಹಾಗೂ ನಂದನಗದ್ದಾ ರ್‍ಯಾಂಕ್ ಪಡೆದ ವಿದ್ಯಾರ್ಥಿಗಳು

ಚಾಂಪಿಯನ್ಸ್: ಖುಷಿ ನಾಯಕ, ಅಶ್ವಿಕ್ ಗಾಂವಕರ.

ವಿನ್ನರ್ಸ್: ಶೌರ್ಯ ಶೆಟ್ಟಿ, ಆರುಶಿ ನಾಯ್ಕ, ಅದ್ರಿತ್ ಕುಮಾರ, ಸುಹಾನಿ ಡೋರಾ, ಶ್ರೀಕರ ಹೆಗಡೆ, ಶ್ರೀಧರ ಹೆಗಡೆ, ನಿರೀಕ್ಷಾ ನಾಯ್ಕ, ಸಂಸ್ಕೃತಿ ಉಪ್ಪೂರ್, ರಕ್ಷಾ ಪಟಗಾರ, ಪ್ರದ್ಯುಮ್ನ ನಾಯ್ಕ.

ಪ್ರಥಮ ರ್‍ಯಾಂಕ್ ಜಿತೇಶ ನಾಯ್ಕ, ದ್ವಿತೀಯ ರ್‍ಯಾಂಕ್ ತನ್ಮಯ್ ನಾಯಕ, ಶ್ರವಂತ ನಾಯ್ಕ, ಶಮಿನ್ ಶೇಖ್, ಪ್ರಜ್ವಲ್ ನಾಯ್ಕ, ಆಯುಷ್ ಹೆಗಡೆ, ತೃತೀಯ ರ್‍ಯಾಂಕ್ ಜೀವನ ನಾಯ್ಕ, ಪ್ರಜ್ವಲ್ ಪಿ. ನೈನಿಕಾ, ಆರ್ಯ ಬಾಳೇರಿ, ಶ್ರೇಯಾ ಕೋಲ್ವೇಕರ, ವೇದಿಕಾ ಪೆಡ್ನೇಕರ, ಪ್ರಥಮ ರನ್ನರ್ಸ್ ಅಪ್ ಮಣಿಕಂಠ ನಾಯಕ, ಅನುಪ್ ಕೋಟಿ, ಅದಿತಿ ಕೋಟಿ, ಪ್ರಣಮ್ ಎಸ್.ಎಚ್., ಶ್ರೀರಾಮ ಮಡಿವಾಳ, ತನ್ಮಯ ಗೌಡ, ರಿಷಬ್ ನಾಯ್ಕ, ತ್ರಿಶುಲ್ಯಾ ನಾಯ್ಕ, ವೇದಾ ಗೌಡ, ರಿತಿಕಾ ನಾಯ್ಕ, ನಾಗರಾಜ ಶೆಟ್ಟಿ, ತನ್ವಿ ಗಾಂವಕರ, ತನ್ವಿ ಅಂಗಡಿ, ಪ್ರಥಮ ಕಾಂಬಳೆ, ದ್ವಿತೀಯ ರನ್ನರ್ಸ್ ಅಪ್ ಧನ್ಯಾ ನಾಯ್ಕ, ಜೆ. ಸಾನ್ವಿ, ಪವನ್ ನಾಯ್ಕ, ನಾದಶ್ರೀ ಪಟಗಾರ, ವಿರಾಜ ಪಾವಸ್ಕರ, ಕ್ರಿಶಿಕಾಶ್ರೀ ಅಹಿಲಿಜಿ, ಪ್ರಥ್ವಿರಾಜ್ ಶೇಟ್, ಗನಶ್ರೀ ಬಡಗೇರಿ, ಚತುರ್ಥ ರ್‍ಯಾಂಕ್ ಕೌಸ್ತುಬ ಶಾನಭಾಗ, ಕಾರ್ತಿಕ ನಾಯಕ, ಧ್ರುವ ಜೆ.ಆರ್. ಅದ್ವಿಕಾ ನಾಯ್ಕ, ಖುಷಿ ರೇವಣಕರ, ದಿಯಾ ಬಿ. ಎನ್. ರಿತಿಶಾ ನಾಯಕ, ಅಕ್ಷತಾ ರಾಯ್ಕರ, ಅಥರ್ವ ರಾಯ್ಕರ.

ವೇದಗಣಿತದಲ್ಲಿ ಪ್ರಥಮ ರ್‍ಯಾಂಕ್ : ಪ್ರಥಮ ಭಟ್, ದ್ವಿತೀಯ ರ್‍ಯಾಂಕ್ ಪ್ರಜ್ವಲ್ ನಾಯ್ಕ, ತೃತೀಯ ರ್‍ಯಾಂಕ್ ಅಕ್ಷತಾ ರಾಯ್ಕರ, ಸಾನ್ವಿ ದೇವರಬಾವಿ.

## ಅವೈಜ್ಞಾನಿಕ ಕಾಮಗಾರಿಯಿಂದ ಅಪಾಯದ ಸಾಧ್ಯತೆ : ಸಾಧಿಕ್

ಮಲ್ಲಮ್ಮ ನುಡಿ ವಾರ್ತೆ ಮುದಗಲ್ :

ಪಟ್ಟಣದ ಕೋಟೆ ಕಂದಕಕ್ಕೆ ಹೊಂದಿಕೊಂಡು ತಡೆಗೋಡೆ ನಿರ್ಮಾಣ ಮಾಡುವ ಅವಿಜ್ಞಾನಿಕ ಕಾಮಗಾರಿಯಿಂದ ಜೀವ ಸುರಕ್ಷತೆಗೆ ಅಪಾಯ ಉಂಟಾಗುವ ಸಾಧ್ಯತೆ ಇದೆ ಎಂದು ಹುಸೇನಿ ಆಲಂ ಆಶುರುಖಾನ ದರ್ಗಾ ಕಮಿಟಿ ಕಾರ್ಯದರ್ಶಿ ಮೊಹಮ್ಮದ್ ಸಾಧಿಕಲಿ ಸೋಮವಾರ ತಿಳಿಸಿದರು.ಪಟ್ಟಣದ ಪತ್ರಿಕಾ ಭವನದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು ರಾಯಚೂರು ಬೆಳಗಾವಿ ಮುಖ್ಯ ರಾಜ್ಯ ಹೆದ್ದಾರಿಯಲ್ಲಿ ಪಟ್ಟಣದ ಕೋಟೆ ಕಂದಕಕ್ಕೆ ಹೊಂದಿಕೊಂಡು ನಿರ್ಮಾಣವಾಗುತ್ತಿರುವ ತಡೆಗೋಡೆ ನಿರ್ಮಾಣಕ್ಕೆ ಭಾವೈಕ್ಯತೆ ಸಾರುವ ಮೊಹರಂ ಲಕ್ಷಾಂತರ ಭಕ್ತರಿಗೆ ಹಾಗೂ ಸಾರ್ವಜನಿಕರ ಸುರಕ್ಷತೆ ಮತ್ತು ಶಾಂತಿ ದೃಷ್ಟಿಯಿಂದ ಸಂಪೂರ್ಣ ನಿಯಂತ್ರಣ ತಪ್ಪುವ ಪರಿಸ್ಥಿತಿ ನಿರ್ಮಾಣವಾಗುವ ಆತಂಕವಿದೆ. ತಡೆಗೋಡೆ ನಿರ್ಮಾಣಕ್ಕೆ ಹುಸೇನಿ ಆಲಂ ಅಶುರ್ಖಾನ ಸಮಿತಿಯು ಯಾವುದೇ ವಿರೋಧ ವ್ಯಕ್ತಪಡಿಸುವದಿಲ್ಲ. ಜನಸಾಂದ್ರತೆ ಇರುವ ಸಂದರ್ಭದಲ್ಲಿ ಕಾನೂನು ವ್ಯವಸ್ಥೆ ಹದಗೆಡುವ ಸಾಧ್ಯತೆ ಹೆಚ್ಚಾಗುತ್ತದೆ. ಸಾರ್ವಜನಿಕರ ಹಿತಾಸಕ್ತಿ ಭಕ್ತಾದಿಗಳ ಸುರಕ್ಷತೆ ಮತ್ತು ಶಾಂತಿ ಕಾಪಾಡುವ ಉದ್ದೇಶದಿಂದ ಸಂಬಂಧಪಟ್ಟ ಇಲಾಖೆಯ ಹೊಸ ಕಾಮಗಾರಿ ಪ್ರತ್ಯೇಕ ಎಸ್ಟಿಮೇಟ್ ಮತ್ತು ಯೋಜನೆಯನ್ನು ರೂಪಿಸಿ, ರಸ್ತೆಯಿಂದ ಕನಿಷ್ಠ 15 ಮೀಟರ ಒಳಗಡೆ ಸರಿಸಿ, ನೂತನ ಯೋಜನೆ ಮತ್ತು ಎಸ್ಟಿಮೇಟ್ ಮಾಡಿ ತಡೆಗೋಡೆ ನಿರ್ಮಾಣ ಮಾಡಿದರೆ ಯಾವುದೇ ಅಭ್ಯಂತರವಿಲ್ಲವೆಂದು ಜಿಲ್ಲಾಧಿಕಾರಿ, ಪೊಲೀಸ್ ಅಧಿಕ್ಷಕರು, ಪುರಾತತ್ವ ಇಲಾಖೆ, ಪುರಸಭೆ, ನಗುರುತ್ತಾನ ಯೋಜನೆ ಹಾಗೂ ಪಿಡಬ್ಲ್ಯೂಡಿ ಇಲಾಖೆಗೆ ಕಾನೂನು ಬದ್ಧ ಮನವಿ ಮೂಲಕ ಸಲ್ಲಿಸಲಾಗಿದೆ. ವಿಷಯವನ್ನು ನಿರ್ಲಕ್ಷಿಸಿದರೆ ಸಂಬಂಧಪಟ್ಟ ಅಧಿಕಾರಿಗಳೇ ಇದಕ್ಕೆ ಜವಾಬ್ದಾರರಾಗುತ್ತಾರೆ. ಕಾನೂನು ಬದ್ಧ ಹೋರಾಟಕ್ಕೆ ಸಿದ್ಧರಿದ್ದೇವೆ ಎಂದು ಆಗ್ರಹಿಸಿದರು. ದರ್ಗಾ ಕಮಿಟಿ ಅಧ್ಯಕ್ಷ ಅಮಿರ್ ಬೇಗ್ ಉಸ್ತಾದ್, ಉಪಾಧ್ಯಕ್ಷ ಮಸೂಮ್ ಷರೀಫ್, ಖಜಾಂಚಿ ಗಯಾಸುದ್ದಿನ್, ನಿರ್ದೇಶಕ ಯಮನೂರ್ ನದಾಫ್ ಇದ್ದರು.



## ಇಂದಿನಿಂದ ಪಲ್ಲಕ್ಕಿ ಉತ್ಸವ ಹಾಗೂ ಸಪ್ತಭಜನೆ ಪ್ರಾರಂಭ

ಮಲ್ಲಮ್ಮನ ನುಡಿ ವಾರ್ತೆ ಕುಷ್ಟಗಿ :

ತಾಲೂಕಿನ ದೋಟಿಹಾಳ– ಕೆಸೂರ ಗ್ರಾಮದ ಶ್ರೀ ಅವಧೂತ ಸುಖಮುನಿ ಸ್ವಾಮಿಗಳ ಮಠದಲ್ಲಿ ಇಂದಿನಿಂದ (ಫೆಬ್ರವರಿ 10) ಏಳು ದಿನಗಳ ಕಾಲ ಶ್ರೀ ಅವಧೂತರ ಪಲ್ಲಕ್ಕಿ ಮೆರವಣಿಗೆ ಹಾಗೂ ನಿರಂತರ ಏಳು ದಿನಗಳ ಕಾಲ ಸಪ್ತ ಭಜನೆ ಜರುಗುವುದಾಗಿ ದೇವಸ್ಥಾನ ಕಮಿಟಿ ವತಿಯಿಂದ ಪ್ರಕಟಣೆಗೆ ತಿಳಿಸಿರುತ್ತಾರೆ.ಇಂದು ಫೆಬ್ರುವರಿ 10ರ ಮಂಗಳವಾರ ಬ್ರಹ್ಮಿ ಮುಹೂರ್ತದಲ್ಲಿ ಸಪ್ತ ಭಜನೆ ಆರಂಭಗೊಂಡು ಫೆಬ್ರುವರಿ 17ರ ಮಂಗಳವಾರ ಬೆಳಿಗ್ಗೆ ಬ್ರಾಹ್ಮಿ ಮುಹೂರ್ತದಲ್ಲಿ ಸಪ್ತ ಭಜನೆ ಸಮಾಪ್ತಿಗೊಂಡು ಅಂದೆ ಉದಯ ತೇರಿನ ಮುಂದೆ ಹೋಮ ಹವನ ಇತರ ಧಾರ್ಮಿಕ ಕಾರ್ಯಗಳು ಜರುಗುವವು ಹಾಗೂ ಪ್ರತಿದಿನ ಮಧ್ಯಾಹ್ನ ಹಾಗೂ ಸಂಜೆ ವೇಳೆಗೆ ಅವದೂತರ ಮಠದಲ್ಲಿ ಅನ್ನದಾಸೋಹದ ಮಹಾ ಪ್ರಸಾದ ಸಹ ಆಯೋಜಿಸಲಾಗಿದೆ ಹಾಗೂ ಫೆಬ್ರವರಿ 17ರ ಮಂಗಳವಾರ ಸಾಯಂಕಾಲ ಶ್ರೀ ಅವಧೂತ ಶುಕಮನಿ ಸ್ವಾಮಿಗಳ ಮಹಾ ರಥೋತ್ಸವ ಜರಗಲಿದ್ದು ಈ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಅವಧೂತರ ಸದ್ಭಕ್ತರೆಲ್ಲರೂ ಪಾಲ್ಗೊಂಡು ತಮ್ಮ ಹರಕೆ ಇಷ್ಟಾರ್ಥಗಳನ್ನು ಈಡೇರಿಸಿ ಸ್ವಾಮಿಯ ಕೃಪೆಗೆ ಪಾತ್ರರಾಗಬೇಕು ಎಂದು ಶ್ರೀ ಸುಖಮನಿ ದೇವಸ್ಥಾನ ಕಮಿಟಿ ದೋಟಿಹಾಳ– ಕೆಸೂರ ಪತ್ರಿಕಾ ಪ್ರಕಟಣೆಗೆ ತಿಳಿಸಿರುತ್ತಾರೆ



# ಓದಿದ ಶಾಲೆಗೆ ಕೈಲಾದಷ್ಟು ಕೊಡುಗೆ ನೀಡಿ ಪುನೀತರಾಗಿ: ಡಾ.ಡಿ ತಿಮ್ಮಯ್ಯ



• **ಮಲ್ಲಮ್ಮ ನುಡಿ ವಾರ್ತೆ ಹುಣಸೂರು:**

ಸಾಧನೆ ಮಾಡಿದ ನಂತರ ಓದಿದ ಶಾಲೆಗೆ ಹಿಂದಿರಿಗಿದಾಗ ಧನ್ಯತಾಭಾವ ಉಂಟಾಗುತ್ತದೆ ಹಾಗೂ ಆ ಶಾಲೆಗೆ ನಮ್ಮ ಕೈಲಾದಷ್ಟು ಕೊಡುಗೆ ನೀಡಿ ಪುನೀತರಾದರಷ್ಟೇ ಬದುಕು ಸಾರ್ಥಕವಾಗುತ್ತದೆ ಎಂದು ಮೈಸೂರು – ಚಾಮರಾಜನಗರ ವಿಧಾನ ಪರಿಷತ್ ಸದಸ್ಯ ಡಾ.ಡಿ ತಿಮ್ಮಯ್ಯ ಅಭಿಪ್ರಾಯ ನಗರ ಐತಿಹಾಸಿಕ ಶಾಲೆ ಎಚ್. ಪಿ.ಬಿ.ಎಸ್ ನ 140ನೇ ವರ್ಷದ ವಾರ್ಷಿಕೋತ್ಸವ ಹಾಗೂ ಎಚ್.ಪಿ.ಬಿ.ಎಸ್ ಮಹಾ ಸಂಗ್ರಮ ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಅವರು ಮಾತನಾಡಿದರು.

ಶಾಸಕರ ನಿಧಿಯಿಂದ ಐದು ಲಕ್ಷ ವೆಚ್ಚದ ಅಡುಗೆಮನೆಯನ್ನು ಶಾಲೆಗೆ ನೀಡಿ ಅದನ್ನು ಉದ್ಘಾಟನೆ ಮಾಡಿದರು. ನಂತರ ಮಾತನಾಡಿ ಸರ್ಕಾರಿ ಶಾಲೆಗಳ ಉಳಿವು ಇಂದಿನ ತುರ್ತು ಹಾಗೂ ಬಡವರ ಪಾಲಿನ ಆಶಕಿರಣಗಳಾದ ಸರ್ಕಾರಿ ಶಾಲೆಗಳನ್ನು ದೇವಾಲಯಗಳಂತೆ ಕಾಪಾಡಿಕೊಳ್ಳುವ ಅಗತ್ಯವಿದೆ. ನಾನು ಶಾಸಕನಾಗಿದ್ದ ಅವಧಿಯಲ್ಲಿ ಶಿಕ್ಷಣ ಕ್ಷೇತ್ರವನ್ನು ಪೂಜನೀಯ ಸ್ಥಾನದಿಂದ ನೋಡಿದ್ದೆ, ತಾಲೂಕಿನ ಅಭಿವೃದ್ಧಿ ಎಂದರೆ ಶಿಕ್ಷಣದ ಬಲವರ್ಧನೆ ಎಂದು ಭಾವಿಸಿ ಸೇವೆಮಾಡಿದ್ದೆ ಎಂದು ಮಾಜಿ ಶಾಸಕ ಹಾಗೂ ಶಾಲೆಯ ಹಳೆಯ ವಿದ್ಯಾರ್ಥಿ ಎಚ್.ಪಿ. ಮಂಜುನಾಥ್ ಅಭಿಪ್ರಾಯ ಪಟ್ಟರು. ಶಾಲೆಯ ಎಸ್.ಡಿ.ಎಂ.ಸಿ.ವತಿಯಿಂದ ಸನ್ಮಾನ ಸ್ವೀಕರಿಸಿ ಅವರು ಮಾತನಾಡಿದರು. ಹೆಚ್ ಬಿ ವಿ ಎಸ್ಪಿ ಶಾಲೆ ಕೇವಲ 19 ಇದ್ದಂತ ವಿದ್ಯಾರ್ಥಿಗಳು ಶಾಲೆಯಲ್ಲಿ ಸರ್ಕಾರಿ ಕಚೇರಿಗೆ ಈ ಶಾಲೆ ವರ್ಗಾವಣೆಯಾಗಿತ್ತು ಆದರೆ ಈ ಶಾಲೆಯನ್ನು ಬಹಳ ನಾನು ಶ್ರಮವಹಿಸಿ ಈ ಕಟ್ಟಡ ನನ್ನ ಶಾಸಕ ಅವಧಿಯಲ್ಲಿ ಗೊಳಿಸಿ ನೂತನವಾಗಿ ಸಮಿತಿ ರಚಿಸಿ ಹಳೆ ಕಟ್ಟಡವನ್ನು ದುರಸ್ತಿಗೊಳಿಸಿ ನೂತನ ಕಟ್ಟಡ–ಕ್ಕೆ 2011ರಲ್ಲಿ ಶಾಲೆಯ ನೂತನ ಕಟ್ಟಡಕ್ಕೆ 11 ಲಕ್ಷ ರೂಪಾಯಿ ನಾನು ಅನುದಾನ ನೀಡಿದ್ದು ಈ ಮಟ್ಟಕ್ಕೆ ಬೆಳಗು ನಿಂತ ಸರ್ಕಾರಿ ಶಾಲೆ ನೂರಾರು ಮಕ್ಕಳಿಗೆ ಶಿಕ್ಷಣಕ್ಕೆ ಉತ್ತಮ ಅಂತಕ್ಕೆ ಬೆಳೆದು ನಿಂತಿರುವ ಆಸರೆಯವಾಯಿತು ಇದು ಒಂದು ಹೆಮ್ಮೆಯ ವಿಚಾರ ಎಂದರು. ನಗರದ ಸರ್ಕಾರಿ ಶಾಲೆಯಲ್ಲಿ ಉತ್ತಮವಾದ ಶಿಕ್ಷಕರು ಇದ್ದಾರೆ ಎಂದರೆ ಹೆಚ್ ಪಿ ಬಿ ಎಸ್ ಪಿ ಬಿ ಶಾಲೆ ಎಸ್ ಶಾಲೆಯಲ್ಲಿ,ಒಂದರಿಂದ ತರಗತಿ ಏಳನೇ ತರಗತಿ ನಡೆಯುತ್ತಿದೆ ಈಗ ಪೋಷಕರು ಹಾಗೂ ಎಸ್ ಡಿ ಎಂ ಸಿ ಸಮಿತಿ ವತಿಯಿಂದ ಶಿಕ್ಷಕರು ಜೊತೆಗೂಡಿ ಎಲ್ ಕೆ ಜಿ ಯು ಕೆ ಜಿ ಪ್ರಾರಂಭಗೊಂಡು ಒಂದು ಉತ್ತಮವಾದ ಆಂಗ್ಲ ಭಾಷೆಯ ಶಿಕ್ಷಣವನ್ನು ಪ್ರಾಥಮಿಕ ಹಂತದಲ್ಲೇ ಪ್ರಾರಂಭಗೊಂಡು ಬಹಳ ಬಡಪಾಯಿ ಬಿ ಮಕ್ಕಳಿಗೆ ಉತ್ತಮವಾದ ಶಿಕ್ಷಣವನ್ನು ಈ ಶಾಲೆಯಲ್ಲಿ ಸಿಗುತ್ತಿದೆ ಎಂದರು.ನನಗೆ ಬಹಳಷ್ಟು ದೇವಸ್ಥಾನಗಳು ಉದ್ಘಾಟನೆ ಹಾಗೂ ಕಾರ್ಯಕ್ರಮ ಇದ್ದರೂ ಕೂಡ ನಾನು ಎಷ್ಟೇ ದೇವಸ್ಥಾನಗಳು ಉದ್ಘಾಟನೆ ಮಾಡಿದರು ನನಗೆ ಇಲ್ಲಿಗೆ ಬರಲೇಬೇಕು ಅಂತಹ ಇದು ಒಂದು ಆಧುನಿಕ ಶಾಲೆ ಅಲ್ಲ ಇದು ಒಂದು ಆಧುನಿಕ ದೇವಸ್ಥಾನ ಬಂದ್ರೆ ಮಾತ್ರ ಅದರ ಬೆಲೆ ನನಗೆ ಸಿಗುತ್ತದೆ ಅಂತ ಅನಿಸುತ್ತಿತ್ತು ಎಂದ ತಿಳಿಸಿದರು

ನಮ್ಮ ಶಾಲೆ ಆಧುನಿಕ ದೇವಸ್ಥಾನ ವಸಾಟ್ ಸಂಸ್ಥೆ ಬಗ್ಗೆ ವಿವರ ನೀಡಿ ನಮ್ಮ ಶಾಲೆಯ ಶಿಕ್ಷಕರ ಬಗ್ಗೆ ಹೆಮ್ಮೆಯ ಮಾತುಗಳನ್ನು ವ್ಯಕ್ತಪಡಿಸಿ ಈ ಶಾಲೆಯ ಹಳೆಯ ನೆನಪುಗಳನ್ನು ಬಗ್ಗೆ ವಿಶೇಷ ಕಾಳಜಿಯ ತಮ್ಮಲ್ಲಿರುವ ಶಿಕ್ಷಕರ ಕಾಳಜ್ಜಿ ಬಗ್ಗೆ ಹಳೆಯ ನೆನಪುಗಳನ್ನು ಈ ಶಾಲೆಯ ಹಳೆ ಇತಿಹಾಸದ ನೆನಪುಗಳನ್ನು ಅರಿವು ಮೂಡಿಸಿದರು

ಉಪವಿಭಾಗಾಧಿಕಾರಿ ಕು.ಕಾವ್ಯ ರಾಣಿಯವರು ಮಾತನಾಡಿ ಸರ್ಕಾರಿ ಶಾಲೆಗಳು ಪ್ರತಿಭಾವಂತ ಮಕ್ಕಳನ್ನು ನಿರ್ಮಿಸುವಲ್ಲಿ ಮುಂಚೂಣಿಯಲ್ಲಿವೆ. ದೇಶದ ಕೊಡುಗೆಯಲ್ಲಿ ಅವುಗಳು ದೊಡ್ಡಪಾತ್ರ ವಹಿಸುತ್ತವೆ ಎಂದು ಪೋಷಕರಿಗೆ ಕಿವಿಮಾತು ಹೇಳಿದರು.

ನಾನು ಓದಂತ ಶಾಲೆ ಕಡಿಮೆ ವಿದ್ಯಾರ್ಥಿಗಳು ಇದ್ದರು ಈ ಅಂತಕ್ಕೆ ಬೆಳದು ನಿಂತಿರುವ ಸರ್ಕಾರಿ ಶಾಲೆಗೆ ನನಗೆ ವೇದಿಕೆಯಲ್ಲಿ ನೋಡಿ ಬಹಳ ಸಂತೋಷವಾಗುತ್ತಿದೆ ಒಂದು ಹೆಮ್ಮೆಯ ವಿಚಾರ ಹಾಗೂ ಸರ್ಕಾರಿ ಶಾಲೆಯಲ್ಲಿ ಶಿಕ್ಷಣ ಪಡೆದಂತಹ ವಿದ್ಯಾರ್ಥಿಗಳು ಯಾವುದೇ ವಿಚಾರದಲ್ಲಿ ಕಡಿಮೆ ಇರುವುದಿಲ್ಲ ಬೇರೆ ಶಾಲೆಯ ಮಕ್ಕಳಲ್ಲಿ ನಾವು ನೋಡುವುದರಲ್ಲಿ ಬಹಳ ಕಡಿಮೆಯಾಗಿರುತ್ತದೆ ಎಂದರು

ಪೋಷಕರು ತಮ್ಮ ಮಕ್ಕಳ ಶಿಕ್ಷಣ ಬಗ್ಗೆ ಬಹಳಷ್ಟು ಮುತ್ತರ್ಜಿ ವಹಿಸಿರುತ್ತಾರೆ ಆದರೆ ವಿದ್ಯಾರ್ಥಿಗಳು ಮೊಬೈಲ್ ಫೋನ್ ಗಳನ್ನು ಬಳಸುವುದರಲ್ಲಿ ಕಡಿಮೆ ಆಗಿರಬೇಕು ಆದ್ದರಿಂದ ಶಿಕ್ಷಣ ಪಡೆಯೋದ್ರಲ್ಲಿ ಯಶಸ್ಸು ನಾವು ಕಾಣಬಹುದು ನಾವು ನಮ್ಮ ಪೋಷಕರ ಬಗ್ಗೆ ಕಾಳಜ್ಜಿ ವಹಿಸುತ್ತೇವೆ ಮಾತ್ರ ಅವಾಗಲೇ ನಮಗೆ ಸಮಾಜ ನಮಗೆ ಗೌರವ ಸಿಗುತ್ತದೆ ಎಂದರು.

ತಾಲ್ಲೂಕು ತಹಸೀಲ್ದಾರ್ ಮಂಜುನಾಥ್ ಅವರು ನಮ್ಮ ಭವಿಷ್ಯದ ಮೂಲಬೇರು ಸರ್ಕಾರಿ ಶಾಲೆಗಳೇ ಆಗಿವೆ . ಅವುಗಳನ್ನು ಜೋಪಾನಮಾಡಬೇಕು ನಾನು ಸರ್ಕಾರಿ ಶಾಲೆಯಲ್ಲಿ ಉತ್ತಮವಾದ ಶಿಕ್ಷಣವನ್ನು ಪಡೆದು ಸರ್ಕಾರಿ ಉದ್ಯೋಗ ಕೂಡ ನಾನು ತಲುಪಿದ್ದೇನೆ ಎಂದರು ಕಾರ್ಯಕ್ರಮದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿ ಎಸ್.ಪಿ.ಮಹಾದೇವ, ವಿ.ಪಿ.ಸಾಯಿನಾಥ್, ಮಲ್ಲಾಡಿ ನಿಂಗರಾಜು, ರಾಘು ಕಲ್ಕುಣಿಕೆ ಇದ್ದರು.ಸಮಾರಂಭದ ಅಧ್ಯಕ್ಷತೆಯನ್ನು ಎಸ್.ಡಿ.ಎಂ.ಸಿ.ಅಧ್ಯಕ್ಷೆ ಶುಭಾ ಎ.ಎಸ್ ಉಪಾಧ್ಯಕ್ಷ ಮೊಹಮ್ಮದ್ ರಫೀಕ್ ಮುಖ್ಯ ಶಿಕ್ಷಕ ಡಾ. ಸಾಹಿತಿ ಮಾದುಪ್ರಸಾದ್ ಶಿಕ್ಷಕಿ ವೀಣಾ ನ , ಶಿಕ್ಷಕ ನರಸಿಂಹ ಎಸ್.ಡಿ.ಎಂ. ಸಿ. ಸದಸ್ಯರು ಪಲ್ಲವಿ, ಚಂದನ, ನಿರ್ಮಲ, ಲಕ್ಷ್ಮಿ, ನರ್ಮದಾ, ಆಯಿಷಾ ಬಾನು,ಮಂಜುಳ,ನೂರ್ ಸಭಾ, ಬೆಳತೂರು ವೆಂಕಟೇಶ್, ಶಿವರಾಮ್,ವೆಂಕಟೇಶ್,ಸಂತೋಷ ಕುಮಾರ್, ಪ್ರತಾಪ್ ಕುಮಾರ್, ಆನಂದ,ರಾಜೇಗೌಡ,ಚಲುವರಾಜ್, ಜುಬೇರಖಾನ್, ಶಿಕ್ಷಕರಾದ ಜಯರಾಮೇಗೌಡ,ಆರೋಕ್ಯಮೇರಿ, ಡಾ.ಚಲುವರಾಜ್,ಸೋಮಸುಂದರ್, ವಸಂತ ಕುಮಾರಿ, ಕೃಷ್ಣ ಮೂರ್ತಿ, ಶೋಭಾರಾಣಿ,ಶಿಲ್ಪ,ರಾಧಿಕ, ಪುಷ್ಪ, ರಾಧ, ಕಾಜಿಮ ಶೃತಿ, ಸುಶೀಲಮ್ಮ, ಹೇಮ, ಸೌಮ್ಯ,ರೂಪ ,ನಾಗಮ್ಮ ಲೋಕೇಶ್ ಹಾಜರಿದ್ದರು.

# ಅಂಗೈಕ್ಯ ಭಜನೆ ರಾಮಣ್ಣ ಸಂಸ್ಮರಣೆ 05 ಜನ ಕಲಾವಿದರಿಗೆ ಭಜನೆ ಪದ್ಮವಿಭೂಷಣ ಪ್ರಶಸ್ತಿ

• **ಮಲ್ಲಮ್ಮ ನುಡಿ ವಾರ್ತೆ ಲಿಂಗಸುಗೂರು :**

ತಾಲ್ಲೂಕಿನ ಗೆಜ್ಜಲಗಟ್ಟ ಗ್ರಾಮದ ಕಾಯಕ ಜೀವಿ,ಅಪೂರ್ವ ಏಕತಾರಿ ಭಜನಾ ಕಲಾವಿದ ಭಜನೆ ರಾಮಣ್ಣ ಇವರ 27ನೇಯ ಸ್ಮರಣೋತ್ಸವವನ್ನು ಶರಣೋತ್ಸವ ಸಮಾಗಮ ಆಚರಣೆ ವೇಳೆ ಐದು ಜನ ತತ್ವಪದ ಭಜನಾ ಕಲಾವಿದರಿಗೆ10–02–2026ರಂದು ಮಂಗಳವಾರ ಸಂಜೆ 'ಭಜನಭೂಷಣ' ಪ್ರಶಸ್ತಿ ನೀಡಿ ಗೌರವಿಸಲಾಗುತ್ತಿದೆ ಎಂದು ಅಮರ ಜ್ಞಾನ ಪೀಠದ ಕಾರ್ಯದರ್ಶಿ ಗುರುರಾಜ ಗೌಡೂರು ಹೇಳಿದರು.

ಪಟ್ಟಣದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿ ಅವರು, ಅಮರಜ್ಞಾನಪೀಠ ಶ್ರೀ ಕೊಡೇಕಲ್ಲ ಬಸವಣ್ಣ ಶಾಖಾ ಮಠ ಚಿಕ್ಕಹೆಸರೂರು,ಬೆಂಕಿ ಬೆಳಕು ಪ್ರಾದೇಶಿಕ ಸಂಜೆ ದಿನಪತ್ರಿಕೆ ರಾಯಚೂರು ಹಾಗೂ ಶ್ರೀ ಭಜನೆ ರಾಮಣ್ಣ ಸ್ಮರಣೋತ್ಸವ ಸಮಿತಿ ಗೆಜ್ಜಲಗಟ್ಟ ಇವರುಗಳ ಸಂಯುಕ್ತ ಆಶ್ರಯದಲ್ಲಿ ಶರಣೋತ್ಸವ ಕಾರ್ಯಕ್ರಮದಲ್ಲಿ ನಾಡಿನ ಐದು ಜನ ತತ್ವ ಭಜನಾ ಕ್ಷೇತ್ರದ ವಿಶಿಷ್ಟ ಸಾಧಕರಿಗೆ "ಭಜನ ಪದ್ಮವಿಭೂಷಣ" ಪ್ರಶಸ್ತಿ ಯನ್ನು ನೀಡಿ ಪುರಸ್ಕರಿಸಲಾಗುತ್ತದೆ. ಈ ವರ್ಷದ ಪ್ರಥಮ ಪುರಸ್ಕಾರಕ್ಕೆ ಆಯ್ಕೆಯಾದ ನಾಡಿನ ಅಪರೂಪದ ಭಜನಾ ಗಾಯಕರು ಆದ ಮಾಸ್ತರ ಸೋಮನಾಥ ಗುರುಗುಂಟ, ಮಾಸ್ತರ ಹುಲಗಪ್ಪ ರುಕ್ಮಾಪುರ, ಮಾಸ್ತರ ಗಣಪತಿ ದಾಸರ, ಮಾಸ್ತರ ಸುಧಾಕರ ನಾವಿ, ಮಾಸ್ತರ ಮಹಾದೇವ ಐಹೊಳೆ ಬಂಡಾರಕೋಟೆ ಇವರುಗಳಿಗೆ ಪ್ರಶಸ್ತಿ ಪ್ರಧಾನ ಮಾಡಿ ಸನ್ಮಾನಿಸಲಾಗುತ್ತದೆ ಎಂದು ತಿಳಿಸಿದರು. 12ನೆಯ ಶತಮಾನದ ಕಲ್ಯಾಣ ಶರಣರ ಜಾತಿ–ಭೇದ ಇಲ್ಲದ ವರ್ಗ ಹಾಗೂ ಲಿಂಗಭೇದ ಇಲ್ಲದ ವಚನ ಸಾಹಿತ್ಯದ ಮೇಲೆ ಪುರೋಹಿತ ಶಾಹಿಗಳಿಂದ ನಡೆದ ಆಕ್ರಮಣದ ನಡುವೆಯೂ, ಕಲ್ಯಾಣ ಚಳವಳಿ ಸಂಪೂರ್ಣ ಕಣ್ಮರೆ ಆಗಲಿಲ್ಲ! ಅದು 15ನೇ ಶತಮಾನದ ಶ್ರೀ ಕೊಡೇಕಲ್ಲ ಬಸವಣ್ಣನವರು ಕಟ್ಟಿದ ಅಮರ ಕಲ್ಯಾಣ ಚಳುವಳಿಯ ಮೂಲಕ ಮತ್ತೆ ಮುಂದುವರಿದಿದೆ. ಅಮರ ಕಲ್ಯಾಣ ಚಳುವಳಿಯಿಂದ ಆರಂಭವಾದ ವಚನ ವಾಕ್ಯ ಹಾಗೂ ತತ್ವಪದ ಸಾಹಿತ್ಯವು ತಿಂಥಣಿ ಮೋನಪ್ಪಯ್ಯ, ಗಲಗಿನ ಶ್ರೀ ಚನ್ನಬಸವೇಶ್ವರ, ಕನಕ ದಾಸರು, ಕಪ್ಪಡಿ ಕೈಲಾಸದ ರಾಚಪ್ಪಯ್ಯ ಮುಂತಾದ ಶರಣ ಸೈನಿಕರ ಮೂಲಕ ಮುಂದುವರೆದಿದೆ. ಇದು 12ನೇ ಶತಮಾನದ ವಚನ ಸಾಹಿತ್ಯದ ಹೊಸ ಮಜಲಾಗಿದೆ. ಇದನ್ನು 18 ಹಾಗೂ 19ನೇ ಶತಮಾನದಲ್ಲಿ ಪುನರ್ ನಿರ್ಮಾಣ ಮಾಡಿದ ಕೀರ್ತಿ ಕೂಡಲೂರು ಬಸವಲಿಂಗಪ್ಪ, ಬಕ್ಕಪಯ್ಯ ವಡಕೆಪ್ಪ ತಾತ, ಗುರು ಖಾದರಿ ಪೀರಾ, ಅಂಕಲಿಮಠದ ನಿರುಪಾದಿ, ನೀರಲಕೇರಿ ಬಸಲಿಂಗಪ್ಪ ಮುಂತಾದ ಶರಣ



ಸಾಹಿತಿಗಳಿಗೆ ಸಲ್ಲುತ್ತದೆ. ಅಲ್ಲಮನ ಈ ಅದ್ಭುತ ಮಾರ್ಗವು, ಯಾಂತ್ರಿಕ ಲಿಂಗಾಯಿತರಿಗೆ ಜೀರ್ಣವಾಗುತ್ತಿಲ್ಲ. ಹಾಗಾಗಿ,12ನೇ ಶತಮಾನದ ವಚನ ಸಾಹಿತ್ಯವು, 15ನೇ ಶತಮಾನದ ವಚನ ವಾಕ್ಯವಾಗಿ ತದನಂತರ ತತ್ವಪದ ಸಾಹಿತ್ಯವಾಗಿ ದಮನಿತ ಸಮುದಾಯಗಳ ನಡುವೆ ಗುರು ಪರಂಪರೆಯ ಮೂಲಕ, ಗುಪ್ತವಾಗಿ ವಿಶಾಲವಾಗಿ ಹರಿಯುತ್ತಿದೆ. ಇದನ್ನು ಕರೆದು ತೋರಿಸುವ ಕೆಲಸಕ್ಕೆ ಅಮರ ಜ್ಞಾನಪೀಠ ಮುಂದಾಗಿದೆ. ಹಾಗಾಗಿ, ಈ ಶರಣೋತ್ಸವ ಕಾರ್ಯಕ್ರಮದಲ್ಲಿ ತತ್ವಪದಕಾರರ ಸ್ಮರಣೆ, ತತ್ವಪದಕಾರರಿಗೆ ಪುರಸ್ಕಾರ, ತತ್ವಪದ ಸಾಹಿತ್ಯಕ್ಕೆ ಪ್ರೋತ್ಸಾಹ ನೀಡುವ ಸುಕೃತ ಕಾರ್ಯಕ್ಕೆ ಆಧ್ಯತೆ ನೀಡಲಾಗಿದೆ ಎಂದು ತಿಳಿಸಿದರು.

ಈ ಶರಣೋತ್ಸವ ಸಮಾಗಮದ ದಿವ್ಯ ಸಾನಿಧ್ಯವನ್ನು ಗಂಗಾಧರ ತಾತನವರು ಶ್ರೀ ಚನ್ನಬಸವೇಶ್ವರ ಆರೂಢ ಐಕ್ಯಸ್ಥಲ ಮಠ ಹಳೆ ಗಲಗ ಇವರು ವಹಿಸಲಿದ್ದಾರೆ. ಸಾನಿಧ್ಯವನ್ನು ಶ್ರೀ ರಾಜ ಯೋಗಿ ಗಡಿವಡಕೇಶ್ವರ ಮಠದ ಶ್ರೀಗಳಾದ ಶ್ರೀ ಗುರುಸ್ವಾಮಿ ತಾತನವರು ಯಲಗಟ್ಟ ಇವರು ವಹಿಸುತ್ತಾರೆ. ಘನ ಉಪಸ್ಥಿತಿ ಶಾಂತಯ್ಯ ಸ್ವಾಮಿ ಖ್ಯಾತನಾಳ ತತ್ವಪದ ಕವಿಗಳು, ಎಂ.ಗಂಗಾಧರ ನಾಡಿನ ಖ್ಯಾತ ತತ್ವಪದ ಗಾಯಕರು ಬುದ್ದಿನ್ನಿ, ಶೇಖರಪ್ಪ ವೇದಾಂತ ಚಿಂತಕರು ಸುರಪುರ, ಬಸಪ್ಪ ಚಲವಾದಿ ಗೆಜ್ಜಲಗಟ್ಟ (ಭಜನ ರಾಮಣ್ಣನ ಸಹೋದರ) ಇವರುಗಳು ಇರುತ್ತಾರೆ. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಭಜನೆ ರಾಮಣ್ಣ ಅವರ ಸುಪುತ್ರ, ಬೆಂಕಿ ಬೆಳಕು ಪತ್ರಿಕೆಯ ಸಂಪಾದಕ ಹಾಗೂ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾ ಅಧ್ಯಕ್ಷರಾದ ಆರ್.ಗುರುನಾಥ ವಹಿಸಲಿದ್ದಾರೆ. ಅಮರಜ್ಞಾನ ಪೀಠದ ಅಧ್ಯಕ್ಷರು ಹಾಗೂ ಭಜನೆ ರಾಮಣ್ಣನವರ ಹಿರಿಯ ಪುತ್ರರಾದ ಆರ್. ಮಾನಸಯ್ಯ ಅವರು ಈ ಕಾರ್ಯಕ್ರಮದ ಸಮಾರೋಪ ಕಿಡಿ ನುಡಿ ಸೇವೆ ಮಾಡಲಿದ್ದಾರೆ. ಎಂದು ಹೇಳಿದರು.

ಭಜನೆ ಕಾರ್ಯಕ್ರಮದ ಪ್ರಸ್ತಾವನೆಯನ್ನು ಪತ್ರಕರ್ತ ಹಾಗೂ ವಾದನ ಕಲಾವಿದ ಆದೇಶ ನಗನೂರು ನಡೆಸಿಕೊಡಲಿದ್ದಾರೆ. ಸ್ವಾಗತ ಭಾಷಣವನ್ನು ಪತ್ರಕರ್ತರು ಹಾಗೂ ಶರಣ ಪ್ರೇಮಿಗಳಾದ ಶರಣಬಸವ ಈಚನಾಳ, ಕಾರ್ಯನಿರ್ವಣೆಯನ್ನು ಸಿದ್ದು ಭಜಂತ್ರಿ ಗೌಡೂರ ಹಾಗೂ ವಂದನಾರ್ಪಣೆಯನ್ನು ಹಿರಿಯ ಪತ್ರಕರ್ತರಾದ ಅಮರಯ್ಯ ಗಂಟೆ ಲಿಂಗಸುಗೂರವರು ನಡೆಸಿಕೊಡಲಿದ್ದಾರೆ. ಗೆಜ್ಜೆಲಗಟ್ಟ ಬಸವೇಶ್ವರ ದೇವಸ್ಥಾನ ಆವರಣದಲ್ಲಿ ದಿನಾಂಕ 10–02–2026 ಮಂಗಳವಾರ ಸಂಜೆ 7 ರಿಂದ ಪ್ರಶಸ್ತಿ ಪುರಸ್ಕಾರ ಸನ್ಮಾನ ಹಾಗೂ ಶರಣೋತ್ಸವ ಸಮಾರಂಭ ನಡೆಯುತ್ತದೆ. ರಾತ್ರಿ 9:00 ರಿಂದ ಸಹ ಪಂಕ್ತಿ ಭೋಜನ ಹಾಗೂ ರಾತ್ರಿ 10 ಗಂಟೆಯಿಂದ ಪ್ರಸಿದ್ಧ ಭಜನಾ ಮ್ಯಾಳಗಳಿಂದ ಇಡೀ ರಾತ್ರಿ ತತ್ವಪದ ಹಾಡಿಕೆ ನಡೆಯಲಿದೆ. ಇದರ ನೇತೃತ್ವವನ್ನು ಉತ್ತರ ದೇಶದ ಖ್ಯಾತ ತತ್ವಪದ ಗಾಯಕರಾದ ನಾಗರಾಜ ಮಾಸ್ತರ ಯಕ್ಲಾಸಪುರ ಅವರು ವಹಿಸಲಿದ್ದಾರೆ. ಹಾಗಾಗಿ ಈ ಅಪರೂಪದ ಸಮಾಗಮದಲ್ಲಿ ವಿವಿಧ ಭಜನಾ ಕಲಾವಿದರು, ಚಿಂತಕರು, ಶರಣ ಬಂಧುಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕೆಂದು ಮನವಿ ಮಾಡಿದರು. ಸುದ್ದಿಗೋಷ್ಠಿಯಲ್ಲಿ ಭಜನೆ ರಾಮಣ್ಣ ಸಂಸ್ಮರಣಾ ಸಮಿತಿಯ ಆದೇಶ ನಗನೂರ, ಪತ್ರಕರ್ತರಾದ ಶರಣಬಸವ ಈಚನಾಳ, ಡಿ.ಜಿ.ಶಿವು ಗೆಜ್ಜಲಗಟ್ಟಾ ಸೇರಿದಂತೆ ಇದ್ದರು.

# ಮಟ್ಕಾ ಕಿಂಗ್‌ಪಿನ್ ಸೂರಿ ಮನೆಗೆ ವಾರಂಟ್ ಆಧಾರಿತ ಶೋಧನೆ ಕಾರ್ಯಾಚರಣೆ

• **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:**

ಮಾನ್ಯ ನ್ಯಾಯಾಲಯದಿಂದ ಪಡೆದ ಸರ್ಚ್ ಅಂಡರ್ ಕೋರ್ಟ್ ವಾರಂಟ್ ಆಧಾರದ ಮೇಲೆ, ಮಟ್ಕಾ ಕಿಂಗ್‌ಪಿನ್ ಎನ್ನಲಾಗಿರುವ ಸೂರಿ ಅವರ ನಿವಾಸದ ಮೇಲೆ ಇಂದು ಗಾಂಧಿನಗರ್ ಪೊಲೀಸ್ ಠಾಣೆ–ಯ ಸಿಪಿಐ ನೇತೃತ್ವದ ತಂಡದಿಂದ ಏಕಕಾಲದಲ್ಲಿ ಶೋಧನಾ ಕಾರ್ಯಾಚರಣೆ ನಡೆಸಲಾಯಿತು.

ಶೋಧನೆ ವೇಳೆ ಮನೆಯಾದ್ಯಂತ ಇರುವ ಕಬೋರ್ಡ್, ಸೂಟ್‌ಕೇಸ್‌ಗಳು ಸೇರಿದಂತೆ ಇತರೆ ದಾಖಲಾತಿಗಳನ್ನು ಪೊಲೀಸರು ಸೂಕ್ಷ್ಮವಾಗಿ ಪರಿಶೀಲಿಸಿ, ಯಾವುದೇ ಅಕ್ರಮ ಚಟುವಟಿಕೆಗಳಿಗೆ ಸಂಬಂಧಿಸಿದ ಸಾಕ್ಷ್ಯಗಳಿಗಾಗಿ ಕಟ್ಟುನಿಟ್ಟಿನ ತಪಾಸಣೆ ನಡೆಸಿದರು. ಶೋಧನಾ ಕಾರ್ಯಾಚರಣೆ ಹಲವು ಗಂಟೆಗಳ ಕಾಲ ಮುಂದುವರಿದಿದ್ದು, ಮಹತ್ವದ ದಾಖಲೆಗಳು ಹಾಗೂ ಮಾಹಿತಿಯನ್ನು ವಶಪಡಿಸಿಕೊಂಡಿರುವ ಸಾಧ್ಯತೆ ಇದೆ ಎಂದು ತಿಳಿದುಬಂದಿದೆ.

ಈ ಶೋಧನೆ ಅಕ್ರಮ ಮಟ್ಕಾ ಜಾಲದ ಮೇಲೆ ಪೊಲೀಸರು ಹಮ್ಮಿಕೊಂಡಿರುವ ವಿಶೇಷ ಕಾರ್ಯಾಚರಣೆಯ ಭಾಗವಾಗಿದ್ದು, ಮುಂದಿನ ತನಿಖೆಯ ಆಧಾರದ ಮೇಲೆ ಇನ್ನಷ್ಟು ಕ್ರಮ ಕೈಗೊಳ್ಳಲಾಗುವುದು ಎಂದು ಪೊಲೀಸ್ ಮೂಲಗಳು ತಿಳಿಸಿವೆ.

# ಇಸ್ತಾಮದಲ್ಲಿ ಭೇಟಿ ನೀಡಿದ ಮಂಜುನಾಥ್ ಎಲ್ಲಾ ಮುಸ್ಲಿಂ ಬಾಂಧವರಿಗೆ ಶುಭಕೋರಿದರು



• **ಮಲ್ಲಮ್ಮ ನುಡಿ ವಾರ್ತೆ ಹುಣಸೂರು:**

ತಾಲೂಕಿನ ಮಾಜಿ ಶಾಸಕ ಸ್ನೇಹಜೀವಿ ಎಚ್ ಪಿ ಮಂಜುನಾಥ್ ಅವರು ಪಿರಿಯಾಪಟ್ಟಣ ತಾಲೂಕಿನ ಹರಗನಹಳ್ಳಿ ನಡೆಯುತ್ತಿರುವ ಸಾಮೂಹಿಕ ಇಸ್ತಾಮದಲ್ಲಿ ಭೇಟಿ ನೀಡಿ ಭಾಗವಹಿಸಿದ ಎಲ್ಲಾ ಮುಸ್ಲಿಂ ಬಾಂಧವರಿಗೆ ಶುಭಕೋರಿನಂತರ ಮಾತನಾಡಿದರು ಎಲ್ಲಾ. ಮುಸ್ಲಿಂ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಈ ಸಮ್ಮೇಳನದಲ್ಲಿ ಭಾಗವಹಿಸಿದ್ದು ಅಲ್ಲಾಹನು ಎಲ್ಲರ ಪ್ರಾರ್ಥನೆಯನ್ನು ಸೇರಿರುವ ಬಹಳ ಸಂತೋಷದ ವಿಷಯ ಅಲ್ಲಾನು ಎಲ್ಲರ ಪ್ರಾರ್ಥನೆಯಲ್ಲಿ ಭಾಗವಹಿಸಿರುವ ಬಾಂಧವರಿಗೆ ಅದನ್ನು ಅಲ್ಲಾಹನು ಅದನ್ನು ಈಡೇರಿಸಲಿ ಎಂದು ನಾನು ಆಶಿಸುತ್ತೇನೆ ಹಾಗೂ ನಾಡಿನ ಒಳ್ಳೆಯ ಮಳೆ ಬೆಳೆ ಆಗಲಿ ಎಂದು ಈ ಸಂದರ್ಭದಲ್ಲಿ ಜಮಾತಿನ ಮುಖ್ಯಸ್ಥರಾದ ಚಂದ್ ಬೈ ಗ್ಯಾರಂಟಿ ಅಧ್ಯಕ್ಷರಾದ ರಾಘು ಯೂತ್ ಕಾಂಗ್ರೆಸ್ ಅಧ್ಯಕ್ಷರಾದ ಪೈಸಲು ಕಾರ್ಯಕರ್ತರಾದ ರೋಷನ್ ಸರ್ವರ್ ಸಿರಾಜ್ ಸನಾವಲ್ಲ ಸಮೀರ್ ಅಲ್ತಾಫ್ ಹಾಗು ಇನ್ನಿತರ ಹಾಜರಿದ್ದರು

# ರಾಷ್ಟ್ರೀಯ ಜಂತುಹುಳು ನಿವಾರಣೆ ಕಾರ್ಯಕ್ರಮ



• **ಮಲ್ಲಮ್ಮ ನುಡಿ ವಾರ್ತೆ ಸಿಂಧನೂರು;**

ಜಿಲ್ಲಾ ಆಡಳಿತ ಜಿಲ್ಲಾ ಪಂಚಾಯತ ರಾಯಚೂರು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ರಾಯಚೂರು ತಾಲೂಕು ಆರೋಗ್ಯ ಅಧಿಕಾರಿಗಳ ಕಾರ್ಯಾಲಯ ಸಿಂಧನೂರ ಪ್ರಾಥಮಿಕ ಆರೋಗ್ಯ ಕೇಂದ್ರ ಖ, ಊ. ಓ. 2, ಹಾಗೂ ಸರ್ಕಾರಿ ಪ್ರೌಢಶಾಲೆ ಖ ಊ ಓೞ. 1 ಇವರ ಸಂಯುಕ್ತ ಆಶ್ರಯದಲ್ಲಿ ಇಂದು ಆರ್, ಹೆಚ್, ನಂ, 1, ಕ್ಯಾಂಪನಲ್ಲಿ ಸರ್ಕಾರಿ ಪ್ರೌಢಶಾಲೆಯ ಆವರಣದಲ್ಲಿ ದಿನಾಂಕ 10 /2/ 2026 ರಂದು ರಾಷ್ಟ್ರೀಯ ಜಂತುಹುಳು ಜಾಗ್ರತೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ರಾಷ್ಟ್ರೀಯ ಜಂತುಹುಳು ನಿವಾರಣೆ ಕಾರ್ಯಕ್ರಮ ಕುರಿತು ಮಾತನಾಡಿದ ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಗೀತಾ ಹಿರೇಮಠ ಅವರು ಇತ್ತೀಚೆಗೆ ದಿನಮಾನಗಳಲ್ಲಿ ಮಕ್ಕಳಲ್ಲಿ ಅಪೌಷ್ಟಿಕತೆ ರಕ್ತ ಹೀನತೆಯಿಂದ ಬಳಲುವುದು ದೈಹಿಕ ಹಾಗೂ ಮಾನಸಿಕ ಬೆಳವಣಿಗೆ ಕುಂಠಿತವಾಗುವುದು

ಜಂತುಹುಳಗಳ ಬಾಧೆಯನ್ನು ಸುಲಭವಾಗಿ ನಿಯಂತ್ರಿಸಲು ಜಂತುಹುಳು ಮಾತ್ರೆಯನ್ನು 1ರಿಂದ 19 ವರ್ಷದ ಒಳಗಿನ ಎಲ್ಲಾ ಮಕ್ಕಳಿಗೆ ತಪ್ಪದೆ ನೀಡಬೇಕು,ಕೈ ತೊಳೆಯುವ ವಿಧಾನ ಅನುಸರಿಸಬೇಕು ಗರ್ಭಿಣಿಯರಿಗೆ 6 ತಿಂಗಳ ನಂತರ ಕೊಡಬೇಕು ಎಂದು ತಿಳಿಸಿದರು

ನಂತರ ರಾಮಾಂಜನ್ ಕುಮಾರ್ RKSK ಆಪ್ತಸಮಾಲೋಚಕರು, ಆರ್.ಕೆ ಎಸ್ ಕೆ ಕಾರ್ಯಕ್ರಮದಡಿಯಲ್ಲಿ ಎಲ್ಲಾ ಸೌಲಭ್ಯದ ಕುರಿತು ಹದೆಹರೆಯದ ಸಮಸ್ಯಭಾವನಾತ್ಮಕವಾಗಿ ಅಪೌಷ್ಟಿತಿಕತೆ, ಬಗ್ಗೆ ಮಾಹಿತಿ ನೀಡಿದರು

ಮತ್ತು ಸ್ಪರ್ಶ್ ಕುಷ್ಠ ರೋಗ ಆಂದೋಲನದ ಬಗ್ಗೆ ಹದಿಹರೆಯದ ಮಕ್ಕಳ ಸಮಸ್ಯೆಗಳ ವೈಯಕ್ತಿಕ ಸ್ವಚ್ಛತೆಯ ಕುರಿತು ಋತುಚಕ್ರ ನೈರ್ಮಲ್ಯ ನಿರ್ವಹಣೆಯ ಕುರಿತು ಶಾಲಾ ವಿದ್ಯಾರ್ಥಿಗಳಿಗೆ ಮಾಹಿತಿ ನೀಡಲಾಯಿತು.

ಈ ಸಂದರ್ಭದಲ್ಲಿ. ಸರಸ್ವತಿ ಕಊಅಔ, ಶೇಖರ್ ನಾಯಕ್ ಅಊಔ, ಅಂಜಮ್ಮ ಆಶಾ ಕಾರ್ಯಕರ್ತೆ, ಈರಣ್ಣ ಐ ಕಮ್ಮಾರ ಹೆಡ್ ಮಾಸ್ಟರ್, ವಿಕ್ರಂ ಖ, ಅಮರೇಶ, ರಾಜಲಕ್ಷ್ಮಿ, ಓ.ಈ ತೋಟದ, ಹನುಮಂತ ಸಹ ಶಿಕ್ಷಕರು ಹಾಗೂ ವಿದ್ಯಾರ್ಥಿಗಳ ಸೇರಿದಂತೆ ಇತರರು ಉಪಸ್ಥಿತರಿದ್ದರು.

# ಅವೈಜ್ಞಾನಿಕ ಕಾಮಗಾರಿ : ಶಾಸಕರಿಂದ ಅಧಿಕಾರಿಗಳಿಗೆ ತರಾಟೆ



• **ಮಲ್ಲಮ್ಮ ನುಡಿ ವಾರ್ತೆ ಮುದಗಲ್ :**

ರಾಯಚೂರು ಬೆಳಗಾವಿ ಮುಖ್ಯ ರಾಜ್ಯ ಹೆದ್ದಾರಿ ಪಕ್ಕದಲ್ಲಿ ಕೋಟೆ ತಡೆ ನಿರ್ಮಾಣ ಕಾಮಗಾರಿ ಅವೈಜ್ಞಾನಿಕವಾಗಿ ರುವದನ್ನು ಕಂಡು ಲಿಂಗಸಗೂರು ಕ್ಷೇತ್ರದ ಶಾಸಕ ಮಾನಪ್ಪ ಡಿ ವಜ್ಜಲ್ ಅಧಿಕಾರಿಗಳ ಮೇಲೆ ಕೆಂಡಾಮಂಡಲ ವಾಗಿರುವ ಘಟನೆ ಶನಿವಾರ ಜರುಗಿತು.

ಮೊಹರಂ ಆಲಂಗಳ ಭೇಟಿ ನೀಡುವ ಕೇಂದ್ರ ಸ್ಥಳವಾಗಿದೆ. ಹಾಗೂ

ಪಟ್ಟಣದಲ್ಲಿ ಚಾವಡಿ ಕಟ್ಟೆ ರಸ್ತೆ ಮತ್ತು ರಾಜ್ಯ ಹೆದ್ದಾರಿಗೆ ಕೋಟೆ ಮುಂಭಾಗದಲ್ಲಿರುವ ಕಂದಕಕ್ಕೆ 35ಲಕ್ಷ ಮೊತ್ತದಲ್ಲಿ ತಡೆ ಗೋಡೆ ನಿರ್ಮಾಣ ಮಾಡುತ್ತಿರುವದು ಅವೈಜ್ಞಾನಿಕವಾಗಿದೆ. ಚಾವಡಿ ಕಟ್ಟೆ ಹಿಂದಿನ ರಸ್ತೆಯುದ್ದಕ್ಕೂ ಐತಿಹಾಸಿಕ ಮುದಗಲ್ಲ ಮೋಹರಂ ಕೊನೆಯ ದಿನದ ದೃಶ್ಯಾವಳಿಗಳ ವೀಕ್ಷಣೆಗೆ ಲಕ್ಷಾನುಗಟ್ಟಲೇ ಭಕ್ತರು ಸೇರಿಕೊಂಡು ವಿಜ್ರಂಭಿಸುವ ಸ್ಥಳವಾಗಿದೆ. ತಡೆಗೋಡೆಯನ್ನು ಅವೈಜ್ಞಾನಿಕವಾಗಿ ರಸ್ತೆಯನ್ನು ಇಕ್ಕಟ್ಟಾಗಿ ಮಾಡುವಂತಹ ಕಾಮಗಾರಿಗೆ ಅವಕಾಶ ನೀಡಿರುವದನ್ನು ಪಿಡಬ್ಲುಡಿ ಜೆಎ ಗಜಾನನ ಅವರನ್ನು ತರಾಟೆಗೆ ತೆಗೆದುಕೊಂಡರು.

ಮುಂದುವರಿದು ರಾಯಚೂರು ಬೆಳಗಾವಿ ರಾಜ್ಯ ಹೆದ್ದಾರಿಗೆ ಹೊಂದಿಕೊಂಡ ಕಂದಕದ ತಡೆಗೋಡೆ ಕೂಡ ಗುತ್ತಿಗೆದಾರರು ತಮ್ಮ ಖರ್ಚು ಕಡಿಮೆ ಮಾಡಿಕೊಳ್ಳುವ ನಿಟ್ಟಿನಲ್ಲಿ ರಸ್ತೆ ಅಗಲೀಕರಣಕ್ಕೆ ಅವಕಾಶ ನೀಡದೇ ಇದ್ದ ರಸ್ತೆಯಲ್ಲಿಯೇ ತಡೆಗೋಡೆ ನಿರ್ಮಾಣಕ್ಕೆ ಮುಂದಾಗಿರುವದು,

ದಿನಂಪ್ರತಿ ನೂರಾರು ವಾಹನಗಳ ಸಂಚಾರದ ರಸ್ತೆ ಇಕ್ಕಟ್ಟಾಗುವಂತೆ ಕಾಮಗಾರಿ ನಿರ್ವಹಿಸುತ್ತಿರುವದು ಶಾಸಕರನ್ನು ಮತ್ತಷ್ಟು ಕೆಂಡಾ ಮಂಡಲವಾಗುವಂತೆ ಮಾಡಿತು.

ಕೂಡಲೇ ಹಿರಿಯ ಅಧಿಕಾರಿಗಳೊಂದಿಗೆ ಆಗಮಿಸಿ ಚರ್ಚಿಸಿ ಕಾಮಗಾರಿ ಕೈಗೆತ್ತಿಕೊಳ್ಳಿ, ಯಾವದೇ ಕಾರಣ–ಕ್ಕೂ ರಸ್ತೆ ಅಗಲೀಕರಣವಾಗುವ ನಿಟ್ಟಿನಲ್ಲ ಕಾಮಗಾರಿ ಕೈಗೆತ್ತಿಕೊಳ್ಳಿ, ಅಲ್ಲಿಯವರೆಗೆ ಕಾಮಗಾರಿಯನ್ನು ನಿಲ್ಲಿಸಬೇಕು, ಗುತ್ತಿಗೆದಾ ರರಿಗೆ ಬಿಲ್ ಕೂಡ ಮಾಡಬಾರದು ಎಂದು ಸ್ಥಳದಲ್ಲಿದ್ದ ಅಧಿಕಾರಿಗಳಿಗೆ ಮೌಖಿವಾಗಿ ಆದೇಶಿಸಿದರು.

ಈ ಸಮಯದಲ್ಲಿ ಈ ಸಮಯದಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷ ವೀರನಗೌಡ ಲೆಕ್ಕಿಹಾಳ, ಗಿರಿಮಲ್ಲನಗೌಡ ಕರಡಕಲ್, ಲಿಂಗಸುಗೂರು ಮಂಡಲ ಅಧ್ಯಕ್ಷ ನಾಗಭೂಷಣ , ಮುದಗಲ್ಲ ಮಂಡಲ ಅಧ್ಯಕ್ಷ ಹುಲ್ಲೇಶ ಸಾಹುಕಾರ, ನಗರ ಘಟಕ ಅಧ್ಯಕ್ಷ ಕರಿಯಪ್ಪ ಯಾದವ, ಅಯ್ಯಪ್ಪ ಮಾಳೂರ, ಮುದುಕಪ್ಪ ನಾಯಕ, ಉದಯಕುಮಾರ ಕಮ್ಮಾರ, ಕಾಂತು ಪತ್ತಾರ, ಸಣ್ಣ ಸಿದ್ದಯ್ಯಸ್ವಾಮಿ, ನಾಗರಾಜ ತಳವಾರ, ಮಂಜುನಾಥ, ಚಂದಾವಲಿಸಾಬ, ಪುರಸಭೆ ಮುಖ್ಯಾಧಿಕಾರಿ ಪ್ರವಿಣ ಬೋಗಾರ, ಪಿಡಬ್ಲುಡಿ ಜೆಇ ಗಜಾನನ ಇದ್ದರು.

# ಉತ್ಸವ ಇತಿಹಾಸ ನಿರ್ಮಿಸಿದೆ: ಡಿ.ಕೆ.ಶಿವಕುಮಾರ

• **ಮಲ್ಲಮ್ಮ ನುಡಿ ವಾರ್ತೆ ರಾಯಚೂರು:**

ಬೇರೆ ಬೇರೆ ಜಾತಿ ಹಾಗೂ ಧರ್ಮಗಳ ಜನರು ಉತ್ಸವದಲ್ಲಿ ಸೇರಿದ್ದೇವೆ. ಅದರಂತೆ ಕಲಾವಿದರಿಗೂ ಯಾವುದೇ ಜಾತಿ,ಧರ್ಮ ಎಂಬುದಿರುವುದಿಲ್ಲ. ರಾಯಚೂರು ಉತ್ಸವವು ಸರ್ವ ಜನರ, ಸರ್ವಧರ್ಮಿಯರ ಸಂಗಮವಾಗಿದೆ. ಲಕ್ಷಾಂತರ ಸಂಖ್ಯೆಯಲ್ಲಿ ಜನ ನೆರೆದು ರಾಯಚೂರು ಜಿಲ್ಲಾ ಉತ್ಸವವು ಯಶಸ್ವಿಯಾಗಿ ಹೊಸ ಇತಿಹಾಸ ನಿರ್ಮಿಸಿದೆ ಎಂದು ರಾಜ್ಯದ ಉಪ ಮುಖ್ಯಮಂತ್ರಿಗಳಾದ ಡಿ.ಕೆ.ಶಿವಕುಮಾರ ಅವರು ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮಹಾನಗರ ಪಾಲಿಕೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗಳ ಆಶ್ರಯದಲ್ಲಿ ಫೆ.7ರಂದು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಆವರಣದಲ್ಲಿ ನಡೆದ ಎಡೆದೊರೆ ನಾಡು ರಾಯಚೂರು ಜಿಲ್ಲಾ ಉತ್ಸವದ ಸಮಾರೋಪ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

ಧರ್ಮ ಯಾವುದಾದರೇನು ತತ್ವ ಒಂದೇ ಇರಬೇಕು. ಪೂಜೆ ಯಾವುದಾದರೇನು ಭಕ್ತಿ ಒಂದೇ ಇರಬೇಕು. ಈ ನಾಡಿನಲ್ಲಿ ಶಾಂತಿ ನೆಲಸಬೇಕು ಎನ್ನುವ ಮಹತ್ವದ ಸಂದೇಶವನ್ನು ಇಂತಹ ಉತ್ಸವಗಳ ಮೂಲಕ ಜನತೆಗೆ ನೀಡುತ್ತಿದ್ದೇವೆ ಎಂದು ಅವರು ತಿಳಿಸಿದರು.

ಈ ದೇಶದ ಇತಿಹಾಸದಲ್ಲಿ ರಾಯಚೂರು ಜಿಲ್ಲೆ ಕೂಡ ತನ್ನದೇ ವೈಭವ ಹಾಗೂ ಇತಿಹಾಸದ ಮೂಲಕ ರಾಜ್ಯದಲ್ಲಿ ಖ್ಯಾತಿ ಪಡೆದಿದೆ. ಚೋಳರು, ವಿಜಯನಗರದ ಅರಸರು ಸೇರಿದಂತೆ ಅನೇಕ ರಾಜಮಹಾರಾಜರು ಆಳ್ವಿಕೆ ನಡೆಸಿದ ನಾಡು ಇದಾಗಿದೆ. ರಾಜ




ಮಹಾರಾಜರ ಕಾಲದಿಂದಲೂ ಈ ನಾಡಲ್ಲಿ ಶಾಂತಿ ಸೌಹಾರ್ದತೆ ನೆಲಿಸಿದೆ. ರಾಯಚೂರು ಉತ್ಸವ ಆಯೋಜನೆಯ ಮೂಲಕ ಇಂತಹ ಐತಿಹಾಸಿಕ ಮಹತ್ವದ ಸಂದೇಶವನ್ನು ನಾವು ಅರಿಯಬೇಕು ಎಂದು ತಿಳಿಸಿದರು.ರಾಯಚೂರು ಜಿಲ್ಲೆ ಬಿಸಿಲ ನಾಡು ಮಾತ್ರವಲ್ಲ; ರಾಜ್ಯ–ಕ್ಕೆ ವಿದ್ಯುತ್ ಪೂರೈಕೆ ಮಾಡುವ ಏಕೈಕ ಜಿಲ್ಲೆಯಾಗಿದೆ. ಭತ್ತ ಮತ್ತು ಹತ್ತಿ ಸೇರಿದಂತೆ ಯಾವುದೇ ಬೆಳೆ ಬೆಳೆಯುವ ಜಿಲ್ಲೆಯ ರೈತರ ಹಿತ ಅಭಿವೃದ್ಧಿಗೆ ನಾವು ಬದ್ಧರಾಗಿದ್ದೇವೆ. ಈ ಜಿಲ್ಲೆಯ ಕೊನೆಯ ಭಾಗದವರೆಗೆ ಕಾಲುವೆ ನೀರನ್ನು ತಲುಪಿಸುವ ಪ್ರಯತ್ನದ ಕಾರ್ಯಯೋಜನೆಯಲ್ಲಿದ್ದೇವೆ ಎಂದರು.ಹಿರಿಯರಾದ ಮಲ್ಲಿಕಾರ್ಜುನ ಖರ್ಗೆ ಅವರ ಪರಿಶ್ರಮದಿಂದಾಗಿ 371(ಜೆ) ಜಾರಿಯಾಗಿ, ರಾಯಚೂರು ಸೇರಿದಂತೆ ಹಿಂದುಳಿದ ಈ ಭಾಗದ ಬೇರೆ ಬೇರೆ ಜಿಲ್ಲೆಗಳಲ್ಲಿ ಅಭಿವೃದ್ಧಿ ಕಾಣುತ್ತಿದೆ. ಶಿಕ್ಷಣ ಮತ್ತು ಉದ್ಯೋಗದಲ್ಲಿ ಮೀಸಲು ಸೌಕರ್ಯ ಕಲ್ಪಿಸಿ ಈ ಭಾಗದ ಕೋಟ್ಯಂತರ ಜನರ ಬಾಳಿನಲ್ಲಿ ಬೆಳಕನ್ನು ಮೂಡಿಸಿದ ಮಲ್ಲಿಕಾರ್ಜುನ ಖರ್ಗೆ ಅವರ ಹೆಸರು ಮಹಾತ್ಮ ಗಾಂಧೀಜಿ ಹಾಗೂ ಡಾ.ಬಿ.ಆರ್. ಅಂಬೇಡ್ಕರ್ ಅವರಂತೆ ಇತಿಹಾಸದಲ್ಲಿ ಸದಾಕಾಲ ಉಳಿಯಲಿದೆ ಎಂದು ಅವರು ತಿಳಿಸಿದರು.ರಾಜ್ಯ ಸರ್ಕಾರವು ಈಗಾಗಲೇ ಐದು ಗ್ಯಾರಂಟಿ ಯೋಜನೆಗಳನ್ನು ಘೋಷಿಸಿ ಯಶಸ್ವಿಯಾಗಿ ಅನುಷ್ಠಾನ ಮಾಡುತ್ತಿದೆ. ಮುಂದುವರೆದು ನಾವು 6ನೇ ಗ್ಯಾರಂಟಿಯಾಗಿ ಭೂಮಿಯನ್ನು ಜನತೆಗೆ ಕೊಡುತ್ತೇವೆ ಎಂದು ಉಪಮುಖ್ಯಮಂತ್ರಿಗಳು ಘೋಷಿಸಿದರು.ಹಿಂದುಳಿದ ವರ್ಗಗಳ ಕಲ್ಯಾಣ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರು ಹಾಗೂ ಕೊಪ್ಪಳ ಜಿಲ್ಲಾ ಉಸ್ತುವಾರಿ ಸಚಿವರಾದ ಶಿವರಾಜ್ ಎಸ್. ತಂಗಡಗಿ ಅವರು ಮಾತನಾಡಿ, ರಾಯಚೂರು ಜಿಲ್ಲಾ ಉತ್ಸವ ಬಹಳ ದಿನಗಳ ನಂತರ ನಡೆಯುತ್ತಿದೆ. ಗಡಿ ಭಾಗದಲ್ಲಿ ಇಂತಹ ಉತ್ಸವಗಳು ನಡೆದು ಜನತೆಗೆ ಸಂಸ್ಕೃತಿ, ಕಲೆ ಬಗ್ಗೆ ತಿಳಿಸುವ ಕಾರ್ಯವಾಗಬೇಕು.

## ಮೈಸೂರಿನ ನಾಡಹಬ್ಬದಂತೆ ಸಿಡಿಬಂಡಿ ರಥೋತ್ಸವ: ಭರತ್ ರೆಡ್ಡಿ



• **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ**

ನಗರದ ಆರಾಧ್ಯದೇವತೆ ದುರ್ಗಮ್ಮ ದೇವಿಯ ವಾರ್ಷಿಕ ಸಿಡಿಬಂಡಿ ರಥೋತ್ಸವ ಈ ವರ್ಷ ಫೆ.24 ರಂದು ನಡೆಯಲಿದೆ. ಇದನ್ನು ಕಳೆದ ವರ್ಷಗಳಿಗಿಂತ ವಿಜೃಂಭಣೆಯಿಂದ ಮೈಸೂರಿನ ನಾಡ ಹಬ್ಬದಂತೆ ಆಚರಿಸಲಿದೆಂದು ನಗರ ಶಾಸಕ ಭರತ್ ರೆಡ್ಡಿ ಹೇಳಿದರು.

ಅವರು ದೇವಸ್ಥಾನದ ಯಾತ್ರಿ ನಿವಾಸದಲ್ಲಿ ಇಂದು ಫೆ. 24 ರಂದು ನಡೆಯುವ ಸಿಡಿ ಬಂಡಿ ಉತ್ಸವದ ಪೂರ್ವ ಸಿದ್ದತಾ ಸಭೆ ನಡೆಸಿ ಮಾತನಾಡುತ್ತಿದ್ದರು. ಇದು ಆರಾಧ್ಯ ದೇವತೆ ಭಕ್ತ ಸಮೂಹಕ್ಕೆ ಯಾವುದೇ ಸಮಸ್ಯೆ ಆಗದಂತೆ ವ್ಯವಸ್ಥೆ ಮಾಡಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು. ಸಿಡಿಬಂಡಿಯಲ್ಲಿ ಪಾಲ್ಗೊಳ್ಳುವ ಕಾರ್ಯಕರ್ತರಿಗೆ ಪಾಸ್ ಗಳನ್ನು ನೀಡಬೇಕು. ಸಂಜೆ ಸಾಂಸ್ಕೃತಿಕ ಕಾರ್ಯಕ್ರಮಗಳ ಪ್ರದರ್ಶನ ನಡೆಯಬೇಕು ಎಂದು ಹೇಳಿದರು.

ಮೇಯರ್ ಪಿ.ಗಾದೆಪ್ಪ ಮಾತನಾಡಿ, ಕಳೆದ ಎರೆಡು ವರ್ಷದಿಂದ ಭಕ್ತರಿಗೆ ಹೆಚ್ಚಿನ ಅನುಕೂಲದ ರೀತಿಯಲ್ಲಿ ಸಿಡಿಬಂಡಿ ಉತ್ಸವ ನಡೆಸುತ್ತಾ ಬಂದಿದೆ. ಎಲ್ಲ ಭಕ್ತರ ಸಹಕಾರದಿಂದ ಇದು ಸಾಧ್ಯ ಈ ವರ್ಷ ಇನ್ನೂ ಹೆಚ್ಚಿನ ಬಂದೋಬಸ್ತು, ಪಾಕಿಂ-ಗ್ ವ್ಯವಸ್ಥೆ, ಸಂಚಾರಿ ವ್ಯವಸ್ಥೆ, ದೀಪಾಲಂಕಾರ, ಪ್ರಸಾದ, ನೀರಿನ ವ್ಯವಸ್ಥೆ ಮಾಡಬೇಕಿದೆಂದರು.

ದೇವಸ್ಥಾನದ ಸಮೀಪದಲ್ಲಿ ಅಂ-ದಾಜು ಎರೆಡು ಎಕರೆ ಜಾಗ ಇದೆ. ಅದನ್ನು ದೇವಸ್ಥಾನಕ್ಕೆ ತೆಗೆದುಕೊಂಡು ಅಲ್ಲಿ ಯಾತ್ರಿಕರಿಗೆ ಡಾರ್ಮಿಟರಿ (ತಂಗುತಾಣ) ನಿರ್ಮಿಸಲು ಶಾಸಕರು ಮುಂದಾಗಬೇಕೆಂದು ಗಾದೆಪ್ಪ ಮನವಿ ಮಾಡಿದರು.

ಪಾಲಿಕೆ ಸದಸ್ಯ ಹನುಮಂತಪ್ಪ ಕೆ. ಮಾತನಾಡಿ, ಸಿಡಿ ಬಂಡಿ ಆದ ತಕ್ಷಣ ಪೊಲೀಸರು ಹೋಗುತ್ತಾರೆ. ಇದರಿಂದ ಟ್ರಾಫಿಕ್ ಸಮಸ್ಯೆ ಆಗುತ್ತೆ. ಇದನ್ನು ಸರಿಯಾಗಿ ನಿಭಾಯಿಸಬೇಕು ಎಂದರು.

ಸಭೆಯಲ್ಲಿ ಹಳ್ಳಿಗಳಿಂದ ವಿಶೇಸ ಬಸ್ ಓಡಿಸಲು, ಪಾಲಿಕೆಯಿಂದ ಸ್ವಚ್ಚತೆ, ಕುಡಿಯುವ ನೀರಿನ ವ್ಯವಸ್ಥೆ, ವಿದ್ಯುತ್ ಕಡಿತ ಮತ್ತು ಸರಬಾರಿಜಿನ ವ್ಯವಸ್ಥೆ, ಪೊಲೀಸ್ ಬಂದೋಬಸ್ತು ಮೊದಲಾದವುಗಳ ಬಗ್ಗೆ ಅಧಿಕಾರಿಗಳು ತಿಳಿಸಿದರು.

ಪಾಲಿಕೆ ಆಯುಕ್ತ ಪಿ.ಸಿ. ಮಂಜುನಾಥ, ಸಹಾಯಕ ಆಯುಕ್ತ ರಾಜೇಶ್ ಹೆಚ್.ಡಿ. ಪಾಲಿಕೆ ಸದಸ್ಯರಾದ ಹನುಂಮತಪ್ಪ ಕೆ. ನಗರ ಡಿವೈಎಸ್ಪಿ, ಚಂದ್ರಕಾಂತ ನಂದಾ-ರೆಡ್ಡಿ, ಧಾರ್ಮಿಕ ದತ್ತಿ ಇಲಾಖೆಯ ಸಹಾಯಕ ಆಯುಕ್ತೆ ಸವಿತಾ ಹೆಚ್, ದೇವಸ್ಥಾನದ ಕಾರ್ಯನಿರ್ವಹಕ ಅಧಿಕಾರಿ ಸೆಲ್ವಮಣಿ, ವೆಂಕಟೇಶ್ ಹೆಗಡೆ, ಹೊನ್ನಪ್ಪ . ಅರ್ಚಕ ರಾಮಾಂಜಿನೇಯ, ಮೊದಲಾದವರು ಇದ್ದರು.

# ಭಕ್ತ ಸಾಗರದ ಮಧ್ಯೆ ಸಾಗಿದ ಮೋಕಾ ಮಲ್ಲೇಶ್ವರಸ್ವಾಮಿ ತೇರು



• **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:**

ತಾಲೂಕಿನ ಮೋಕಾ ಗ್ರಾಮದ ಆರಾಧ್ಯದೈವ ಮಲ್ಲೇಶ್ವರ ಸ್ವಾಮಿಯ ರಥೋತ್ಸವ ನಿನ್ನೆ ಸಂಜೆ ಸಾವಿರಾರು ಭಕ್ತರ ಜಯ ಘೋಷಣೆಗಳೊಂದಿಗೆ ಗ್ರಾಮದ ಪ್ರಮುಖ ಬೀದಿಯಲ್ಲಿ ಸಾಗಿ-ತು. ಸೇರಿದ್ದ ಭಕ್ತ ಸಮೂಹ ಹೂ ಹಣ್ಣು ಎಸೆದು ನಮಿಸಿದರು.

ಡೊಳ್ಳು, ಹಲಗೆ ವಾದನ, ಗೊರವರ ಕುಣಿತ, ಗೊಂಬೆ ಕುಣಿತ ಮೊದಲಾದ ಜನಪದ ಕಲಾ ತಂಡಗಳೊಂದಿಗೆ ತೇರು ಸಾಗಿತು. ಜಿಲ್ಲೆಯ ವಿವಿಧ ತಾಲ್ಲೂಕುಗಳು ಹಾಗೂ ನೆರೆ ರಾಜ್ಯ ಆಂದ್ರ ಪ್ರದೇಶದಿಂದ ಆಗಮಿಸಿದ್ದ ಭಕ್ತರು ಸ್ವಾಮಿ ದರ್ಶನ ಪಡೆದರು.

ರಥ ಬೀದಿಯಲ್ಲಿ ಸಾಗಿ ಬರುತ್ತಿರುವುದನ್ನು ನೋಡಲು ಇಕ್ಕೆಲಗಳ ಕಟ್ಟಡಗಳ ಮೇಲೆ ಜನರು ನಿಂತು ಕಣ್ಣುತುಂಬಿಕೊಂಡರು. ಮಕ್ಕಳು, ಮಹಿಳೆಯರು ಹಾಗೂ ಪುರುಷರು ಸೇರಿದಂತೆ ಎಲ್ಲ ವಯೋಮಾನದ ಜನ ಉತ್ಸಾಹದಿಂದ ರಥೋತ್ಸವ ದಲ್ಲಿ ಪಾಲ್ಗೊಂಡಿದ್ದರು.

ಜನಪ್ರತಿನಿಧಿಗಳು, ಸ್ಥಳೀಯ ನಾಯಕರು, ವಿವಿಧ ಕ್ಷೇತ್ರಗಳ ಗಣ್ಯರು ಭಾಗವಹಿಸಿ ದೇವರ ದರ್ಶನ ಪಡೆದು ಭಕ್ತರೊಂದಿಗೆ ಸಂಭ್ರಮ ಹಂಚಿಕೊಂಡರು.

## ಯುಜಿಸಿ ನಿಯಮಾಳಿ ತಿದ್ದುಪಡಿಯ ತಡೆಯಾಜ್ಞೆ ತೆರವಿಗೆ ಆಗ್ರಹಿಸಿ ಡಿಎಸ್ ಎಸ್ ಪ್ರತಿಭಟನೆ



• **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:**

ವಿಶ್ವವಿದ್ಯಾಲಯ ಅನುದಾನ ಆಯೋಗ ಎಸ್ಸಿ, ಎಸ್ಟಿ ಮತ್ತು ಓಬಿಸಿ ವಿದ್ಯಾರ್ಥಿಗಳಿಗೆ ಸಮಾನತೆ ಪ್ರೋತ್ಸಾಹಿಸಲು ತಂದಿರುವ ನಿಯಮಾವಳಿ 2026 ಗಳಿಗೆ ಸುಪ್ರೀಂ ಕೋರ್ಟ್ ನೀಡಿರುವ ತಡೆಯಾಜ್ಞೆಯನ್ನು ತೆರೆವುಗೊಳಿಸಬೇಕು ಎಂದು ಆಗ್ರಹಿಸಿ ಇಂದು ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ (ಡಿ.ಜಿ ಸಾಗರ್ ಬಣ) ಯಿಂದ ಜಿಲ್ಲಾಧಿಕಾರಿಗಳ ಕಚೇರಿ ಮುಂದೆ ಪ್ರತಿಭಟನಾ ಧರಣಿ ನಡೆಸಲಾಯ್ತು.

ಸಮಿತಿಯ ರಾಜ್ಯ ಸಂಘಟನಾ ಸಂಚಾಲಕರು ಎ. ಮಾನಯ್ಯ.ಹಾಗೂ ಜಿಲ್ಲಾ ಸಂಚಾಲಕರು ಹೆಚ್. ಬಿ. ಗಂಗಪ್ಪ ಇವರ ನೇತೃತ್ವದಲ್ಲಿ ನಡೆದ ಪ್ರತಿಭಟನೆಯಲ್ಲಿ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಜಾತಿ, ಧರ್ಮ, ಇನ್ನಿತರ ತಾರತಮ್ಯ ಆಗುತ್ತಿರುವುದನ್ನು ತಡೆಗಟ್ಟಲು ಮಾಡಿರುವ ಯುಜಿಸಿ ನಿಯಮಾವಳಿಗಳನ್ನು ಜಾರಿ ತರಬೇಕು. ವಿದ್ಯಾರ್ಥಿಗಳಿಗೆ ಪ್ರತ್ಯೇಕ ನಿಯಮಾವಳಿ ಹೊರಡಿಸಬೇಕು. ಕೇಂದ್ರ ಸರ್ಕಾರ ಬೇಡಿಕೆಗಳನ್ನು ಕೂಡಲೇ ಜಾರಿಗೆ ತರಬೇಕೆಂದು. ಕರ್ನಾಟಕ ಸರ್ಕಾರ ರಾಜ್ಯದಲ್ಲಿ ದಲಿತ ವಿಧ್ಯಾರ್ಥಿಗಳು ಗಮನದಲ್ಲಿಟ್ಟುಕೊಂಡು ತರುತ್ತಿರುವ ಕಾನೂನ ವಿಳಂಬ ಮಾಡದೇ ಜಾರಿಗೆ ತರಬೇಕು. " ರೋಹಿತ್ ವೇಮುಲ ಕಾಯಿದೆ" ಯನ್ನು ಕರ್ನಾಟಕ ಸರ್ಕಾರ ಜಾರಿಗೊಳಿಸಲೇಬೇಕು.

ಕೇಂದ್ರ ಸರ್ಕಾರ ವಿಳಂಬ ನೀತಿಯನ್ನು ಅನುಸರಿಸದೆ ದಲಿತ ವಿಧ್ಯಾರ್ಥಿಗಳ ಸಮಾನತೆ ಉತ್ತೇಜನೆಗಾಗಿ ಕ್ರಮ ತೆಗೆದುಕೊಳ್ಳಲು ಮುಂದಾಗಬೇಕೆಂದು ಒತ್ತಾಯಿಸಲಾಯ್ತು.

ಪ್ರತಿಭಟನೆಯಲ್ಲಿ. ಬಿ.ರಾಂಪ್ರಸಾದ್, ಡಾ.ಗಾದಿಲಿಂಗನಗೌಡ, ಸಮಿತಿಯ ಮುಖಂಡರುಗಳಾದ ಹೆಚ್. ಆಂಜಿನೇಯ, ದೇವದಾಸ್ .ಕೆ. ಕೊಳಗಲ್ಲು ಮಲ್ಲಯ್ಯ ಮೊದಲಾದವರು ಪಾಲ್ಗೊಂಡಿದ್ದರು.

## ಜಿಲ್ಲಾ ಅಧ್ಯಕ್ಷರಾಗಿ ಮೂರನೇ ಬಾರಿಗೆ ನೇಮಕ



• **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:**

ಮೀನಳ್ಳಿ ತಾಯಣ್ಣ ಅವರು ಜೆಡಿಎಸ್ ಪಕ್ಷದ ಜಿಲ್ಲಾ ಅಧ್ಯಕ್ಷರಾಗಿ ಮೂರನೇ ಬಾರಿಗೆ ನೇಮಕಗೊಂಡಿದ್ದಾರೆ. ಪಕ್ಷದ ರಾಷ್ಟ್ರೀಯ ಅಧ್ಯಕ್ಷ, ಮಾಜಿ ಪ್ರಧಾನ ಮಂತ್ರಿ ಎಚ್.ಡಿ.ದೇವೇಗೌಡ ಅವರು ನೇಮಕಾತಿ ಮಾಡಿ ಆದೇಶ ಹೊರಡಿಸಿದ್ದಾರೆ.

ಮಾಜಿ ಮುಖ್ಯಮಂತ್ರಿ, ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ, ಜೆಡಿಎಸ್ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಅವರು ನೂತನ ಜಿಲ್ಲಾಧ್ಯಕ್ಷ ಮೀನಳ್ಳಿ ತಾಯಣ್ಣ ಅವರಿಗೆ ನೇಮಕಾತಿ ಆದೇಶ ಪತ್ರ ನೀಡಿದ್ದಾರೆ.ಪಕ್ಷದ ತತ್ವ ಹಾಗೂ ಸಿದ್ಧಾಂತಗಳಿಗೆ ಬದ್ಧರಾಗಿ, ಪಕ್ಷದ ಮುಖಂಡರನ್ನು ಹಾಗೂ ಕಾರ್ಯಕರ್ತರನ್ನು ವಿಶ್ವಾಸಕ್ಕೆ ತೆಗೆದು-ಕೊಂಡು ಗಣಿ ಬಳ್ಳಾರಿ ಜಿಲ್ಲೆಯಲ್ಲಿ ಪಕ್ಷವನ್ನು ತಳಮಟ್ಟದಿಂದ ಪಕ್ಷವನ್ನು ಮತ್ತಷ್ಟು ಪರಿಣಾಮಕಾರಿಯಾಗಿ ಸಂಘಟಿಸಿ ಬಲವರ್ಧನೆಗೊಳಿಸುವ ನಿಟ್ಟಿನಲ್ಲಿ ಕಾರ್ಯೋನ್ಮುಖರಾಗಬೇಕು ಎಂದು ಆಶಿಸಿದ್ದಾರೆ.

## ಜಿ.ಪಂ ಮಾಸಿಕ ಕೆಡಿಪಿ ಸಭೆ ಸಿಜರಿನ್ ಬೇಡ, ಸಹಜ ಹೆರಿಗೆ ಇರಲಿ

• **ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ:**



ಜಿಲ್ಲೆಯ ಖಾಸಗಿ ಆಸ್ಪತ್ರೆಗಳಲ್ಲಿ ಪ್ರತಿಶತ 80 ಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಸಿಜರಿನ್ ಹೆರಿಗೆ ಮಾಡಲಾಗುತ್ತಿದ್ದು, ಅಧಿಕ ಪ್ರಮಾಣದಲ್ಲಿ ಸಿಜರಿನ್ ಹೆರಿಗೆಗಳನ್ನು ಮಾಡುವಂತಹ ಆಸ್ಪತ್ರೆಗಳನ್ನು ಗುರುತಿಸಿ, ಅಲ್ಲಿ ಬಿಗಿ ಕ್ರಮಗಳನ್ನು ಕೈಗೊಳ್ಳಬೇಕು ಎಂದು ವೈದ್ಯಕೀಯ ಶಿಕ್ಷಣ ಇಲಾಖೆ ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯೂ ಆಗಿರುವ ಮೊಹಮ್ಮದ ಮೊಹಿಸಿನ್ ಅಧಿಕಾರಿಗಳಿಗೆ ಸೂಚಿಸಿದರು.

ಜಿಲ್ಲಾ ಪಂಚಾಯತ್ ನೂತನ ಸಭಾಂಗಣದಲ್ಲಿ ಸೋಮವಾರ ಜರುಗಿದ ತೃತೀಯ ಮಾಸಿಕ ಕೆಡಿಪಿ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಜಿಲ್ಲೆಯ ಸರಕಾರಿ ತಾಲೂಕು ಆಸ್ಪತ್ರೆ ಹಾಗೂ ಜಿಲ್ಲಾಸ್ಪತ್ರೆಗಳಲ್ಲಿ ಪ್ರತಿಶತ 40 ಅಥವಾ 48 ರಷ್ಟು ಮಾತ್ರ ಸಿಜರಿನ್ ಹೆರಿಗೆ ಆಗುತ್ತಿದ್ದರೆ, ಖಾಸಗಿ ಆಸ್ಪತ್ರೆಗಳಲ್ಲಿ ಇದರ ಎರಡು ಪಟ್ಟು ಅಧಿಕ ಸಿಜರಿನ್ ಹೆರಿಗೆಗಳಾಗುತ್ತವೆ.

ಈ ನಿಟ್ಟಿನಲ್ಲಿ ಖಾಸಗಿ ಆಸ್ಪತ್ರೆಗಳ ಮೇಲೆ ಹಿಡಿತವಿರಲಿ. ಅಲ್ಲದೇ ಭ್ರೂಣ ಹತ್ಯೆಯಂತಹ ದೂರುಗಳು ಸಹ ಮತ್ತೆ ಕೇಳಿ ಬರುತ್ತಿರುವದರಿಂದ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ವಿಶೇಷವಾಗಿ ಜಮಖಂಡಿ, ಮುಧೋಳ, ಮಹಾಲಿಂಗಪೂರ ಸುತ್ತಮುತ್ತಲಿನ ಪ್ರದೇಶಗಳತ್ತ ಗಮನ ಹರಿಸುವ ಕಾರ್ಯ ಮಾಡಬೇಕು ಎಂದರು.

ಸರ್ವೋಚ್ಚ ನ್ಯಾಯಾಲಯದ ಆದೇಶದ ಅನ್ವಯ ಬೀದಿ ನಾಯಿ ಹಾವಳಿ ತಡೆಯಲು ಕ್ರಮಕೈಗೊಳ್ಳಿ. ಜಿಲ್ಲೆಯಲ್ಲಿ ಬೀದಿ ನಾಯಿಗಳ ಹಾವಳಿಯಿಂದ ಮಕ್ಕಳು ಮತ್ತು ಸಾರ್ವಜನಿಕರಿಗೆ ತೊಂದರೆಯಾಗಿರುವುದು ಸಾಕಷ್ಟು ಸುದ್ದಿಯಾಗಿದೆ. ಈ ನಿಟ್ಟಿನಲ್ಲಿ ಸ್ಥಳಿಯ ಸಂಸ್ಥೆಗಳು ಮತ್ತು ಪಶು ಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆ ಅಧಿಕಾರಿಗಳು ಮುಂಜಾಗ್ರತ ಕ್ರಮಗಳನ್ನು ಕೈಗೊಳ್ಳಬೇಕು ಮತ್ತು ಬೀದಿ ನಾಯಿಗಳಿಗೆ ಸಂತಾನ ಹರಣ ಶಸ್ತ್ರ ಚಿಕಿತ್ಸೆ ಮಾಡಿಸಲು ಯೋಜನೆ ರೂಪಿಸಿಕೊಂಡು, ಶೀಘ್ರದಲ್ಲಿ ಟೆಂಡರ್ ಕರೆದು ಸಮಸ್ಯೆ ಬಗೆಹರಿಸಿಕೊಳ್ಳಬೇಕು ಎಂದು ಅವರು ಹೇಳಿದರು.

ಜಿಲ್ಲಾಧಿಕಾರಿ ಸಂಗಪ್ಪ ಮಾತನಾಡಿ, ಬಿಸಿಎಂ ಹಾಗೂ ಸಮಾಜ ಕಲ್ಯಾಣ ಇಲಾಖೆ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಹಾಸ್ಟೇಲ್‌ಗಳಿಗೆ ಭೇಟಿ ನೀಡಿದ ಸಂದರ್ಭದಲ್ಲಿ ವಸತಿ ನಿಲಯಗಳಲ್ಲಿ ಸಾಕಷ್ಟು ಲೋಪದೋಷಗಳಿರುವುದು ಕಂಡು ಬಂದಿರುತ್ತದೆ, ಬಸ್ ನಿಲ್ದಾಣಗಳಲ್ಲಿ ಸಹ ಅಸ್ತವ್ಯಸ್ಥತೆ ಕಂಡು ಬಂದಿದ್ದು, ಪತ್ರಕರ್ತರು ಇವುಗಳತ್ತ ಗಮನಹರಿಸಿ ಎಂದು ತಿಳಿಸುತ್ತಿರುವುದರಿಂದ ಸಂಬಂಧಪಟ್ಟ ಇಲಾಖೆ ಅಧಿಕಾರಿಗಳು ಆದ್ಯತೆಯ ಮೇರೆಗೆ ಎಲ್ಲವನ್ನು ಸರಿಪಡಿಸುವ ಕೆಲಸ ಮಾಡಬೇಕು ಎಂದು ತಿಳಿಸಿದರು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಶಶಿಧರ ಕುರೇರ್ ಮಾತನಾಡಿ, ಎಲ್ಲ ಅಧಿಕಾರಿಗಳು ಎಸ್‌ಸಿಪಿ ಮತ್ತು ಟಿಎಸ್‌ಪಿ ಕಾಯಿದೆ ಸರಿಯಾಗಿ ತಿಳಿದುಕೊಳ್ಳಿ ಅದರಂತೆ ಕಾರ್ಯನಿರ್ವಹಿಸಿ, ವಿನಾಕಾರಣ ಅನುದಾನ ಹಿಂತಿರುಗಿ ಹೋಗದಂತೆ ನೋಡಿಕೊಳ್ಳಿ. ಅಂಗನವಾಡಿಗಳಿಗೆ ನಿಗದಿತ ಸಮಯಕ್ಕೆ ಹಾಲಿನ ಪೌಡರ್ ಪೂರೈಕೆಯಾಗಬೇಕು. ಮಕ್ಕಳು ಮೊಟ್ಟೆ ಸೇವಿಸುವಂತೆ ತಿಳುವಳಿಕೆ ನೀಡಬೇಕು. ಮುಖ್ಯವಾಗಿ ಪಾಲಕರಲ್ಲಿ ಮೊಟ್ಟೆಯಲ್ಲಿ ಪೋಶಕಾಂಶಗಳಿರುತ್ತವೆ ಎಂಬುದನ್ನು ಮನವರಿಕೆ ಮಾಡಿಕೊಡಬೇಕು. ಶಾಲೆಗಳು ಮತ್ತು ಅಂಗನವಾಡಿ ಸುತ್ತ ಮುತ್ತ ವಿದ್ಯುತ್ ತಂತಿಗಳು ಜೋತಾಡುತ್ತಿದ್ದರೆ ಆಧ್ಯತೆ ಮೇರೆಗೆ ತೆರವು ಮಾಡಿ ಯಾವುದೇ ಅವಘಡಗಳು ಸಂಭವಿಸದಂತೆ ಮುನ್ನೆಚ್ಚರಕೆ ಕ್ರಮ ಕೈಗೊಳ್ಳಿ ಎಂದು ಹೆಸ್ಕಾಂ ಅಧಿಕಾರಿಗಳಿಗೆ ಸೂಚಿಸಿದರು.

ಸಭೆಯಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿದ್ದಾರ್ಥ ಗೋಯಲ್, ಅಪರ ಜಿಲ್ಲಾಧಿಕಾರಿ ಅಶೋಕ ತೇಲಿ, ಜಿಲ್ಲಾ ಪಂಚಾಯತ್ ಉಪ ಕಾರ್ಯದರ್ಶಿ ಎನ್. ವಾಯ್.ಬಸರಿಗಿಡದ, ಮುಖ್ಯ ಲೆಕ್ಕಾಧಿಕಾರಿ ಸಿದ್ರಾಮೇಶ್ವರ ಉಕ್ಕಲಿ, ಯೋಜನಾ ನಿರ್ದೇಶಕ ಅಲ್ಲಮಪ್ರಭು ಸೇರಿದಂತೆ ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

## ಶ್ರೇಷ್ಠ ಸಹಕಾರ ಪ್ರಶಸ್ತಿ ಪುರಸ್ಕೃತ ನೀಲಕಂಠಪ್ಪಗೆ ಗೌರವ ಸನ್ಮಾನ



• **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:**

ರಾಜ್ಯ ಸರ್ಕಾರದ ಸಹಕಾರ ಇಲಾಖೆ ಕೊಡಮಾಡಿದ ಶ್ರೇಷ್ಟ ಸಹಕಾರ ಪ್ರಶಸ್ತಿ ಪುರಸ್ಕೃತ ನಗರದ ಜನತಾ ಬಜಾರ್ ನ ಮಾಜಿ ಅಧ್ಯಕ್ಷ ಜಿ.ನೀಲಕಂಠಪ್ಪ ಅವರಿಗೆ ಶ್ರೀ ಶರಣ ಸಕ್ಕರೆ ಕರಡೀಶ ಸೌಹಾರ್ದ ಪತ್ತಿನ ಸಹಕಾರಿ ಸಂಘ ನಿಯಮಿತದಿಂದ ಗೌರವ ಸನ್ಮಾನ ಮಾಡಿದೆ.

ನಿನ್ನೆ ಹೊಸಪೇಟೆಯಲ್ಲಿ ನಡೆದ ಶ್ರೀ ಶರಣ ಸಕ್ಕರೆ ಕರಡೀಶ ಸೌಹಾರ್ದ ಪತ್ತಿನ ಸಹಕಾರಿ ಸಂಘ ನಿಯಮಿತದ ನೂತನ ಶಾಖೆಯ ಉದ್ಘಾಟನಾ ಸಮಾರಂಭದಲ್ಲಿ ಬ್ಯಾಂಕಿನ ಅಧ್ಯಕ್ಷ ಕಲ್ಗುಡಿ ಮಂಜುನಾಥ. ಉಪಾಧ್ಯಕ್ಷ ಟೆಂಗಿನಕಾಯ್ ಮಹಂತೇಶ. ಗುಡೇಕೋಟೆ ನಾಗರಾಜ್. ನಿಷ್ಟಿ ರುದ್ರಪ್ಪ. ಉಮಾಪತಿ.ಅಲ್ಲಂ ಪ್ರಮೋದ್. ಜವಳಿ ಕಲ್ಮಠಪ್ಪ ಮೊದಲಾದವರು ಸನ್ಮಾನಿಸಿ ಗೌರವಿಸಿದರು.

## ಕಲೆ ಸಂಸ್ಕೃತಿ ಮುಂದಿನ ಪೀಳಿಗೆಗೆ ತಲುಪಲಿ: ಶಾಷು ಮೋದಿನ್



• **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:**

ನಮ್ಮ ನಾಡು-ನುಡಿಯ ಕಲೆ ಮತ್ತು ಸಂಸ್ಕೃತಿಯು ಮುಂದಿನ ಪೀಳಿಗೆಗೆ ತಲುಪಿಸುವ ಕಾರ್ಯ ನಿರಂತರವಾಗಬೇಕು ಎಂದು ಜಿಲ್ಲಾ ಪರಿಶಿಷ್ಟವರ್ಗಗಳ ಕಲ್ಯಾಣಾಧಿಕಾರಿ ಶಾಷು ಮೋದಿನ್ ಅವರು ಹೇಳಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ನಗರದ ಡಾ.ರಾಜ್ ಕುಮಾರ್ ರಸ್ತೆಯ ಸಾಂಸ್ಕೃತಿಕ ಸಮುಚ್ಚಯದ ನಾಡೋಜ ಸುಭದ್ರಮ್ಮ ಮಾನ್ಸೂರ್ ಬಯಲು ರಂಗಮಂದಿರದಲ್ಲಿ ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆಯಡಿ ಕಲಿಕಾ ತರಬೇತಿ ಪಡೆದ ವಿದ್ಯಾರ್ಥಿನಿಯರಿಂದ ಶನಿವಾರ ಹಮ್ಮಿಕೊಂಡಿದ್ದ ಜಾನಪದ ಸಂಗೀತ ಗಾಯನ ಮತ್ತು ಶಾಸ್ತ್ರೀಯ ನೃತ್ಯ ಪ್ರದರ್ಶನ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಕಲೆಯು ಒಂದು ಕಲ್ಪನೆಯಿಂದ ಉಗಮವಾಗುವಂತಹದ್ದು. ಯಾವ ಕಲೆ ಯಾರಲ್ಲಿ ಅಡಗಿರುತ್ತದೆ ಎಂಬುದು ತಿಳಿಯುವುದಿಲ್ಲ. ಆಂತರಿಕ ಜ್ಞಾನದಿಂದ ಮಾತ್ರ ತನ್ನಲ್ಲಿರುವ ಕಲೆ ಹೊರಹಾಕಲು ಸಾಧ್ಯವಾಗಲಿದೆ ಎಂದರು.

ಕಲೆಯು ಎಲ್ಲರಿಗೂ ಒಲಿಯುವುದಿಲ್ಲ. ಕಲಾವಿದರು ಶಿಸ್ತಿನಿಂದ ಕೂಡಿರುತ್ತಾರೆ. ಕಲೆಗೆ ಬೆಲೆ ಕಟ್ಟಲೂ ಸಾಧ್ಯವಿಲ್ಲ. ಕಲೆಯನ್ನು ಅಂತರ್ಗತ ಮಾಡಿಕೊಂಡಾಗ ಮಾತ್ರ ತಮ್ಮಲ್ಲಿರುವ ಕಲೆಯನ್ನು ಪ್ರಸ್ತುತಪಡಿಸಲು ಸಾಧ್ಯವಾಗಲಿದೆ ಎಂದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಬಿ.ನಾಗರಾಜ ಅವರು ಪ್ರಾಸ್ತಾವಿಕವಾಗಿ ಮಾತನಾಡಿ, ನಶಿಸಿಹೋಗುತ್ತಿರುವ ಕಲೆಗಳನ್ನು ಮುಂದಿನ ಪೀಳಿಗೆಗೆ ತಲುಪಿಸುವ ಕಾರ್ಯ ರಾಜ್ಯ ಸರ್ಕಾರ ಮಾಡುತ್ತಿದೆ. ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆಯಡಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಸತಿ ನಿಲಯದ ವಿದ್ಯಾರ್ಥಿನಿಯರಿಗೆ 6 ತಿಂಗಳು ಕಾಲ ಪ್ರತಿದಿನ 3 ತಾಸಿನಂತೆ ಜಾನಪದ ಸಂಗೀತ ಗಾಯನ ಮತ್ತು ಶಾಸ್ತ್ರೀಯ ನೃತ್ಯ ಪ್ರದರ್ಶನ ತರಬೇತಿ ನೀಡಲಾಗಿದೆ ಎಂದು ತಿಳಿಸಿದರು.

ನಿಲಯಪಾಲಕರಾದ ಉಷಾರಾಣಿ ಅವರು ಮಾತನಾಡಿ, ಇಂದಿನ ದಿನಗಳಲ್ಲಿ ಕಲೆ- ಸಂಸ್ಕೃತಿ ನಶಿಸುತ್ತಿದೆ. ಅದನ್ನು ವಿದ್ಯಾರ್ಥಿಗಳಲ್ಲಿ ಕಲಿಕಾ ತರಬೇತಿಯ ಮೂಲಕ ಹೊರಹಾಕುವ ಪ್ರಯತ್ನ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮೂಲಕ ಕಾರ್ಯವಾಗುತ್ತಿದೆ ಎಂದರು.

ಮನಸೂರೆಗೊಂಡ ಜಾನಪದ ಸಂಗೀತ ಗಾಯನ, ಶಾಸ್ತ್ರೀಯ ನೃತ್ಯ ಪ್ರದರ್ಶನ:

ಕಲಿಕಾ ತರಬೇತಿ ಪಡೆದ ಡಾ.ಬಿ.ಆರ್ ಅಂಬೇಡ್ಕರ್ ಸರ್ಕಾರಿ ಮೆಟ್ರಿಕ್ ಪೂರ್ವ ಬಾಲಕೀಯರ ವಸತಿ ನಿಲಯದ ವಿದ್ಯಾರ್ಥಿನಿಯರಿಂದ ಜಾನಪದ ಸಂಗೀತ ಗಾಯನ ಹಾಗೂ ಪರಿಶಿಷ್ಟವರ್ಗಗಳ ಕಲ್ಯಾಣ ಇಲಾಖೆಯ ಸರ್ಕಾರಿ ಮೆಟ್ರಿಕ್ ಪೂರ್ವ ಬಾಲಕಿಯರ ವಸತಿ ನಿಲಯದ ವಿದ್ಯಾರ್ಥಿನಿಯರಿಂದ ಶಾಸ್ತ್ರೀಯ ನೃತ್ಯ ಪ್ರದರ್ಶನ ನೋಡುಗ ಜನರ ಮನಸೂರೆಗೊಂಡು ಚಪ್ಪಾಳೆ ಗಿಟ್ಟಿಸಿಕೊಂಡರು.

ಈ ಸಂದರ್ಭದಲ್ಲಿ ತರಬೇತಿ ಗುರುಗಳಾದ ಜಾನಪದ ಗಾಯಕ ಎಸ್.ಎಂ ಹುಲುಗಪ್ಪ, ನೃತ್ಯ ಕಲಾವಿದರಾದ ಡಿ.ಇಂದ್ರಾಣಿ ಸೇರಿದಂತೆ ವಿವಿಧ ಸಂಘ-ಸಂಸ್ಥೆಗಳ ಪದಾಧಿಕಾರಿಗಳು, ವಿದ್ಯಾರ್ಥಿನಿಯರು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.

## ಮಾ 1 ರೇಣುಕಾಚಾರ್ಯ ಜಯಂತಿ ವೀರಶೈವ ಲಿಂಗಾಯತರ ಪೂರ್ವಭಾವಿ ಸಭೆ



• **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ::**

ವೀರಶೈವ ಲಿಂಗಾಯತ ಧರ್ಮ ಸ್ಥಾಪಕ ಜಗದ್ಗುರು ರೇಣುಕಾಚಾರ್ಯರ ಜಯಂತಿ ಮಾ.1ರಂದು ನಡೆಯಲಿದ್ದು. ಇದರ ಸಿದ್ಧತೆಗಾಗಿ ಪೂರ್ವಭಾವಿ ಸಭೆ ವೀರಶೈವ ಲಿಂಗಾಯತ ಸಮಾಜದಿಂದ ನಿನ್ನೆ ಸಂಜೆ ಇಲ್ಲಿನ ಬಸವೇಶ್ವರ ನಗರದ ಸಂಗಮೇಶ್ವರ ಸ್ವಾಮಿ ದೇವಸ್ಥಾನದಲ್ಲಿ ನಡೆಯಿತು.

ಸಮಿತಿಯ ಸಂಚಾಲಕ ಎಂ. ಚಂದ್ರಮೌಳಿ ಅವರ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ಪ್ರಚಾರ ಸಮಿತಿ, ಹಣಕಾಸು ಸಮಿತಿ, ರಚನೆ, ಕಾರ್ಯಕ್ರಮದ ನಿರೂಪಣೆಯನ್ನು ಈ ಬಾರಿ ಮಹಿಳೆಯರಿಂದಲೇ ನಡೆಸುವುದು, ಸಿದ್ದಾಂತ ಶಿಖಾಮಣಿ ಪಠಣೆ, ಸಿದ್ಧಾಂತ ಶಿಖಾಮಣಿ ಸ್ಪರ್ಧೆಯಲ್ಲಿ ಆಯ್ಕೆಯಾದ 9 ಶಾಲೆಗಳ 13 ವಿದ್ಯಾರ್ಥಿಗಳಿಗೆ ಸನ್ಮಾನ, ಸನಾತನ ಧರ್ಮ ಪ್ರಚಾರಕರು, ಸಮಾಜಕ್ಕೆ ಸೇವೆ ಮಾಡುವವರಿಗೆ ಸನ್ಮಾನಿಸಬೇಕೆಂದು ತೀರ್ಮಾನಿಸಲಾಯಿತು.

ನಗರದ ಮರಿಸ್ವಾಮಿ ಮಠ, ತಾಳೂರ್ ರಸ್ತೆ, ಕುವೆಂಪು ನಗರ, ಶ್ರೀಧರಗಡ್ಡೆ, ಬೆಳಗಲ್ಲು, ಮೋಕಾ ಇನ್ನಿತರಡೆ ಸಭೆ ನಡೆಸಿ ಸಮಾಜದವರನ್ನು ಆಮಂತ್ರಿಸುವುದು. ಶಾಲೆಗಳಿಗೆ ಶ್ರೀ ಜಗದ್ಗುರು ರೇಣುಕಾಚಾರ್ಯರ ಫೋಟೋಗಳನ್ನು ವಿತರಿಸುವುದು, ಪ್ರಸಾದ ವ್ಯವಸ್ಥೆ ಕುರಿತು ತೀರ್ಮಾನಿಸಲಾಯಿತು.

ವೀರಶೈವ ಲಿಂಗಾಯತ ಸಮಾಜದ ಸರ್ವ ಭಾಂಧವರಿಂದ ತನು ಮನ ಧನ ಅರ್ಪಿಸಿ ಕಾರ್ಯಕ್ರಮ ಯಶಸ್ವಿಗೆ ಮನವಿ ಮಾಡಲಾಯ್ತು. ಅನೇಕರು ಸಲಹೆ ಸೂಚನೆಗಳನ್ನು ನೀಡಿದರು.

## ಶಿರೂರಿನಲ್ಲಿ ಹಿಂದೂ ಸಮಾವೇಶ
# ಬೇಧ,ಭಾವ ಮರೆತು ಜಾಗೃತರಾಗಿ ಹಿಂದುತ್ವ ಉಳಿಸಿ



• **ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ:**

ಬೇಧ, ಭಾವ ಮರೆತು ಜಾಗೃತರಾಗಿ ಹಿಂದುತ್ವ ಉಳಿಸಲು ಪ್ರತಿಯೊಬ್ಬ ಭಾರತೀಯ ಸಂಕಲ್ಪ ಮಾಡಬೇಕಾದ ಅವಶ್ಯಕತೆಯಿದೆ. ಇದಕ್ಕೆ ಯುವ ಜನಾಂಗ ಸನ್ನದ್ಧರಾಗಬೇಕಿದೆ ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘದ ಉತ್ತರ ಕರ್ನಾಟಕ ಪ್ರಾಂತದ ಮುಖ್ಯ ವಕ್ತಾರ ಕಿರಣ್ ಗುಡ್ಡದಕೇರಿ ಹೇಳಿದರು.

ತಾಲೂಕಿನ ಶಿರೂರ ಪಟ್ಟಣದ ಸಿದ್ದೇಶ್ವರ ಪ್ರೌಢಶಾಲೆಯ ಮೈದಾನದಲ್ಲಿ ಭಾನುವಾರ ಜರುಗಿದ ಹಿಂದೂ ಸಮಾವೇಶದಲ್ಲಿ ಮಾತನಾಡಿದ ಅವರು, ಸನಾನತ ಪರಂಪರೆ ಹೊಂದಿರುವ ಭಾರತ ಇಡೀ ಜಗತ್ತಿಗೆ ಗುರುವಾಗುವ ಹಂತದಲ್ಲಿದೆ. ಇಂತಹ ಸನ್ನಿವೇಶದಲ್ಲಿ ಪ್ರತಿಯೊಬ್ಬ ಹಿಂದೂ ಎಲ್ಲ ಬೇಧ, ಭಾವಗಳನ್ನು ಮರೆತು ನಾನೊಬ್ಬ ಹಿಂದೂ ಎಂಬುದನ್ನು ಅರಿತು ಬಲಿಷ್ಠ ರಾಷ್ಟ್ರ ಕಟ್ಟುವ ಕೆಲಸ ಮಾಡಬೇಕು ಎಂದರು.

ಹಿಂದುತ್ವ ಉಳಿಸುವ ಜವಾಬ್ದಾರಿ ಪ್ರತಿಯೊಬ್ಬರ ಮೇಲಿದ್ದು, ರಾಷ್ಟ್ರೀಯ ಸ್ವ–ಯಂ ಸೇವಕ ಸಂಘ ಈ ದಿಸೆಯಲ್ಲಿ ಯುವ ಸಮೂಹಕ್ಕೆ ದೇಶ ಹಾಗೂ ಸಂಸ್ಕೃತಿಯ ಕುರಿತು ಜಾಗೃತಿ ಮೂಡಿಸುವ ಕಾರ್ಯ ನಡೆಸುತ್ತಲೇ ಬಂದಿದ್ದು ಇದಕ್ಕೆ ಕೈಜೋಡಿಸಿ ಹಿಂದೂ ರಾಷ್ಟ್ರವನ್ನು ಇನ್ನಷ್ಟು ಬಲಿಷ್ಠಗೊಳಿಸಬೇಕಿದೆ ಎಂದ ಗುಡ್ಡದಕೇರಿ, ಆರ್.ಎಸ್.ಎಸ್.ಗೆ 100 ವರ್ಷ ತುಂಬಿದ ಪ್ರಯುಕ್ತ ಉತ್ತರ ಕರ್ನಾಟಕದ 1100 ಕಡೆಗಳಲ್ಲಿ ಹಿಂದೂ ಸಮಾವೇಶ ನಡೆಸುತ್ತಿದೆ ಎಂದು ಹೇಳಿದರು.

ಸಾನಿಧ್ಯವಹಿಸಿದ್ದ ಸ್ಥಳೀಯ ಶಿವಯೋಗಾಶ್ರಮದ ಅಭಿನವ ಶಿದ್ಧಲಿಂಗ ಸ್ವಾಮೀಜಿ ಮಾತನಾಡಿ, ರಾಷ್ಟ್ರೀಯ ಸ್ವಯಂ ಸೇವಕ ಸಂಘದ ರಾಷ್ಟ್ರ ರಕ್ಷಣೆಯ ಕಾರ್ಯ ಹೆಮ್ಮೆಪಡುವಂತಹದ್ದಾಗಿದ್ದು, ಯುವಕರು ದೇಶದ ಬಗ್ಗೆ ಅಭಿಮಾನ ಹೊಂದಿ ನೆಲ, ಜಲ, ಸಂಸ್ಕೃತಿ, ಪರಂಪರೆ ಉಳಿಸುವ ನಿಟ್ಟಿನಲ್ಲಿ ಕಾರ್ಯೋನ್ಮುಖರಾಗಬೇಕು ಎಂದರು.

ಅಧ್ಯಕ್ಷತೆ ವಹಿಸಿದ್ದ ಯಂಕಣ್ಣ ಸಿಂಪಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಸಮಾಜ ಸೇವಕಿ ಗುರಮ್ಮ ಸಂಕಿನ, ನಿವೃತ್ತ ಯೋಧ ಶ್ರೀಶೈಲ ಹಿರೇಕುಂಬಿ ಅತಿಥಿಗಳಾಗಿದ್ದರು. ಎಂ.ಎಸ್.ಕಲಗುಡಿ ಹಾಗೂ ವಾದಿರಾಜ ಕಡಿವಾಲ ನಿರೂಪಿಸಿದರು. ಸಂಜಯ ನಡುವಿನಮನಿ ವಂದಿಸಿದರು.

ಬಾಕ್ಸ್....

ಸಮಾವೇಶಕ್ಕೂ ಮೊದಲು ಶಿರೂರ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಭಾರತ ಮಾತೆಯ ಭಾವಚಿತ್ರದ ಭವ್ಯ ಮೆರವಣಿಗೆ ಜರುಗಿತು. ದುರ್ಗದ ಬಯಲಿನಿಂದ ಹೊರಟ ಶೋಭಾ ಯಾತ್ರೆಗೆ ಡೊಳ್ಳು ಮೇಳ, ಹೂವಿನ ನೃತ್ಯ, ಭಜನೆ, ಹಲಗೆ ಮೇಳ, ಮಹಾನ್ ನಾಯಕರ ವೇಷ ಧರಿಸಿದ ಮಕ್ಕಳು ಹಾಗೂ ಕುಂಭ ಹೊತ್ತ ಮಹಿಳೆಯರು ಸಾಥ್ ನೀಡಿ ಗಮನ ಸೆಳೆದರು. ಸಿದ್ದೇಶ್ವರ ಪ್ರೌಢಶಾಲೆಯವರೆಗೂ ಶೋಭಾಯಾತ್ರೆ ನಡೆಯಿತು.

# ಸಂಭ್ರಮದ ಹುಚ್ಚೇಶ್ವರ ಮಹಾರಥೋತ್ಸವ

• **ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ:**

ಜಿಲ್ಲೆಯ ಹುನಗುಂದ ತಾಲೂಕಿನ ಕಮತಗಿ ಪಟ್ಟಣದ ಹೊಳೆ ಹುಚ್ಚೇಶ್ವರ ಸಂಸ್ಥಾನಮಠದ ಹೊಳೆ ಹುಚ್ಚೇಶ್ವರ ಮಹಾರಥೋತ್ಸವ ಶನಿವಾರ ಸಂಭ್ರಮದಿಂದ ಜರುಗಿತು.

ಬಂಗಾರದ ಕಳಶವುಳ್ಳ ರಥೋತ್ಸವಕ್ಕೆ

ಹರಗುರು ಚರಮೂರ್ತಿಗಳು ಚಾಲನೆ ನೀಡಿದ ನಂತರ ಅಪಾರ ಭಕ್ತ ಸಮೂಹ ತೇರನ್ನು ಎಳೆದು ಕೃತಾರ್ಥರಾದರು. ರಥಬೀದಿಯಲ್ಲಿ ತೇರು ಸಾಗಿ ಬರುತ್ತಿದ್ದಂತೆ ನೆರೆದ ಅಪಾರ ಜನಸ್ತೋಮ ಹಣ್ಣು, ಹೂವು, ಉತ್ತತ್ತಿ ಎಸೆದು ಭಕ್ತಿಯನ್ನು ಸಮರ್ಪಿಸಿದರು.

ಗಂಗಾವತಿ ಕಲ್ಮಠದ ಡಾ.ಕೊಟ್ಟೂರ ಸ್ವಾಮೀಜಿ, ಉಪ್ಪಿನ ಬೆಟಗೇರಿಯ ಕುಮಾರ ವಿರೂಪಾಕ್ಷ ಸ್ವಾಮೀಜಿ, ಮುನವಳ್ಳಿಯ ಮುರುಘೇಂದ್ರ ಸ್ವಾಮೀಜಿ,

ಗುಳೇದಗುಡ್ಡದ ಕಾಶೀನಾಥ



ಸ್ವಾಮೀಜಿ. ಕಮತಗಿ ಹೊಳೆ ಹುಚ್ಚೇಶ್ವರ ಸ್ವಾಮೀಜಿ, ಅಗಡಿಯ ಗುರುಲಿಂಗ ಸ್ವಾಮೀಜಿ,

ಕಮತಗಿ ಶಿವಕುಮಾರ ಸ್ವಾಮೀಜಿ, ಕಮತಗಿಯ ಮಾತೋಶ್ರೀ

ಬಸವಣ್ಣೆಮ್ಮತಾಯಿ ಬಸರ–

ಕೋಡ ಸೇರಿ ಅನೇಕ ರಥೋತ್ಸವ ಸಂದರ್ಭದಲ್ಲಿ ಉಪಸ್ಥಿತರಿದ್ದರು.

# ಮಠಕ್ಕೆ ರಾಜಕಾರಣಿಗಳಾಗಿ ಬರಬೇಡಿ, ಭಕ್ತರಾಗಿ ಬನ್ನಿ




• **ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ:**

ಸಮಾಜವನ್ನೇ ಕುಟುಂಬವನ್ನಾಗಿ ಮಾಡಿಕೊಂಡು ಶ್ರಮಿಸುವ ಕೆಲಸವನ್ನು ಮಠಾಧಿಪತಿಗಳು ಮಾಡಬೇಕಿದ್ದು, ನಮ್ಮ ಶ್ರೀಮಠಕ್ಕೆ ಬರುವಾಗ ಭಕ್ತರು ರಾಜಕೀಯ ವ್ಯಕ್ತಿಗಳಾಗದೇ ಕೇವಲ ಭಕ್ತರಾಗಿ ಬನ್ನಿ ಎಂದು ನಗರದ ಟೀಕಿನಮಠದ ನೂತನ ಪಟ್ಟಾಧಿಕಾರಿ ಶ್ರೀ ರೇವಣಸಿದ್ದ ಸ್ವಾಮಿಗಳು ಹೇಳಿದರು.

ನಗರದ ಟೀಕಿನಮಠದ ಮಲ್ಲಿಕಾರ್ಜುನ ದೇಶಿಕರ ನಿರಂಜನ ಚರಪಟ್ಟಾಧಿಕಾರ ಮಹೋತ್ಸವ ನಿಮಿತ್ಯ ಚರಂತಿಮಠದ ಆವರಣದಲ್ಲಿ ರವಿವಾರ ಹಮ್ಮಿಕೊಂಡಿದ್ದ ಶೂನ್ಯಪೀಠಾರೋಹಣ ಕಾರ್ಯಕ್ರಮದಲ್ಲಿ ವಿರಕ್ತಮಠದ ಶ್ರೀ ಜಡೆಯ ಶಾಂತಲಿಂಗೇಶ್ವರ ಲಿಂಗಹಸ್ತದಿಂದ ಚಿರಪಟ್ಟಾಧಿಕಾರ ಪಡೆದು ಶೂನ್ಯಪೀಠಾರೋಹಣ ಮಾಡಿ ಶ್ರೀಗಳು ಮಾತನಾಡಿದರು.

ಗುರುವಿಗಾಗಿ ತಾವು ಮಾಡಿದ ಶ್ರಮ ಸ್ಮರಣಾದಾಯಕವಾಗಿದೆ. ತಮ್ಮ ಮುಡಿಗೆ ಹೂ ತರುವೇ, ಹುಲ್ಲನೆಂದು ತರಲಾರೆ. ಸಮಾಜದ ಮಗುವಾಗಿ ತಮ್ಮ ಮಧ್ಯೆ ಇದ್ದು ಸಾಮಾಜವನ್ನು ಕುಟುಂಬವಾಗಿಸಿ ಶ್ರಮಿಸುವ ಕೆಲಸವನ್ನು ಮಾಡುತ್ತೇನೆ. ಕಾವಿ ಜೀವನಕ್ಕೆ ಶಕ್ತಿಯಾದ ಕುಮಾರ ಸ್ವಾಮಿಗಳು, ಬಸವಣ್ಣ, ನಿಜಗುಣ ಸ್ವಾಮಿಗಳ ಮಾರ್ಗದಲ್ಲಿ ನಡೆದು ಟೀಕಿನಮಠ ಟೆಂಗಿನಮಠದ ಪರಂಪರೆಯನ್ನು ಮುನ್ನಡಿಸುವ ಜವಾಬ್ದಾರಿ ಹೊರುತ್ತೇನೆ ಎಂದರು.

ಪೀಠಾಧಿಪತಿ ಎಂದರೆ ವಿಷ ಕುಡಿದ ನಂಜಿನ ಜೀವನ ಇದ್ದಂತೆ. ಸರ್ವರನ್ನೂ ಸಮಾನರನ್ನಾಗಿಸಿಕೊಂಡು ಹೋಗುವ ಹೊಣೆ ಮಠಗಳಿಗಿದ್ದು ಮಠಕ್ಕೆ ಬರುವಾಗ ಎಲ್ಲರೂ ಭಕ್ತರಾಗಿ ಬನ್ನಿ ಯಾರೂ ರಾಜಕೀಯವನ್ನು ತೆಗೆದುಕೊಂಡು ಬರಬೇಡಿ ಎಂದು ಶ್ರೀಗಳು ಹೇಳಿದರು.

ಪಟ್ಟಾಧಿಕಾರ ಸಮಿತಿಯ ಗೌರವಾಧ್ಯಕ್ಷ ಚರಂತಿಮಠದ ಪ್ರಭುಸ್ವಾಮಿಗಳು ಮಾತನಾಡಿ, ಗುರು ತನ್ನ ಶಕ್ತಿ ಮತ್ತು ಸ್ಥಾನವನ್ನು ಶಿಷ್ಯನಿಗೆ ನೀಡುವುದರ ಮೂಲಕ ಶಿಷ್ಯನನ್ನು ಗುರುವಾಗಿಸುವುದು ಶೂನ್ಯಪೀಠಾರೋಹಣ ಆಗಿದೆ. ಎಲ್ಲವೂ ಇದ್ದು ಎಲ್ಲವನ್ನು ಸಮಾಜಕ್ಕೆ ಅರ್ಪಣೆ ಮಾಡಿ ಶೂನ್ಯಭಾವದಿಂದ ದೇವರಿಗೆ ಶರಣಾಗುವುದು ಶೂನ್ಯಪೀಠದ ಉದ್ದೇಶವಾಗಿದ್ದು ಗುರುವನ್ನು ಮುಟ್ಟಿ ಶಿಷ್ಯರಾಗುತ್ತಾರೆ. ಇಲ್ಲಿ ದೊಡ್ಡವರು ಚಿಕ್ಕವರು ಎಂಬ ಭೇದವಿಲ್ಲದೆ ಶರಣರೆಲ್ಲರು ಸಮಾನರಾಗುತ್ತಾರೆ. ಪಟ್ಟಾಧಿಕಾರದ ಬಳಿಕ ಈಗ ಮಲ್ಲಿಕಾರ್ಜುನ ದೇಶಿಕರು ಮಲ್ಲಿಕಾರ್ಜುನ ಸ್ವಾಮಿಗಳು ಗುರು ಶ್ರೀ ರೇವಣಸಿದ್ದ ಸ್ವಾಮಿಗಳಾಗಿ ಮರುನಾಮಕರಣದಿಂದ ಸಮಾಜಕ್ಕಾಗಿ ಶ್ರಮಿಸಲಿದ್ದಾರೆ ಎಂದರು.

ಚಿತ್ರದುರ್ಗ ಸಂಸದ ಗೋವಿಂದ ಕಾರಜೋಳ ಮಾತನಾಡಿ, ಟೆಂಗಿನಮಠ ಸಂಪ್ರದಾಯದಿಂದ ಕೂಡಿದ ಮಠವಾಗಿದೆ. ಬ್ರಹ್ಮಜ್ಞಾನಕ್ಕಾಗಿ ಆಶ್ರಮ, ಗುರುಕುಲಗಳು ಹುಟ್ಟಿಕೊಂಡವು. 19 ಮತ್ತು 20 ನೇ ಶತಮಾನದ ಪೂರ್ವ ಮಠಾಧೀಶರು ಮಾಡಿದ ಕೆಲಸವನ್ನು ಇಡೀ ಮಾನವ ಕುಲ ಮರೆಯಲು ಸಾಧ್ಯವಿಲ್ಲ. ಬಸವೇಶ್ವರ ವೀರಶೈವ ವಿದ್ಯಾವರ್ಧಕ ಸಂಘದ ಏಳಿಗೆಯನ್ನು, ಬೀಳೂರು ಅಜ್ಜನ ಆಶಯವನ್ನು ವೀರಣ್ಣ ಚರಂತಿಮಠ ಈಡೇರಿಸುತ್ತಿದ್ದಾರೆ ಎಂದರು.

ಚರಪಟ್ಟಾಧಿಕಾರ ಸಮಿತಿ ಕಾರ್ಯಾದ್ಯಕ್ಷ ಡಾ.ವೀರಣ್ಣ ಚರಂತಿಮಠ ಮಲ್ಲಿಕಾರ್ಜುನ ದೇಶಿಕರ ನಿರಂಜನ ಚರಪಟ್ಟಾಧಿಕಾರದ ಸಂಪುಟ ಪತ್ರ ನೀಡಿ ಮಠದ ಜವಾಬ್ದಾರಿಯನ್ನು ನೀಡಿದರು.

ವೇದಿಕೆ ಮೇಲೆ ಹುಬ್ಬಳ್ಳಿಯ ಎರಡೆತ್ತಿನಮಠದ ಸಿದ್ಧಲಿಂಗ ಸ್ವಾಮಿಗಳು, ಹುಬ್ಬಳ್ಳಿಯ ರುದ್ರಾಕ್ಷಿಮಠದ ಬಸವಲಿಂಗ ಸ್ವಾಮಿಗಳು, ಗುಳೇದಗುಡ್ಡ ಮುರಾಘಾಮಠದ ಕಾಶೀನಾಥ ಸ್ವಾಮಿಗಳು, ನವಲಗುಂದ ಗವಿಮಠದ ಬಸವಲಿಂಗ ಸ್ವಾಮಿಗಳು, ಗುಳೇದಗುಡ್ಡ ಬೃಹನ್ಮಠದ ಗುರುಸಿದ್ಧ ಪಟ್ಟದಾರ್ಯ, ಗುರಗುಂಟಾ ಸದಾನಂದ ಶಿವಾಚಾರ್ಯ, ಗುಳೇದಗುಡ್ಡ ಒಪ್ಪತ್ತೇಶ್ವರ ಸ್ವಾಮಿಜಿ, ಬೀಳಗಿ ಕಲ್ಮಠದ ಗುರುಪಾದ ಶಿವಾಚಾರ್ಯ ದೇವರು, ಬೆಳಗಾವಿ ಕಾರಂಜಿಮಠದ ಶಿವಯೋಗಿ ದೇವರು, ಗುಣದಾಳದ ಡಾ. ವಿವೇಕಾನಂದ ದೇವರು, ಲೋಕಾಪುರದ ಚಂದ್ರಶೇಖರ ಸ್ವಾಮಿಗಳು, ಅನವಾಲದ ಕೈಲಾಸಪತಿ ಸ್ವಾಮಿಗಳು, ಅಖಿಲ ಭಾರತ ವೀರಶೈವ ಮಹಾಸಭಾದ ಜಿಲ್ಲಾಧ್ಯಕ್ಷ ಜಿ.ಎನ್.ಪಾಟೀಲ, ಬಿವಿವಿ ಸಂಘದ ಗೌರವ ಕಾರ್ಯದರ್ಶಿ ಮಹೇಶ ಎನ್.ಅಥಣಿ, ಅಶೋಕ ಎಮ್.ಸಜ್ಜನ. ಡಾ,ಬಸವರಜಾ ಕೆರೂಡಿ, ಅನಸೂಯಾ ಕೆರೂಡಿ, ಸೇರಿದಂತೆ ಟೀಕಿನಮಠ ಭಕ್ತ ಮಂಡಳಿಯವರು ಇದ್ದರು.

ಬೆಳಗಿನ ಜಾವ ಟೀಕಿನಮಠದಲ್ಲಿ ವಿವಿಧ ಪೂಜ್ಯರ ಸಮ್ಮುಖದಲಿ ಉತ್ತರಾಧಿಕಾರಿಯಾದ ಮಲ್ಲಿಕಾರ್ಜುನ ಪೂಜ್ಯರಿಗೆ ನಿಂಬಾಳ ಹಾಗೂ ಬೆಂಗಳೂರಿನ ಸಮಾಧಾನ ಆಶ್ರಮದ ಪೂಜ್ಯರಾದ ಮೌನಯೋಗಿ ಜಡೆ–ಯ ಶಾಂತಲಿಂಗ ಮಹಾಸ್ವಾಮಿಗಳ ಅಮೃತ ಹಸ್ತದಿಂದ ಷಟಸ್ಥಳ ಬ್ರಹ್ಮೋಪದೇಶವನ್ನು ಶಾಸ್ತ್ರೋಕ್ತವಾಗಿ ನೆರವೇರಿಸಿದರು,

ಅಡ್ಡಪಲ್ಲಕ್ಕಿ ಮಹೋತ್ಸವ: ಬೀಳೂರ ಅಜ್ಜನ ಗುಡಿಯಿಂದ ಪ್ರಾರಂಭವಾದ ಟೀಕಿನಮಠದ ಪೂಜ್ಯರಾದ ಮಲ್ಲಿಕಾರ್ಜುನ ಸ್ವಾಮಿಗಳು ಗುರು ರೇವಣಸಿದ್ದ ಸ್ವಾಮಿಗಳ ಅಡ್ಡಪಲ್ಲಕ್ಕಿ ಉತ್ಸವ ಪ್ರಾರಂಭವಾಗಿ ಬಸವೇಶ್ವರ ವೃತ್ತ, ಮಹಾತ್ಮಾ ಗಾಂದಿ ರಸ್ತೆ, ಪೊಲೀಸ್ ಚೌಕಿ, ಅಡತ ಬಜಾರ, ಮೂಲಕ ಟೀಕಿನಮಠಕ್ಕೆ ಸಮಾರೋಪಗೊಂಡಿತು, ಮಹಿಳೆಯರ 1008 ಕುಂಭ ಮೇಳ ಗಮನಸೆಳೆಯಿತು. ವಿವಿಧ ಸಾಂಸ್ಕೃತಿಕ ತಂಡಗಳು ಭಾಗವಹಿಸಿದ್ದವು.

# ಉಪ ಚುನಾವಣೆ : ಚುನಾವಣಾ ವೆಚ್ಚದ ಕರಡು ದರಪಟ್ಟಿ ಪ್ರಕಟ



• **ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ:**

ಬಾಗಲಕೋಟೆ ವಿಧಾನ ಸಭಾ ಮತಕ್ಷೇತ್ರದ ಉಪ ಚುನಾವಣೆಗೆ ಸಂಬಂಧಿದಂತೆ ಚುನಾವಣೆಯಲ್ಲಿ ಸ್ಪರ್ಧಿಸುವ ಅಭ್ಯರ್ಥಿಗಳ ಖರ್ಚು ವೆಚ್ಚಗಳ ಕರಡು ದರಪಟ್ಟಿ ಪ್ರಕಟಿಸುವ ಕುರಿತು ಜಿಲ್ಲಾಧಿಕಾರಿಗಳು ಆಗಿರುವ ಜಿಲ್ಲಾ ಚುನಾವಣಾಧಿಕಾರಿ ಸಂಗಪ್ಪ ಅವರ ಅಧ್ಯಕ್ಷತೆಯಲ್ಲಿ ಸೋಮವಾರ ವಿವಿಧ ರಾಜಕೀಯ ಮುಖಂಡರುಗಳ ಸಭೆ ಜರುಗಿತು.

ಮುಂಬರುವ ಉಪಚುನಾವಣೆ ಹಿನ್ನಲೆಯಲ್ಲಿ ಚುನಾವಣಾ ವೆಚ್ಚಗಳ ಕರಡು ದರಪಟ್ಟಿಯನ್ನು ಪ್ರಕಟಿಸಲಾಗಿದ್ದು, ದರಪಟ್ಟಿಯ ಬಗ್ಗೆ ಆಕ್ಷೇಪಣೆಗಳು ಇದ್ದಲ್ಲಿ ಒಂದು ವಾರದೊಳಗೆ ತಕರಾರು ಸಲ್ಲಿಸಬಹುದಾಗಿದೆ. ಫೆಬ್ರವರಿ 14 ರಂದು ಬಾಗಲಕೋಟೆ ವಿಧಾನಸಭೆ ಮತಕ್ಷೇತ್ರಕ್ಕೆ ಸಂಬಂಧಿಸಿದ ಅಂತಿಮ ಮತದಾರರ ಪಟ್ಟಿಯನ್ನು ಪ್ರಕಟಿಸಲಾಗುತ್ತಿದ್ದು, ಅಂದು ಎಲ್ಲ ರಾಜಕೀಯ ಪಕ್ಷದ ಮುಖಂಡರು ಹಾಜರಾಗಿ ಮತದಾರರ ಪಟ್ಟಿಗಳನ್ನು ಪಡೆದುಕೊಳ್ಳುವಂತೆ ಕೋರಿದರು.

ಸಭೆಯಲ್ಲಿ ಉಪ ವಿಭಾಗಾಧಿಕಾರಿ ಸಂತೋಷ ಜಗಲಾಸರ, ತಹಶೀಲ್ದಾರ ವಾಸುದೇವ ಸ್ವಾಮಿ, ಚುನಾವಣಾ ವಿಭಾಗದ ಮಹೇಶ ಪಾಂಡವ ಸೇರಿದಂತೆ ವಿವಿಧ ರಾಜಕೀಯ ಪಕ್ಷಗಳ ಪ್ರತಿನಿಧಿಗಳಾದ ಶ್ರೀನಿವಾಸ ಬಳ್ಳಾರಿ, ನಾಗರಾಜ ಹದ್ಲಿ, ರಾಜು ಮನ್ನಿಕೇರಿ, ಶ್ರೀಧರ ನೀಲನಾಯಕ, ಪ್ರಭು ಹಳ್ಳೂರ, ಕೃಷ್ಣಾ ಪಾಟೀಲ, ಪ್ರಭುರಾಜ ಪಾಟೀಲ, ಯಮನಪ್ಪ ಶಿರೂರ, ಬಸವರಾಜ ಹುನಗುಂದ, ಶ್ರೀಧರ ನಾಗರಬೆಟ್ಟ ಸೇರಿದಂತೆ ಇತರರು ಉಪಸ್ಥಿತರಿದ್ದರು.

# ಜೀತ ಕಾರ್ಮಿಕ ಪದ್ಧತಿ ನಿರ್ಮೂಲನಾ ಕಾಯ್ದೆಗೆ 50 ವರ್ಷ: ಅಮರೇಶ್ ಜಿ ಕೆ



• **ಮಲ್ಲಮ್ಮ ನುಡಿ ವಾರ್ತೆ ಕೊಟ್ಟೂರು :**

ಕೊಟ್ಟೂರು ತಾಲೂಕು ಕಛೇ–ರಿಯ ಮಹಾತ್ಮ ಗಾಂಧೀಜಿ ಸಭಾಂಗಣದಲ್ಲಿ ಕೂಡ್ಲಿಗಿ ತಾಲೂಕು ಕಾನೂನು ಸೇವೆಗಳ ಸಮಿತಿ, ತಾಲೂಕು ವಕೀಲರ ಸಂಘ ಹಾಗೂ ತಾಲೂಕು ಆಡಳಿತ, ತಾಲೂಕು ಪಂಚಾಯಿತಿ, ಪಟ್ಟಣ ಪಂಚಾಯಿತಿ, ಪೊಲೀಸ್ ಇಲಾಖೆ ಹಾಗೂ ಕಾರ್ಮಿಕ ಇಲಾಖೆ ಕೊಟ್ಟೂರು ಇವರ ಸಹಯೋಗದಲ್ಲಿ "ಜೀತ ಕಾರ್ಮಿಕ ಪದ್ಧತಿ ನಿರ್ಮೂಲನಾ ದಿನಾಚರಣೆ"ಯನ್ನು ಆಚರಿಸಲಾಯಿತು.

ತಾಲೂಕು ವಕೀಲರ ಸಂಘದ ಅಧ್ಯಕ್ಷರಾದ ಜಿ.ಹೊನ್ನೂರಪ್ಪ ಇವರು ಸಸಿಗೆ ನೀರೆಯುವ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಕಾನೂನಿನ ಅರಿವು ಪ್ರತಿಯೊಬ್ಬರಿಗೂ ಇರಬೇಕಾಗಿರುತ್ತದೆ. ಸಾಮಾನ್ಯ ಜನರಿಗೆ ಕಾನೂನಿನ ಅರಿವು ಮೂಡಿಸುವುದರ ಜೊತೆಗೆ ಕಾನೂನಿನ ನೆರವು ನೀಡುವುದು ಈ ಕಾರ್ಯಕ್ರಮದ ಉದ್ದೇಶವಾಗಿದೆ. ಆರ್ಥಿಕವಾಗಿ ದುರ್ಬಲರಾದವರಿಗೆ 1.5 ಲಕ್ಷದ ವರೆಗೆ ಉಚಿತ ಕಾನೂನು ನೆರವು ನೀಡಲಾಗುತ್ತದೆ. ಈ ಹಿನ್ನೆಲೆಯಲ್ಲಿ ವಿವಿಧ ಇಲಾಖೆಗಳ ಸಹಭಾಗಿತ್ವದಲ್ಲಿ ಇಂತಹ ಕಾರ್ಯಕ್ರಮವನ್ನು ತಾಲೂಕು ಕಾನೂನು ಸೇವೆಗಳ ಸಮಿತಿಯ ಮೂಲಕ ಮಾಡಲಾಗುತ್ತಿದ್ದು, ಸಾರ್ವಜನಿಕರು ಇದರ ಸದುಪಯೋಗ ಪಡಿಸಿಕೊಳ್ಳಬೇಕು ಎಂದರು.

ಅಧ್ಯಕ್ಷತೆಯನ್ನು ವಹಿಸಿದ್ದ ತಹಶೀಲ್ದಾರರಾದ ಅಮರೇಶ್.ಜಿ.ಕೆ ಇವರು ಜೀತ ಕಾರ್ಮಿಕ ಪದ್ಧತಿ ಅಮಾನ್ಯವೀಯ ಪದ್ಧತಿಯಾಗಿ–ತ್ತು. ಇದನ್ನು ಕೊನೆಗಾಣಿಸುವ ಉದ್ದೇಶದಿಂದ 1976 ರಂದು ಈ ಕಾಯ್ದೆ ಜಾರಿಗೆಬಂದಿದ್ದು, ಪ್ರತಿವರ್ಷ ಫೆಬ್ರವರಿ–9 ನ್ನು ಜೀತ ಕಾರ್ಮಿಕ ಪದ್ಧತಿ ನಿರ್ಮೂಲನಾ ದಿನವನ್ನಾಗಿ ಆಚರಿಸಲಾಗುತ್ತದೆ. ಈ ಕಾನೂನು ಬಂದು ಇಂದಿಗೆ 50 ವರ್ಷಗಳಾಗಿದೆ. ಮೂಲಭೂತ ಸೌಲಭ್ಯವನ್ನು ನೀಡದೇ, ಅಮಾನವೀಯವಾಗಿ ದುಡಿಸಿಕೊಳ್ಳುವುದು ಕಾನೂನು ಬಾಹಿರವಾಗಿದೆ. ಈ ಕಾನೂನು ಶೋಷಣೆಯಿಂದ ರಕ್ಷಿಸುವುದಾಗಿದ್ದು, ಇಂತಹ ಪ್ರಕರಣಗಳು ಕಂಡುಬಂದರೆ ಪೊಲೀಸ್ ಇಲಾಖೆಗೆ, ಕಂದಾಯ ಇಲಾಖೆಗೆ ಅಥವಾ ಕಾನೂನು ಸೇವಾ ಸಮಿತಿಗೆ ಮಾಹಿತಿ ನೀಡಿ ಪರಿಹಾರ ಕಂಡುಕೊಳ್ಳಬಹುದಾಗಿದೆ ಎಂದರು.

ಡಿ ಕರಿಬಸವರಾಜ ಪ್ಯಾನಲ್ ವಕೀಲರು ಜೀತಪದ್ಧತಿಗೆ ಮುಖ್ಯವಾದ ಕಾರಣ ಬಡತನ ಮತ್ತು ಅನಕ್ಷರತೆ. ಇದರ ಸದುಪಯೋಗ ಪಡೆದ ಭೂಮಾಲೀಕರು ಬೃಣಟಿಜಜ– ಜುಟಿಜಜ ಊಟ–ಬಟ್ಟೆ ನೀಡಿ ಕಡಿಮೆ ವೇತನದಲ್ಲಿ ಜೀವನ ಪೂರ್ತಿ ದುಡಿಸಿಕೊಳ್ಳುತ್ತಿದ್ದರು. ಈ ರೀತಿಯಾಗಿ ಜೀತ ಮಾಡಿಸಿಕೊಳ್ಳುತ್ತಿದ್ದ ವ್ಯಕ್ತಿಗಳಿಗೆ 1976ರಲ್ಲಿ ಕಾನೂಣು ಜಾರಿಗೆ ತಂದೆ ಜೀತ ಮುಕ್ತಗೊಳಿಸಲಾಗಿದೆ. ಜೀತ ಮಾಡಿಸಿಕೊಳ್ಳುವ ವ್ಯಕ್ತಿಗಳಿಗೆ 3 ವರ್ಷ ಜೈಲು ಹಾಗೂ 20 ಸಾವಿರ ದಂಡ ವಿಧಿಸಲಾಗುವುದು ಎಂದು ಜೀತ ಪದ್ಧತಿ ನಿರ್ಮೂಲನಾ ಕಾಯ್ದೆಯ ಬಗ್ಗೆ ವಿಶೇಷ ಉಪನ್ಯಾಸ ನೀಡುತ್ತ ನೀಡಿದರು. ತಾಲೂಕು ವಕೀಲರ ಸಂಘದ ಪ್ರಧಾನ ಕಾರ್ಯದರ್ಶಿಯಾದ ಸಿ ವಿಪಾಕ್ಷಪ್ಪ ಇವರು ಮಾತನಾಡಿದರು.

ಕಾರ್ಯಕ್ರಮದಲ್ಲಿ ವಕೀಲರ ಸಂಘದ ಉಪಾಧ್ಯಕ್ಷರಾದ ಟಿ ಮಲ್ಲಿಕಾರ್ಜುನ, ಜಂಟಿ ಕಾರ್ಯದರ್ಶಿ ಡಿ ಹೆಚ್ ದುರುಗೇಶ, ಕಾರ್ಮಿಕ ನಿರೀಕ್ಷಕ ಗಂಗಾಧರ, ಎಎ ನಾಗಪ್ಪ, ಪ ಪಂ ಕಿರಿಯ ಆಹಾರ ನೀರೀಕ್ಷಕರಾದ ಹೆಚ್ ಕೆ ಗೀತಾ, ಶಿಕ್ಷಣ ಇಲಾಖೆಯ ಇಸಿಓ ನಿಂಗಪ್ಪ, ಕಂದಾಯ ನಿರೀಕ್ಷಕ ಡಿ ಶಿವಕುಮಾರ್, ಕಾರ್ಮಿಕ ಇಲಾಖೆಯ ಸಿಬ್ಬಂದಿ ಹಾಜರಿದ್ದರು.

ಈಶ್ವರ್ ಪ್ರಾರ್ಥಿಸಿದರೆ, ಸ್ವಾಗತವನ್ನು ಬಸವರಾಜ ಕೆ ವಲೀಲರು ನೆರವೇರಿಸಿದರು. ಸಿ ಮ ಗುರುಬಸವರಾಜ ಕಾರ್ಯಕ್ರಮ ನಿರೂಪಿಸಿದರು.

ಕಾರ್ಯಕ್ರಮದಲ್ಲಿ ಕಾರ್ಮಿಕ ಇಲಾಖೆಯಿಂದ ಅಪಘಾತ ಪರಿಹಾರ ಸೌಲಭ್ಯ ನೀರುವ ಸ್ಮಾರ್ಟ್ ಕಾರ್ಡಗಳನ್ನು ವಿತರಿಸಿದರು. ತಹಶೀಲ್ದಾರರು ಎಲ್ಲರಿಂದ "ಪ್ರತಿಜ್ಞಾ ವಿಧಿ" ಪ್ರಮಾಣವನ್ನು ಮಾಡಿಸಿದರು.

# ಪಂಪ್ ಸೆಟ್ ಗಳಿಗೆ ಹಗಲು ವಿದ್ಯುತ್ ಸರಬರಾಜು ನೀಡಬೇಕೆಂದು ರೈತರು ಆಗ್ರಹ



• **ಮಲ್ಲಮ್ಮ ನುಡಿ ವಾರ್ತೆ ವಿಜಯನಗರ :**

ಜಿಲ್ಲೆ ಕೊಟ್ಟೂರು ತಾಲೂಕಿನ ಜಾಗಟಗೇರಿ ಗ್ರಾಮದ ಕೃಷಿ ಕಾರ್ಮಿಕರು ನಮ್ಮ ಜಮೀನಗಳಿಗೆ ಹಗಲು ಸಮಯದಲ್ಲಿ ವಿದ್ಯುತ್ ಸರಬರಾಜು ನೀಡಬೇಕೆಂದು.

ಜೆಸ್ಕಾಂ ಅಧಿಕಾರಿಗಳಿಗೆ ಮನವಿ ಪತ್ರ ನೀಡಿ ಅಗ್ರಹಿಸಿದರು.

ಈ ಸಂದರ್ಭದಲ್ಲಿ ರೈತರಾದ ಜೆ.ಎಸ್.ಮಂಜುನಾಥ ಮಾತನಾಡಿ

ನಮ್ಮ ಜಾಗಟಗೇರಿ ಗ್ರಾಮದಲ್ಲಿ ಅತಿಹೆಚ್ಚು ಕೃಷಿಕರು ಜಮೀನನ್ನೇ ನಂಬಿಕೊಂಡು ಜೀವನ ನಡೆಸುತ್ತಿದ್ದೇವೆ.

ಜಮೀನುಗಳು ಪಂಪ್ ಸೆಟ್ ಸೌಲಭ್ಯ ಹೊಂದಿದ್ದು ಇದಕ್ಕೆ ವಿದ್ಯುತ್. ಅತ್ಯವಶ್ಯಕವಾಗಿ ಬೇಕಾಗಿರುತ್ತದೆ. ಇತ್ತೀಚೆಗೆ ವಿದ್ಯುತ್ ಸರಬರಾಜು ವ್ಯತ್ಯಯ ಆಗುತ್ತಿರುವುದರಿಂದ ರಾತ್ರಿಯ ವೇಳೆ ಜಮೀನುಗಳಿಗೆ ನೀರು ಹಾಯಿಸಲು ಪಂಪ್ ಸೆಟ್ ಗೆ ವಿದ್ಯುತ್ ಇಲ್ಲದ ಪರಿಣಾಮ ತುಂಬಾ ತೊಂದರೆಯಾಗುತ್ತಿದೆ.

ರಾತ್ರಿಯ ವೇಳೆ ಕತ್ತಲಲ್ಲಿ ಹಾವು, ಚೇಳು,

ಇನ್ನಿತರೆ ವಿಷಕಾರಿ ಜಂತುಗಳಿಂದ ದುಷ್ಪರಿಣಾಮ ಉಂಟಾಗುವ ಸಂಭವವಿರುತ್ತದೆ. ಈಗ ಬದಲಾವಣೆ ಮಾಡಿರುವುದನ್ನು ರದ್ದುಮಾಡಿ,

ಈ ಹಿಂದೆ ನಮ್ಮ ಜಮೀನುಗಳಿಗೆ ಬೆಳಿಗ್ಗೆ 4 ಗಂಟೆಯಿಂದ 11 ಗಂಟೆಯವರೆಗೆ. ಬೆಳಿಗ್ಗೆ 11 ಗಂಟೆಯಿಂದ

ಸಾಯಂಕಾಲ 6 ಗಂಟೆವರೆಗೆ ವಿದ್ಯುತ್ ಸರಬರಾಜು ಮಾಡಿಕೊಡಬೇಕು ಇಲ್ಲದಿದ್ದರೆ ಮಂದಿನ ದಿನಗಳಲ್ಲಿ ರೈತರು ತಮ್ಮ ಜೆಸ್ಕಾಂ ಕಚೇರಿ ಮುಂದೆ ಧರಣಿ ಕುಳಿತು ಕೊಳ್ಳಬೇಕಾಗುತ್ತದೆ.

ಹಾಗು ರೈತರು ತಮ್ಮ ತಮ್ಮ ಜಮೀನನಲ್ಲಿ ರಾತ್ರಿ ಸಮಯದಲ್ಲಿ ಬೆಳೆಗಳಿಗೆ ನೀರು ಕಟ್ಟುವ ಸಂದರ್ಭದಲ್ಲಿ ರೈತರಿಗೆ ವಿಷಕಾರಿ ಜಂತುಗಳಿಂದ ರೈತರು ಯಾರಾದರು ಜಮೀನಿನಲ್ಲಿ ಸಾವನ್ನಪ್ಪಿದರೆ ಜೆಸ್ಕಾಂ ಇಲಾಖೆ ಸಂಬಂದಪಟ್ಟ ಅಧಿಕಾರಿಗಳು ನೇರಹೊಣೆ ಎಂದು ರೈತರು ಆಗ್ರಹಿಸಿದರು.

ಈ ಸಂದರ್ಭದಲ್ಲಿ ರೈತರಾದ ಸಿ.ಶಿವಪ್ರಸಾದ. ಟಿ.ಮಂಜುನಾಥ. ಸಿ ರಾಜಪ್ಪ.

ಎಮ್ ಸಿದ್ದಪ್ಪ. ಟಿ ಅಂಜಿನಪ್ಪ. ಎಮ್ ಸಿದ್ದೇಶಿ ಹಾಗೂ ಜಾಗಟಗೇರಿ ರೈತರು ಇದ್ದರು.

# ರಾಜ್ಯಮಟ್ಟದ ಯುವಜನೋತ್ಸವ

• **ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ:**

ಕರ್ನಾಟಕ ಸರ್ಕಾರದಡಿಯಲ್ಲಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ನೇತೃತ್ವದಲ್ಲಿ ಮೊಟ್ಟ ಮೊದಲ ಬಾರಿಗೆ ತಾಂತ್ರಿಕ ಶಿಕ್ಷಣ ಇಲಾಖೆಯ ಸಂಯೋಜನದಡಿಯಲ್ಲಿ ನಡೆಯಲಿರುವ ರಾಷ್ಟ್ರೀಯ

ಸೇವಾ ಯೋಜನೆಯ ಪ್ರಸಕ್ತ ಸಾಲಿನ ರಾಜ್ಯಮಟ್ಟದ ಯುವಜನೋತ್ಸವ ಬಾಗಲಕೋಟೆಯ ಬಸವೇಶ್ವರ ವೀರಶೈವ ವಿದ್ಯಾವರ್ಧಕ ಸಂಘದ ಅಂಗ ಸಂಸ್ಥೆ ಬಿ.ವ್ಹಿ.ವ್ಹಿ.ಎಸ್ ಪಾಲಿಟೆಕ್ನಿಕ್ ಆಯ್ಕೆಯಾಗಿದ್ದು, ಯುವಜನೋತ್ಸವ ಫೆಬ್ರವರಿ 10 ರಿಂದ 14 ರವರೆಗೆ ಪಾಲಿಟೆಕ್ನಿಕ್ ಸಂಸ್ಥೆಯಲ್ಲಿ ಹಮ್ಮಿಕೊಳ್ಳಲಾಗಿದೆ.

ಯುವ ಜನೋತ್ಸವವನ್ನು ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆಯ ಆಯುಕ್ತ ಮಂಜುಶ್ರೀ ಎನ್ ಉದ್ಘಾಟಿಸುವರು. ಲೋಕಸಭಾ ಸದಸ್ಯ ಪಿ.ಸಿ.ಗದ್ದಿಗೌಡರ ಮೆರವಣಿಗೆಗೆ ಚಾಲನೆ ನೀಡುವರು. ರಾಜ್ಯಸಭಾ ಸದಸ್ಯ ನಾರಾಯಣಸಾ ಭಾಂಡಗೆ, ವಿಧಾನ ಪರಿಷತ್ ಸದಸ್ಯ ಹನಂಂತ ನಿರಾಣಿ, ಬ.ವಿ.ವ.ಸಂಘದ ಕಾರ್ಯಾಧ್ಯಕ್ಷ

ಡಾ.ವೀರಣ್ಣ ಚರಂತಿಮಠ ಹಾಗೂ ರಾಜ್ಯ ಎನ್.ಎಸ್.ಎಸ್. ಅಧಿಕಾರಿ ಡಾ.ಪ್ರತಾಪ ಲಿಂಗಯ್ಯ, ಭಾರತ ಸರಕಾರದ ಎನ. ಎಸ್.ಎಸ್ ಪ್ರಾಂತ್ರಿಯ ನಿರ್ದೇಶಕ ಗಿರಿಧರ ಉಪಾಧ್ಯಯ, ಭಾರತ ಸರಕಾರದ

ಎನ.ಎಸ್.ಎಸ್ ಯುವ ಅಧಿಕಾರಿ ಸಂತೋಷ, ಡಾ.ಗುರುಪ್ರಸಾದ ಹೂಗಾರ, ಗೌರವ ಕಾರ್ಯದರ್ಶಿ ಮಹೇಶ ಅಥಣಿ, ಸಂಘದ ಆಡಳಿತಾಧಿಕಾರಿ ವಿ.ಆರ್.ಶಿರೋಳ ಅತಿಥಿಗಳಾಗಿ ಆಗಮಿಸಲಿದ್ದಾರೆ.

ಈ ಯುವಜನೋತ್ಸವದಲ್ಲಿ ರಾಜ್ಯದ ವಿವಿಧ ವಿಶ್ವವಿದ್ಯಾಲಯಗಳಿಂದ ಆಯ್ದ 115 ವಿದ್ಯಾರ್ಥಿಗಳು ಮತ್ತು 10 ಜನ ಎನ್.ಎಸ್.ಎಸ್ ಅಧಿಕಾರಿಗಳು ಭಾಗವಹಿಸಲಿದ್ದಾರೆ ಎಂದು ಪಾಲಿಟೆಕ್ನಿಕ್ ಸಂಸ್ಥೆಯ ಪ್ರಾಚಾರ್ಯ ಎಸ್.ಎಸ್. ಹುಬ್ಬಳ್ಳಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ದಕ್ಷಿಣ ಆಫ್ರಿಕಾ ಪ್ರವಾಸೋದ್ಯಮಕ್ಕೆ ಭಾರತವು ಆದ್ಯತೆಮಾರುಕಟ್ಟೆ

### ಮಿಸ್ ಕರ್ಮಾರ್ಕರ್




"ದಕ್ಷಿಣ ಆಫ್ರಿಕಾ ಪ್ರವಾಸೋದ್ಯಮಕ್ಕೆ ಭಾರತವು ಆದ್ಯತೆಯುಳ್ಳ ಬೆಳವಣಿಗೆ ಮಾರುಕಟ್ಟೆಯಾಗಿಯೇ ಮುಂದುವರಿದಿದ್ದು ಇದು ಕುಟುಂಬ ಪ್ರಯಾಣ, ಅನುಭವಿಕ ರಜೆಗಳು ಹಾಗೂ ಪ್ರೀಮಿಯಮ್ ಪ್ರಯಾಣದಾದ್ಯಂತ ಪ್ರಬಲ ಆಸಕ್ತಿಯಿಂದ ಮುನ್ನಡೆಸಲ್ಪಟ್ಟಿದೆ. ಇಂದಿನ ಭಾರತೀಯ ಪ್ರಯಾಣಿಕರೂ ಕೂಡ, ತಮ್ಮ ಟ್ರಿಪ್‌ಗಳನ್ನು ಸಂಶೋಧಿಸಿ ವೈಯಕ್ತೀಕೃತಗೊಳಿಸಲು ಎಐ–ಶಕ್ತಿಯ ಸಾಧನಗಳನ್ನು ಬಳಸಿ, ವಿಭಿನ್ನವಾಗಿ ಯೋಜಿಸುತ್ತಾರೆ, ಹೆಚ್ಚು ಪದೇ ಪದೇ ಪ್ರಯಾಣಿಸುತ್ತಾರೆ ಮತ್ತು ಸಾಂಪ್ರದಾಯಿಕ ನೆಚ್ಚಿನ ಗಮ್ಯಗಳಾಚೆಗಿನ ಗಮ್ಯಗಳನ್ನು ಶೋಧಿಸಲು ಪ್ರಬಲ ಇಚ್ಛೆಯನ್ನು ವ್ಯಕ್ತಪಡಿಸಿದ್ದಾರೆ. ಪ್ರಯಾಣಿಕ ನಡವಳಿಕೆಯಲ್ಲಿನ ಈ ಬದಲಾವಣೆಯು ಹೆಚ್ಚು ಆತ್ಮವಿಶ್ವಾಸವುಳ್ಳ ಮತ್ತು ಕುತೂಹಲಭರಿತ ಪ್ರೇಕ್ಷಕವರ್ಗವನ್ನು ಪ್ರತಿಫಲಿಸುತ್ತದೆ ಮತ್ತು ಇದು ದಕ್ಷಿಣ ಆಫ್ರಿಕಾದಾದ್ಯಂತ ಹೆಚ್ಚು ಪ್ರಸಿದ್ಧವಲ್ಲದ ಪ್ರದೇಶಗಳನ್ನು ಮತ್ತು ಅನುಭವಗಳನ್ನು ಎತ್ತಿತೋರಿಸಲು ಹೊಸ ಅವಕಾಶಗಳನ್ನು ಕಲ್ಪಿಸುತ್ತದೆ." ಎಂದು ಹೇಳಿದರು.

## ಪ್ರಾಣಿ ಸಂಗ್ರಹಾಲಯ ಪ್ರಿಯಾಂಕ್ ಖರ್ಗೆ ಕನಸು ನನಸು

ಮಲ್ಲಮ್ಮ ನುಡಿ ವಾರ್ತೆ
ಕಲಬುರಗಿ:

ಸಚಿವ ಪ್ರಿಯಾಂಕ್ ಖರ್ಗೆಯವರು ವಿಶೇಷ ಆಸಕ್ತಿ ವಹಿಸಿದ್ದರ ಪರಿಣಾಮ ಬೃಹತ್ ಪ್ರಮಾಣದ ಹೊಸ ಪ್ರಾಣಿ ಸಂಗ್ರಹಾಲಯ ತಲೆ ಎತ್ತಿ ನಿಂತಿದೆ. ಅದು ಬರೋಬ್ಬರಿ 43 ಎಕರೆ ಪ್ರದೇಶದಲ್ಲಿ.

ನಿಜ! ಚಿತ್ತಾಪುರ ತಾಲ್ಲೂಕು ವ್ಯಾಪ್ತಿಯ ಮಾಡಬೂಳ ಕ್ರಾಸ್ ಬಳಿ (ವಿಮಾನ ನಿಲ್ದಾಣ ರಸ್ತೆ) ಬೃಹದಾಕಾರದ ಪ್ರಾಣಿ ಸಂಗ್ರಹಾಲಯ ನಿರ್ಮಾಣವಾಗಿ ಇನ್ನೇನು ಕೆಲವೇ ದಿನಗಳಲ್ಲಿ ಉದ್ಘಾಟನೆಯಾಗಲಿದೆ.





> ಕೇಂದ್ರೀಯ ಮೃಗಾಲಯ ಹಾಗೂ ಕರ್ನಾಟಕ ಮೃಗಾಲಯ ಪ್ರಾಧಿಕಾರದ ನಿಯಮಾವಳಿಯಂತೆ ಪ್ರಾಣಿ–ಪಕ್ಷಿಗಳಿಗೆ ಪೂರಕ ವ್ಯವಸ್ಥೆ ಮಾಡಲಾಗಿದ್ದು, ಮುಕ್ತಾಯದ ಹಂತದಲ್ಲಿದೆ.
>
> **–ಸುಮೀತ್ ಪಾಟೀಲ,**
> ಕಾರ್ಯನಿರ್ವಾಹಕ ನಿರ್ದೇಶಕ, ಅರಣ್ಯ ಇಲಾಖೆ, ಕಲಬುರಗಿ

**ಯಾವ್ಯಾವ ಪ್ರಾಣಿ–ಪಕ್ಷಿಗಳಿರಲಿವೆ**

**ಹಳೆಯ ಪ್ರಾಣಿ ಸಂಗ್ರಹಾಲಯದಲ್ಲಿರುವ 12 ಪ್ರಾಣಿ, ಪಕ್ಷಿಗಳ ಜೊತೆ ಬಂಗಾಳ ಹುಲಿ, ಸಿಂಹ, ಕರಡಿ, ನರಿ, ಮಂಗ, ಲಂಗೂರ್, ಕೃಷ್ಣಮೃಗ, ಚುಕ್ಕೆ ಜಿಂಕೆ, ಜೌಗು ಮೊಸಳೆ, ಫೆರಿಯಾಲ್, ಭಾರತೀಯ ಆಮೆ, ಕಪ್ಪು ಗರುಡ, ನವಿಲು ಇತ್ಯಾದಿಗಳನ್ನು ಇಲ್ಲಿಗೆ ತರಲಾಗುತ್ತಿದೆ ಎಂದು ವಲಯ ಅರಣ್ಯಾಧಿಕಾರಿ ನಾಗೇಶ ತಿಳಿಸಿದರು.**

ಕರ್ನಾಟಕ ಸರ್ಕಾರದ ಮೃಗಾಲಯ ಪ್ರಾಧಿಕಾರ, ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಅಭಿವೃದ್ಧಿ ಮಂಡಳಿ ಅನುದಾನದಲ್ಲಿ (ಅಂದಾಜು 34 ಕೋಟಿ ರೂ. ವೆಚ್ಚ) 42 ಎಕರೆ 32 ಗುಂಟೆ ಪ್ರದೇಶದಲ್ಲಿ ಹೊಸ ಪ್ರಾಣಿ ಸಂಗ್ರಹಾಲಯ ನಿರ್ಮಾಣ ಕಾರ್ಯ ಭರದಿಂದ ಸಾಗಿದೆ.

ಪ್ರಾಣಿ, ಪಕ್ಷಿಗಳ ವೀಕ್ಷಣೆಗೆಗಾಗಿ ಇಲ್ಲಿಗೆ ಭೇಟಿ ನೀಡುವ ಪ್ರವಾಸಿಗರಿಗಾಗಿ ಸುಮಾರು ಒಂದುವರೆ ಎಕರೆ ಸುತ್ತವರಿದ ವಿಜಿಟರ್ ಮಾರ್ಗ ಸಿದ್ಧಗೊಂಡಿದೆ. ಬಂಡೆಯ ಮೇಲೆ ಆಯಾ ಪ್ರಾಣಿ ಪಕ್ಷಿಗಳ ಚಿತ್ರ ಬಿಡಿಸಲಾಗಿದೆ. ಮೇಲಾಗಿ ಅವುಗಳ ಕುರಿತಾದ ಸಣ್ಣ ಮಾಹಿತಿ ಫಲಕ ಕೂಡ ಅಳವಡಿಸಲಾಗಿದೆ.

ನಿಂತು ನೋಡಲು ತಂಗುದಾಣ, ಪ್ರವೇಶ ದ್ವಾರದಲ್ಲಿ ಉದ್ಯಾನ ನಿರ್ಮಾಣ, ಮ್ಯೂಜಿಕ್ ಫೌಂಟೇನ್ ಕೂಡ ನಿರ್ಮಿಸಲಾಗುತ್ತಿದೆ. ಬರ–ಬಿಸಿಲ ನಾಡಿನ ಕಲಬುರಗಿಯ ಜನರಿಗೆ ಅದರಲ್ಲೂ ಮಕ್ಕಳ ಮನೋರಂಜನೆ ಹಾಗೂ ಸುತ್ತಾಟ–ಕ್ಕೆ ಇದು ಹೇಳಿ ಮಾಡಿಸಿದಂಥ ಪ್ರೇಕ್ಷಣೀಯ ಸ್ಥಳವಾಗಲಿದೆ. 43 ಎಕರೆ ಪ್ರದೇಶದಲ್ಲಿರುವ ಎಲ್ಲ ಪ್ರಾಣಿಗಳನ್ನು ನೋಡಿಕೊಂಡು ಬರಲು ಒಂದು ಸುತ್ತು 2 ಕಿ.ಮಿ ಆಗುತ್ತದೆ. ಇದಕ್ಕಾಗಿ ಬ್ಯಾಟರಿ ಚಾಲಿತ ವಾಹನದ ವ್ಯವಸ್ಥೆ ಮಾಡಲಾಗಿದೆ. ಈ ವಾಹನದಲ್ಲಿ 8 ಜನರು ಒಟ್ಟಿಗೆ ಪ್ರಯಾಣಿಸಬಹುದು. ಉಳಿದಂತೆ ಶೌಚಾಲಯ, ಕುಡಿಯುವ ನೀರಿನ ವ್ಯವಸ್ಥೆ, ಪಶು ಆಸ್ಪತ್ರೆ ಸೌಲಭ್ಯ ಕೂಡ ಇರಲಿದೆ.

## ವೀರಭದ್ರೇಶ್ವರ ಜಾತ್ರಾ ಮಹೋತ್ಸವದ ಅಂಗವಾಗಿ ಪ್ರೀಮಿಯರ್ ಲೀಗ್ ಉದ್ಘಾಟನೆ

- **ಮಲ್ಲಮ್ಮ ನುಡಿ ವಾರ್ತೆ ಕುಕನೂರ**

ಪ್ರತಿ ಪಂದ್ಯಾವಳಿಗಳಲ್ಲಿ ಆಟಗಾರರು ಕ್ರೀಡಾ ಮನೋಭಾವನೆಯಿಂದ ಪಾಲ್ಗೊಳ್ಳಬೇಕು ಹಾಗೂ ತೀರ್ಪುಗಾರರ ನಿರ್ಣಯಕ್ಕೆ ತಲೆಬಾಗಬೇಕು ಎಂದು ಕೃಷಿ ಉತ್ಪನ್ನ ಮಾರುಕಟ್ಟೆಯ ಮಾಜಿ ಸದಸ್ಯ ಹಂಚಾಳಪ್ಪ ತಳವಾರ ಹೇಳಿದರು.

ತಾಲೂಕಿನ ಮಂಡಲಗಿರಿ ಗ್ರಾಮದಲ್ಲಿ ಶ್ರೀ ವೀರಭದ್ರೇಶ್ವರ ಜಾತ್ರಾ ಮಹೋತ್ಸವದ ಅಂಗವಾಗಿ ಫ್ರೆಂಡ್ಸ್ ಕ್ರಿಕೆಟ್ ಕ್ಲಬ್ ವತಿಯಿಂದ ಆಯೋಜಿಸಿದ್ದ ಏಳನೇ ವರ್ಷದ ಮಂಡಲಗಿರಿ ಪ್ರೀಮಿಯಂ ಲೀಗ್ ಪಂದ್ಯಾವಳಿಗಳ ಉದ್ಘಾಟನಾ



ಕಾರ್ಯಕ್ರಮವನ್ನು ಉದ್ದೇಶಿಸಿ ಹಂಚಾಳಪ್ಪ ಮಾತನಾಡುತ್ತ ಮಾತನಾಡುತ್ತ ನಮ್ಮ ಇತಿಹಾಸ ಪುಟಗಳಿಂದ ಕ್ರೀಡೆಗಳು ಆಯೋಜನೆ ಮಾಡುತ್ತಾ ಬಂದಿದ್ದು ಇದಕ್ಕೆ ಗೌರವ ಮತ್ತು ಪಾಂಡವರ ಪಗಡೆ ಆಟ ಉತ್ತಮ ಉದಾಹರಣೆಯಾಗಿದೆ. ಜಗತ್ತಿನಲ್ಲಿ ಅತಿ ಹೆಚ್ಚು ಜನರಿಂದ ಆಡಲ್ಪಡುವ ಕ್ರೀಡೆ ಕ್ರಿಕೆಟ್ ಆಗಿದ್ದು ಇದಕ್ಕೆ ಸಂಬಂಧಿಸಿದಂತೆ ದೇಶ ಹಾಗೂ ರಾಜ್ಯದಲ್ಲಿ ಹಲವಾರು ಪ್ರೀಮಿಯರ್ ಲೀಗ್ಗಳನ್ನು ಆಯೋಜನೆ ಮಾಡಲಾಗಿದೆ ಆಟಗಾರರು ತೀರ್ಪುಗಾರರ ನಿರ್ಣಯಕ್ಕೆ ಬದ್ಧರಾಗಿ ಕ್ರೀಡೆಯಲ್ಲಿ ಪಾಲ್ಗೊಳ್ಳಿ ಎಂದರು.

ಕರ್ನಾಟಕ ದಳಪತಿಗಳ ಸಂಘದ ರಾಜ್ಯಾಧ್ಯಕ್ಷ ಶರಣಬಸವನಗೌಡ ಹೊರಪೇಟೆ ಮಾತನಾಡುತ್ತಾ ದೈಹಿಕ ಹಾಗೂ ಮಾನಸಿಕ ವೃದ್ಧಿಗಾಗಿ ಕ್ರೀಡೆ ಅವಶ್ಯಕವಾಗಿದ್ದು ಕ್ರೀಡೆಯಿಂದ ಪಾಲ್ಗೊಳ್ಳುವುದರಿಂದ ಶಿಸ್ತು ಬದ್ಧ ಜೀವನ ಅಳವಡಿಸಿಕೊಳ್ಳಲು ಸಾಧ್ಯವಾಗಿದ್ದು ಸೋಲೇ ಗೆಲುವಿನ ಮಾರ್ಗವಾದ್ದರಿಂದ ಕ್ರೀಡಾ ಮನೋಭಾವದಿಂದ ಪಂದ್ಯಾವಳಿಗಳಲ್ಲಿ ಪಾಲ್ಗೊಳ್ಳಬೇಕೆಂದು ಕ್ರೀಡಾಪಟುಗಳಿಗೆ ಕರೆ ನೀಡಿದರು.

ವೇದಿಕೆಯಲ್ಲಿ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಶ್ರೀಧರ ಹೊಸಮನಿ ಹಾಗೂ ಯುವ ವಕೀಲ ಜಗದೀಶ ತೊಂಡಿಹಾಳ ಹಾಗೂ ಗ್ರಾಮ ಪಂಚಾಯತಿ ಮಾಜಿ ಉಪಾಧ್ಯಕ್ಷೆ ಬಸಮ್ಮ ಸಸಿಮಠ, ಅಭಿವೃದ್ಧಿ ಅಧಿಕಾರಿ ಸುರೇಶ್ ಕಾವಳೆ ಮಾತನಾಡಿದರು.

ಈ ವೇಳೆಯಲ್ಲಿ ಪ್ರಮುಖರಾದ ಸಿದ್ದನಗೌಡ ದ್ಯಾಮನಗೌಡ್ರು, ಲಿಂಗರಾಜಗೌಡ ಪೇಟೆ, ಹನುಮಂತಪ್ಪ ಉಪ್ಪಾರ, ಶರಣಪ್ಪ ಕಟಬಿ, ಚಂದ್ರಕಾಂತ್ ಗುಡಿಮನಿ, ಕೃಷ್ಣಪ್ಪ ಪಡಿಗೇರ್, ರಫಿ ಮಂಡಲಗಿರಿ, ಶಿವಬಸಯ್ಯ ಹಾಗೂ ಈ ಮಿತ್ರರು ಪಾಲ್ಗೊಂಡಿದ್ದರು

## ಬೇಡಿದ ವರ ನೀಡುವ

### ಫಾತ್ಮಪುರ್ ಮೈಸಮ್ಮ ದೇವಿ.

(ರಾಜಕುಮಾರ್ ಆರ್. ಹಡಪದ)

- **ಮಲ್ಲಮ್ಮ ನುಡಿ ವಾರ್ತೆ,ಚಿಟಗುಪ್ಪ:**

ನಂಬಿದವರಿಗೆ ಬೇಡಿದ ವರ ನೀಡುವ ಶ್ರೀ ಮೈಸಮ್ಮ ದೇವಿಯ ಮಹಿಮೆ ಅಪಾರವಾಗಿದೆ. ದೇವಿಯ ಮೇಲೆ ಭಕ್ತಿ, ಶ್ರದ್ಧೆ ಇಟ್ಟು ಪೂಜಿಸಿದರೆ ಅವರ ಇಷ್ಟಾರ್ಥಗಳು ಸಿದ್ಧಿಯಾಗುತ್ತವೆ ಹಾಗೂ ಭಕ್ತರಿಗೆ ಸ್ಫೂರ್ತಿ ಸೆಲೆಯಾಗಿ ಗ್ರಾಮದ ಹೃದಯ ಭಾಗದಲ್ಲಿ ನೆಲೆಸಿರುವ ಫಾತ್ಮಪುರಿನ ಶ್ರಿ– ಮೈಸಮ್ಮಾ ದೇವಿಯ ದೇವಸ್ಥಾನದಲ್ಲಿ ಸೋಮವಾರ ಸಂಜೆ ದೀಪದ ಬೆಳಕಿನಲ್ಲಿ ನೂರಾರು ಮಹಿಳೆಯರು, ಯುವಕರು, ಹಿರಿಯರು



ಮಣ್ಣಿನ ಹಣತೆಯಲ್ಲಿ ದೀಪ ಹಚ್ಚುವ ಮೂಲಕ ಭಕ್ತಿ ಸಮರ್ಪಿಸಿದರು. ನಂತರ ಕಮಿಟಿ ಅಧ್ಯಕ್ಷ ಮಹಾರುದ್ರಯ್ಯ ಸ್ವಾಮಿ ಮಾತನಾಡಿ, ಪ್ರತಿ ಮೂರು ವರ್ಷಕೊಮ್ಮೆ ಆಚರಿಸುವಂತೆ ಈ ವರ್ಷವು ಕೂಡ, ಗ್ರಾಮ ದೇವತೆ ಶ್ರೀ ಮೈಸಮ್ಮಾ ದೇವಿಯ ಜಾತ್ರಾ ಮಹೋತ್ಸವ ಸಡಗರ ಸಂಭ್ರಮದಿಂದ ಆಚರಿಸಸುತ್ತಿದ್ದೇವೆ, ದಿಪೋತ್ಸವ ವೈಭವದಿಂದ ಜರುಗಿದೆ. ಇಂದು ಮಂಗಳವಾರದಂದು ಮುಂಜಾನೆ ಊರ ದೇವರ ನೈವಿದ್ಯ. ಸಾಯಂಕಾಲ 4ಗಂಟೆಗೆ ಶ್ರೀ ಮೈಸಮ್ಮಾ ದೇವಿಯ ಪೂಜೆ, ಸಾಯಂಕಾಲ 7ಘಂಟೆಗೆ ಬಸವನ ಬಾಗೇವಾಡಿಯ ಮೌಲಾಸಾಬ್ ಮಕನಾಂದರ್ ಹಾಗೂ ಅವ್ವ ಬ್ಯಾಲಾಳಿ ಇವರಿಂದ ಅದ್ದೂರಿ ಗಿಗಿ ಪದ ಕಾರ್ಯಕ್ರಮ ಜರುಗಲಿವೆ. ಹೆಚ್ಚಿನ ಸಂಖ್ಯೆಯಲ್ಲಿ ಸದ್ಭಕ್ತಾದಿಗಳು ದೇವಿಯ ಜಾತ್ರಾ ಮಹೋತ್ಸವದಲ್ಲಿ ಆಗಮಿಸಿ ದೇವಿಯ ದರ್ಶನ ಪಡೆದು ಪುನಿತರಾಗಬೇಕೆಂದು ತಿಳಿಸಿದ್ದಾರೆ. ಈ ಸಂದರ್ಭದಲ್ಲಿ ಪಂಚ ಕಮಿಟಿಯ ಸರ್ವ ಸದಸ್ಯರು ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.

## ವಸತಿ ನಿಲಯ ಕಟ್ಟಡ ಕಾಮಗಾರಿಗೆ 5 ಕೋಟಿ ಅನುದಾನ



ಮಲ್ಮನ ನುಡಿ ವಾರ್ತೆ ಭಾಲ್ಕಿ,:

ಜಿಲ್ಲಾ ಉಸ್ತುವಾರಿ ಸಚಿವರಾದ ಈಶ್ವರ ಖಂಡ್ರೆ ಅವರ ಸುಮಾರು –5 ಕೋಟಿ ಅನುದಾನದಡಿ, ಮೆಟ್ರಿಕ್ ನಂತರ ವೃತ್ತಿಪರ ಕೋರ್ಸ್‌ಗಳನ್ನು ಅಭ್ಯಾಸ ಮಾಡುವ ಬಾಲಕರಿಗಾಗಿ ನಿರ್ಮಿಸಲಿರುವ ವಸತಿ ನಿಲಯ ಕಟ್ಟಡ ಕಾಮಗಾರಿಗೆ ಇಂದು ಭಾಲ್ಕಿ ನಗರದಲ್ಲಿ ಶಂಕುಸ್ಥಾಪನೆ ನೆರವೇರಿತು.

ಈ ಸಂದರ್ಭದಲ್ಲಿ ಮಾತನಾಡಿದ ಸಚಿವರು, ಗ್ರಾಮೀಣ ಹಾಗೂ ಆರ್ಥಿಕವಾಗಿ ಹಿಂದುಳಿದ ಕುಟುಂಬಗಳ ವಿದ್ಯಾರ್ಥಿಗಳು ಉತ್ತಮ ವಸತಿ ಸೌಲಭ್ಯಗಳೊಂದಿಗೆ ವಿದ್ಯಾಭ್ಯಾಸ ಮಾಡಲು ಈ ವಸತಿ ನಿಲಯವು ಬಹು ಉಪಯುಕ್ತವಾಗಲಿದೆ ಎಂದು ತಿಳಿಸಿದರು. ವಿದ್ಯಾರ್ಥಿಗಳು ಶಿಕ್ಷಣದಲ್ಲಿ ಮುಂದುವರೆಯಲು ಮೂಲಭೂತ ಸೌಲಭ್ಯ ಒದಗಿಸುವುದು ಸರ್ಕಾರದ ಆದ್ಯತೆಯಾಗಿದ್ದು, ಈ ಯೋಜನೆ ಭಾಲ್ಕಿ ಹಾಗೂ ಸುತ್ತಮುತ್ತಲಿನ ಪ್ರದೇಶದ ನೂರಾರು ವಿದ್ಯಾರ್ಥಿಗಳಿಗೆ ನೆರವಾಗಲಿದೆ ಎಂದು ಹೇಳಿದರು.ಈ ವಸತಿ ನಿಲಯ ನಿರ್ಮಾಣದಿಂದ ವಿದ್ಯಾರ್ಥಿಗಳಿಗೆ ಸುರಕ್ಷಿತ ವಸತಿ, ಅನುಕೂಲಕರ ಅಧ್ಯಯನ ವಾತಾವರಣ ಹಾಗೂ ಶಿಕ್ಷಣದ ನಿರಂತರತೆಗೆ ಅಗತ್ಯವಾದ ಬೆಂಬಲ ದೊರೆಯಲಿದೆ.ಕಾರ್ಯಕ್ರಮದಲ್ಲಿ ಸ್ಥಳೀಯ ಜನಪ್ರತಿನಿಧಿಗಳು, ಅಧಿಕಾರಿಗಳು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.

## ಟ್ರಾಫಿಕ್ ಜಾಮ್ ನಲ್ಲಿ ಸಿಲುಕಿ ಪರದಾಡಿದ ಅಂಬುಲೆನ್ಸ್




- **ಮಲ್ಮನ ನುಡಿ ವಾರ್ತೆ ಮಸ್ಕಿ :**

ಪಟ್ಟಣದ ರಾಷ್ಟ್ರೀಯ ಹೆದ್ದಾರಿ 150(ಎ) ಮಾರ್ಗದಲ್ಲಿ ವಾಹನ ದಟ್ಟಣೆ ಹೆಚ್ಚಿದ್ದು,ಸಾರ್ವಜನಿಕರಿಗೆ ತಲೆನೋವಾಗಿ ಪರಿಣಮಿಸಿದೆ.

ಹಳೆಯ ಬಸ್ ನಿಲ್ದಾಣದ ಬಳಿ ಸಾರಿಗೆ ಸಂಸ್ಥೆಯ ವಾಹನಗಳು ಸೇರಿದಂತೆ ಪ್ರತಿನಿತ್ಯ ನೂರಾರು ವಾಹನಗಳು ನಿಲುಗಡೆಯಾಗುತ್ತಿವೆ. ಬೀದಿ ಬದಿ ವ್ಯಾಪಾರಸ್ತರ ಬಳಿ ಖರೀದಿಗೆ ಬರುವ ಗ್ರಾಹಕರು,ಹಾಗೂ ಚಿಕ್ಕನ ಅಂಗಡಿ ಗೆ ಬರುವ ಗ್ರಾಹಕರು ,ರಸ್ತೆಯಲ್ಲಿಯೇ ಗಂಟೆಗಟ್ಟಲೇ ತಮ್ಮ ವಾಹನ ನಿಲ್ಲಿಸಿ ಹೋಗುವುದರಿಂದ ವಾಹನ ದಟ್ಟಣೆ ಹೆಚ್ಚುತ್ತಿದೆ.

**ಇದರಿಂದಾಗಿ ಇಂದು**

ರೋಗಿಯನ್ನ ಕರೆದುಕೊಂಡು ತುರ್ತು ಹೊರಟಿದ್ದ ಆಂಬುಲೆನ್ಸ್ ಕೂಡ ಟ್ರಾಫಿಕ್ ಜಾಮ್ ನಲ್ಲಿ ಸಿಲುಕಿಕೊಂಡು ಮುಂದೆ ಸಾಗಲು ದಾರಿ ಇಲ್ಲದೆ ಪರದಾಡಿದೆ.ಸೈರನ್ ಹಾಕಿಕೊಂಡರು ಕೂಡ ರಸ್ತೆ ಬದಿ ಗಾಡಿ ನಿಂತ ಪರಿಣಾಮ ಇತರೆ ವಾಹನಗಳು ದಾರಿ ಬಿಡೋದಕ್ಕೆ ಪ್ರಯತ್ನಸಿದರೂ ಕೂಡ ಅಡ್ಡದಿಡ್ಡಿ ನಿಂತಿರುವ ವಾಹನಗಳಿಂದಾಗಿ

ಆಂಬುಲೆನ್ಸ್ ವಾಹನ ಹೋಗುವುದಕ್ಕೆ ಹರಸಾಹಸ ಪಟ್ಟಿತ್ತು. ಮಸ್ಕಿ ಪಟ್ಟಣದಲ್ಲಿ ಈ ಸಮಸ್ಯೆ ಇಂದು ನಿನ್ನೆಯದಲ್ಲ,ಪ್ರತಿ ಬಾರಿ ವಾರದ ಸಂತೆ,ಹಬ್ಬ ಹರಿದಿನಗಳಲ್ಲಿ ನಡೆಯುವಾಗಲು ಈ ಸಮಸ್ಯೆ ಇದ್ದದ್ದೆ. ಇದಕ್ಕೆ ಸಂಬಂಧಿಸಿದ ಅಧಿಕಾರಿಗಳುಯಾವುದೇ ಕ್ರಮ ಕೈಗೊಳ್ಳದಿರುವುದು ನಿಜಕ್ಕೂ ದುರಂತ.ಈ ಸಮಸ್ಯೆ ಬಗ್ಗೆ ಯಾರೂ ತಲೆಕೆಡಿಸಿಕೊಳ್ಳುವದಿಲ್ಲ. ಮಸ್ಕಿಯಲ್ಲಿ ಇಂಥ ಸಮಸ್ಯೆಗೆ ಮುಕ್ತಿ ಸಿಗೋದು ಯಾವಾಗ? ಎಂದು ಸಾರ್ವಜನಿಕರ ಪ್ರಶ್ನೆಯಾಗಿದೆ.?

## ರೈತರ ಹೆಚ್ಚಿನ ಅನುಕೂಲಕ್ಕಾಗಿ 105 ಟ್ಯಾಕ್ಟರ್ ಬಿಡುಗಡೆ

ಮಲ್ಮನ ನುಡಿ ವಾರ್ತೆ ಬಳ್ಳಾರಿ :

ಸಿಎನ್‌ಎಚ್ ಕಂಪನಿಯ ಬ್ರ್ಯಾಂಡ್ ಆದ ನ್ಯೂ ಹಾಲೆಂಡ್ ಕಂಪನಿಯು ಕರ್ನಾಟಕದಲ್ಲಿ ತನ್ನ ಹೆಚ್ಚಿನ ಹಾರ್ಸ್ ಪವರ್ ಟ್ರ್ಯಾಕ್ಟರ್ ಸರಣಿಯ ಎಚ್‌ವಿಎಸಿ ಕ್ಯಾಬಿನ್ ಹೊಂದಿರುವ ವರ್ಕ್ ಮಾಸ್ಟರ್ 105 ಟ್ರ್ಯಾಕ್ಟರ್ ಅನ್ನು ಬಿಡುಗಡೆ ಮಾಡಿದೆ.

ಈ ಹೊಸ ಮಾದರಿಯು ನ್ಯೂ ಹಾಲೆಂಡ್‌ನ 106 ಎಚ್ ಪಿ ಟ್ರ್ಯಾಕ್ಟರ್ ಶ್ರೇಣಿಗೆ ಎಲ್ಲಾ ಹವಾಮಾನಗಳಲ್ಲೂ ಚಾಲಕರಿಗೆ ಆರಾಮದಾಯಕ ಅನುಭವ ಮತ್ತು ಸುಧಾರಿತ ಕಾರ್ಯಕ್ಷಮತೆ ಒದಗಿಸುವ ಸಾಮರ್ಥ್ಯವನ್ನು ಪರಿಚಯಿಸಿದೆ.

ಈ ಹೊಸ ಟ್ರ್ಯಾಕ್ಟರ್ ಕಠಿಣ ಕೃಷಿ ಪರಿಸ್ಥಿತಿಗಳಲ್ಲಿ ಅನುಕೂಲತೆ, ಬಾಳಿಕೆ ಮತ್ತು ಉತ್ಪಾದಕತೆ ಒದಗಿಸಲಿದ್ದು, ಈ ವಿಭಾಗದಲ್ಲಿ ಹೊಸ ಮಾನದಂಡಗಳನ್ನು ಸ್ಥಾಪಿಸಲಿದೆ.

ಈ ಕುರಿತು ಮಾತನಾಡಿದ ಸಿಎನ್ ಎಚ್ ಇಂಡಿಯಾದ ಅಧ್ಯಕ್ಷ, ವ್ಯವಸ್ಥಾಪಕ ನಿರ್ದೇಶಕ ನಾರೀಂದರ್ ಮಿತ್ತಲ್, ಕರ್ನಾಟಕವು ಕ್ರಿಯಾತ್ಮಕ ಮತ್ತು ವೇಗವಾಗಿ ಬೆಳೆಯುತ್ತಿರುವ ಕೃಷಿ ಮಾರುಕಟ್ಟೆಗಳಲ್ಲಿ ಒಂದಾಗಿದೆ. ಇಲ್ಲಿ ವಿವಿಧ ಬೆಳೆಗಳು ಮತ್ತು ಕೃಷಿ ಪದ್ಧತಿಗಳಲ್ಲಿ ಸುಧಾರಿತ ಯಾಂತ್ರೀಕರಣದ ಬಳಕೆ ಹೆಚ್ಚುತ್ತಿದೆ. ಕರ್ನಾಟಕವು ನಮ್ಮ ಭಾರತದ ಬೆಳವಣಿಗೆಯ ಕಾರ್ಯತಂತ್ರದ ಪ್ರಮುಖ ಮಾರುಕಟ್ಟೆಯೂ ಹೌದು. ಈ ಮಾರುಕಟ್ಟೆಗೆ ಎಚ್‌ವಿಎಸಿ ಕ್ಯಾಬಿನ್ ಹೊಂದಿರುವ ವರ್ಕ್ ಮಾಸ್ಟರ್ 105 ಅನ್ನು ಪರಿಚಯಿಸಲಾಗುತ್ತಿದೆ . ರಾಜ್ಯದಲ್ಲಿ ಹೆಚ್ಚುತ್ತಿರುವ ಉತ್ಪಾದಕತೆ ಮತ್ತು ಚಾಲಕರ ಸೌಕರ್ಯದ ಬೇಡಿಕೆಯನ್ನು ಪೂರೈಸುವ ನಿಟ್ಟಿನಲ್ಲಿ ಒಂದು ಪ್ರಮುಖ ಹೆಜ್ಜೆಯಾಗಿದೆ.



ನ್ಯೂ ಹಾಲೆಂಡ್ ಜಾಗತಿಕವಾಗಿ ಸಾಬೀತಾದ ತಂತ್ರಜ್ಞಾನವನ್ನು ಭಾರತೀಯ ಅಗತ್ಯಗಳಿಗೆ ಅನುಗುಣವಾಗಿ ಒದಗಿಸುತ್ತಿದೆ. ಇದರಿಂದ ರೈತರು ತಮ್ಮ ಕೃಷಿ ಚಟುವಟಿಕೆಯಲ್ಲಿ ದಕ್ಷತೆಯನ್ನು ಸುಧಾರಿಸಿಕೊಳ್ಳಲು ಮತ್ತು ಹೆಚ್ಚು ಆರಾಮದಾಯಕ ಹಾಗೂ ಸುಸ್ಥಿರವಾಗಿಸಲು ಸಹಾಯ ಮಾಡುತ್ತದೆ ಎಂದು ಹೇಳಿದರು.

## ಚಿರತೆ ಬಂತು ಚಿರತೆ



**ಮಲ್ಲಮ್ಮ ನುಡಿ ವಾರ್ತೆ ಕುಷ್ಟಗಿ :**

ಕಳೆದ ಮೂರು ನಾಲ್ಕು ದಿನಗಳಿಂದ ಗ್ರಾಮದ ಸುತ್ತಮುತ್ತ ಕೃಷಿ ಚಟುವಟಿಕೆಗಳಲ್ಲಿ ತೊಡಗಿರುವ ರೈತರಿಗೆ ಚಿರತೆ ಕಾಣಿಸಿಕೊಂಡಿದ್ದು ಗ್ರಾಮಸ್ಥರಲ್ಲಿ ಆತಂಕವನ್ನುಂಟು ಮಾಡಿದೆ.

ತಾಲೂಕಿನ ದೋಟಿಹಾಳ ಗ್ರಾಮದ ಸುತ್ತಮುತ್ತಲಿನ ಹಲವಾರು ಹಳ್ಳಿಗಳಲ್ಲಿ ಕೃಷಿ ಚಟುವಟಿಕೆಗಳಲ್ಲಿ ತೊಡಗಿರುವ ರೈತ ವರ್ಗದ ಜನರಿಗೆ ಚಿರತೆ ಪ್ರತ್ಯಕ್ಷವಾಗಿರುತ್ತದೆ. ಹಾಗೂ ಮುದೇನೂರು ಗ್ರಾಮದ ಸಮುದಾಯ ಆರೋಗ್ಯ ಕೇಂದ್ರದ ಹಿಂದೆ ಚಿರತೆ ಕಂಡಿ–ರೋದಾಗಿ ಸ್ಥಳೀಯರು ಹೇಳುತ್ತಿದ್ದು ನಂತರದ ದಿನದಲ್ಲಿ ಶಿವನಗುತ್ತಿ ಗ್ರಾಮದಲ್ಲಿಯೂ ಸಹ ಚಿರತೆ ಪ್ರತ್ಯಕ್ಷವಾಗಿರುವ ಮಾತುಗಳು ಕೇಳಿ ಬರುತ್ತಿದ್ದು ಇದರಿಂದ ಗ್ರಾಮಸ್ಥರು ಹಾಗೂ ಕೃಷಿ ಚಟುವಟಿಕೆಗಳಿಗೆ ಜಮೀನಿಗೆ ತೆರಳುವ ರೈತರಲ್ಲಿ ಆತಂಕ ಮನೆ ಮಾಡಿದೆ. ದೋಟಿಹಾಳ ಹಾಗೂ ಮುದೇನೂರು ಭಾಗದ ಗ್ರಾಮಗಳಲ್ಲಿ ಚಿರತೆ ಪ್ರತ್ಯಕ್ಷವಾಗಿರುವ ಮಾತುಕತೆಗಳು ಹೆಚ್ಚಾಗಿರುವುದು ಸಹಜವಾಗಿ ಕಂಡು ಬರುತ್ತಿದ್ದು ಈ ಭಾಗಗಳಲ್ಲಿ ಕೃಷಿ ಚಟುವಟಿಕೆಗೆಂದು ರೈತರು ಜಮೀನಿಗೆ ತೆರಳಲು ಸಂದೇಶ ಹಾಕುತ್ತಿದ್ದು ಅದರ ಜೊತೆಗೆ ದ್ವಿಚಕ್ರ ವಾಹನ ಸವಾರರು ಸಹ ತಮ್ಮ ಜೀವವನ್ನು ಕೈಯಲ್ಲಿ ಹಿಡಿದು ಪ್ರಯಾಣ ಮಾಡುವ ಪರಿಸ್ಥಿತಿ ಎದುರಾಗಿರುತ್ತದೆ. ಇಲ್ಲಿಯ ತನಕ ಚಿರತೆ ಪ್ರತ್ಯಕ್ಷವಾಗಿರುವ ಮಾತುಗಳು ಕೇಳಿ ಬರುತ್ತಿವೆ ಹೊರತಾಗಿ ಯಾವುದೇ ಫೋಟೋ ಹಾಗೂ ಚಿರತೆಯ ಹೆಜ್ಜೆ ಗುರುತುಗಳು ಪತ್ತೆಯಾಗಿರುವುದಿಲ್ಲ ಆದ್ದರಿಂದ ಅರಣ್ಯ ಇಲಾಖೆಯ ಸಿಬ್ಬಂದಿಗಳು ತಕ್ಷಣ ಸೂಕ್ತ ಕ್ರಮ ಕೈಗೊಂಡು ರಕ್ಷಣೆ ಒದಗಿಸಬೇಕು ಎಂಬುದು ಇಲ್ಲಿನ ಸಾರ್ವಜನಿಕರ ಒತ್ತಾಯವಾಗಿದೆ.

## ರಾಷ್ಟ್ರಕ್ಕೆ - ಹಿಂದೂ ಧರ್ಮಕ್ಕೆ ಕುತ್ತು ಬಂದಾಗ ಸಿಡಿದೇಳಬೇಕು:ಪ್ರಸನ್ನ

- **ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು:**

ರಾಷ್ಟಕ್ಕೆ,ಹಾಗೂ ಧರ್ಮಕ್ಕೆ ಕುತ್ತು ಬಂದಾಗ ಸಿಡಿದೇಳಬೇಕು ರಾಷ್ಟ್ರಕ್ಕೋಸ್ಕರ ಹಿಂದೂಗಳು ಬದುಕಬೇಕು,ಪ್ರಪಂಚದಲ್ಲಿ ಶಾಂತಿ ನೆಲೆಸಿರುವುದು ಸನಾತನ ಧರ್ಮದಿಂದ ಮಾತ್ರ ಇದು ಅಕ್ಷರಸಃ ಸತ್ಯ,ಈ ಮಣ್ಣು ಒಂದು ವಸ್ತುವಲ್ಲ ಅದು ಸರ್ವಸ್ವವನ್ನು ನಮಗೆ ಕೊಡುತ್ತಿರುವ ಭೂಮಿ, ನಮ್ಮ ಭಾರತಮಾತೆ ಅದಕ್ಕಾಗಿಯೇ ನಾವು ಪ್ರಕೃತಿಯನ್ನು ಪೂಜಿಸುತ್ತಿರುವುದು ಎಂದು ಅರ್ ಎಸ್ ಎಸ್ ಬೆಂಗಳೂರು ಉತ್ತರ ಕಾರ್ಯಕಾರಿಣಿ ಸದಸ್ಯ,ಸಾಮಾಜಿಕ ಕಾರ್ಯಕರ್ತ ಪ್ರಸನ್ನ ಹೇಳಿದರು.

ಹಿಂದೂ ಸಮಾಜೋತ್ಸವ ಒಂದು ಧಾರ್ಮಿಕ ಉತ್ಸವವಲ್ಲ, ಅದು ಸಮಾಜದ ಏಕತೆ ಸಂಸ್ಕೃತಿಯ ಉಳಿವು ಮತ್ತು ಧಾರ್ಮಿಕ ಜಾಗೃತಿಯ ಪ್ರತೀಕ, ಇಂತಹ ಕಾರ್ಯಕ್ರಮಗಳು ಸಮಾಜದಲ್ಲಿ ಧಾರ್ಮಿಕ ಭಾವನೆ ಶಾಂತಿ ಮತ್ತು ಸಹಕಾರವನ್ನು ಬೆಳಸುತ್ತದೆ ಎಂದು ಶ್ರೀಮದ್ ಭಗವದ್ಗೀತೆ ಮತ್ತು ಭಾಗವತ ಭೋಧಕರಾದ ಗಿರಿಧರ ದಾಸ ಹೇಳಿದರು.



ಪ್ರಪಂಚದ ಅತಿದೊಡ್ಡ ಬಹುಸಂಖ್ಯಾತ ಹಿಂದೂ ರಾಷ್ಟ ನಮ್ಮದು ಎಂದು ಎದೆತಟ್ಟಿ ಹೇಳಬಹುದು .ಪ್ರಪಂಚದಲ್ಲಿ ನಮ್ಮ ಭಾರತ ದೇಶವನ್ನು ವಿಶ್ವ ಗುರು ಎನ್ನುತ್ತಾರೆ,ಅದರೆ ಕಿಡಿಗೇಡಿಗಳು ಅಪ್ರಪಚಾರ ಮಾಡುತ್ತಿದ್ದಾರೆ.ಅದಕ್ಕೆಲ್ಲಾ ತಲೆಕೆಡಿಸಿಕೊಳ್ಳಬಾರದು ಹಿಂದೂಗಳ ಧರ್ಮದ ರಕ್ಷಣೆಗೆ ಟೊಂಕ ಕಟ್ಟಿ ನಿಲ್ಲಬೇಕು ಎಂದು ಶಾಸಕ ಎಸ್ ಮುನಿರಾಜು ಹೇಳಿದರು.

ರಾಷ್ಟ್ರೀಯ ಸ್ವಯಂಸೇವಕ ಸಂಘದ ಶತಮಾನೋತ್ಸವದ ಅಂಗವಾಗಿ ರಾಜಗೋಪಾಲನಗರ, ಹೆಗ್ಗನಹಳ್ಳಿ,ಮತ್ತು ಶುಶೃತಿ ನಗರ, ಹಿಂದೂ ಸಮಾಜೋತ್ಸವ ಆಯೋಜನಾ ಸಮಿತಿಯು ಪೀಣ್ಯ ಎರಡನೇ ಹಂತದ ಶ್ರೀರಾಮಮಂದಿರ ಆಟದ ಮೈದಾನದಲ್ಲಿ ಬೃಹತ್ 'ಹಿಂದೂ ಸಮಾಜೋತ್ಸವ'ವನ್ನು ಅತ್ಯಂತ ವಿಜೃಂಭಣೆಯಿಂದ ಆಯೋಜಿಸಿತ್ತು.

ರಾಜಗೋಪಾಲನಗರ ಅಂಜನೇಯ ದೇವಸ್ಥಾನದಿಂದ ಆರಂಭವಾದ ಭವ್ಯ ಶೋಭಯಾತ್ರೆಗೆ ಭಾಜಪ ಮುಖಂಡ ಬಿ.ಎನ್. ದೀನೇಶ್ ಹಾಗೂ ಸವಿತಾ ದೀನೇಶ್ ಹಾಗೂ ನೇತೃತ್ವ ಹಾಗೂ ಹೆಗ್ಗನಹಳ್ಳಿ ಅಂಜನೇಯ ದೇವಸ್ಥಾನದಿಂದ ಮಾಜಿಪಾಲಿಕೆ ಸದಸ್ಯ ಹೆಚ್ ಎನ್ ಗಂಗಾಧರ್ ನೇತೃತ್ವ, ಹಾಗೂ ಜಿಕೆಡಬ್ಲ್ಯೂಲೇಔಟ್ ಗಣೇಶ ದೇವಸ್ಥಾನದಿಂದ ಭಾಜಪ ಮುಖಂಡ ಅರ್ ಸಿ ಹರೀಶ್, ಶುಶೃತಿನಗರ ಅಣ್ಣಮ್ಮ ದೇವಸ್ಥಾನದಿಂದ ಸತ್ಯ ಬಾಲು, ಹಿಂದೂ ಪರ ಕಾರ್ಯಕರ್ತ ಸಂಜಯ್ ಜೈನ್ ನೇತೃತ್ವದಲ್ಲಿ ಸಾವಿರಾರು ಯುವ ಕಾರ್ಯಕರ್ತರು,ಮೆರವಣಿಗೆಯುದ್ದಕ್ಕೂ ಅಯೋಧ್ಯೆ ಶ್ರೀರಾಮ ಮಂದಿರದ ಸ್ತಬ್ಧಚಿತ್ರಗಳು, ಬಾಲ ಶ್ರೀರಾಮನ ವೇಷಧಾರಿ ಮಕ್ಕಳು, ಚಂಡೆ ವಾದನ ಹಾಗೂ ನಾಸಿಕ್ ಬ್ಯಾಂಡ್ ತಂಡಗಳು ಸಾರ್ವಜನಿಕರ ಗಮನ ಸೆಳೆಸವು ಹಾಗೂ ಹಿಂದೂ ಕಾರ್ಯಕರ್ತರು ಧರಿಸಿದ್ದ ಕೇಸರಿ ಶಲ್ಯ ಹಾಗೂ ಕೇಸರಿ ಪೇಟ,ನೋಡಲು ಅದ್ಭುತ ಮತ್ತು ಆಕರ್ಷಣೆಯಾಗಿತ್ತು. ಈ ಸಂದರ್ಭದಲ್ಲಿ ವಕೀಲೆ ಚೇತನ ಚಿತ್ರದುರ್ಗ, ರಾಜಗೋಪಾಲನಗರ ವಾರ್ಡ್ ಬಿಜಿಪಿ ಅಧ್ಯಕ್ಷ ( ಮಂಗಳ ವಾಟರ್) ನರಸಿಂಹಮೂರ್ತಿ,ಮಾಜಿ ಅಧ್ಯಕ್ಷ ನಾಗೇಶ್, ಮುಖಂಡರಾದ ಕೆಂಪಣ್ಣ,ಸಂತೋಷ್ ನಾಯ್ಡು,ಮಂಜುಳಾ ಮಲ್ಲೇಶ್, ಶ್ರೀ ಸಂಗನಬಸಪ್ಪ ಬಿರಾದಾರ್, ವಿಜಯ್, ಜೆಡಿಎಸ್ ನ ಹಿಂದುಳಿದ ವರ್ಗಗಳ ಆದ್ಯಕ್ಷ ಶಿವಣ್ಣ ,ಮತ್ತಿತರರು ಭಾಗವಹಿಸಿದ್ದರು.

Printed, Published and Owned by: Ramesh Reddy and Printed at Metropolitan Media Company Ltd., Plot No.224, in Sy.No.41/2, 41/B & 42, Kapnoor 2nd stage, Industrial Area, Kalburagi-585104. Published at Sy.No. 466, TMC No. 22-405, First Floor, Gada Complex, Opp. Inspection Bungalow, Humnabad-585330.Editor: Ramesh Reddy, Office Ph. No: +91 9449732000.

PRGI NO. 120927
(RNINO:KARKAN/2011/48371)